
ಕಲ್ಯಾಣ ಕಿರಣ

ಮಾರ್ಚ್-2009

ಬೆಲೆ- ರೂ.10/-



ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರು

CPMG/KA/BGW-50/2009-2011 WPP(W)-17R.NO.



ಪೂಜ್ಯ ಮಾತಾಜಿಯವರು ಇದುವರೆಗೆ ನೂರಾರು ಗ್ರಂಥಗಳನ್ನು ರಚಿಸಿದ್ದಾರೆ, 1970 ರಿಂದ ಇಲ್ಲಿಯವರೆಗೆ ಕಲ್ಯಾಣಕಿರಣವೆಂಬ ಮಾಸಪತ್ರಿಕೆಗೆ ಪ್ರಧಾನ ಸಂಪಾದಕರಾಗಿದ್ದಾರೆ. ಅವರ ಬರಹಗಳಲ್ಲಿ ಅದ್ಭುತವೇನೆಂದರೆ 1967ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಎಂ.ಎ.(M.A.Philosophy) ತತ್ವಜ್ಞಾನ ಓದುತ್ತಿರುವಾಗ ಬಸವ ತತ್ವ ದರ್ಶನ ಎಂಬ 900 ಪುಟಗಳ ಗ್ರಂಥವನ್ನು ರಚಿಸಿದರು. ಇವರೆ ರಚಿಸಿದ ಈ ಗ್ರಂಥವು ಇವರಿಗೇ ಪಠ್ಯಪುಸ್ತಕವಾಗಿ ಬಂದಿದ್ದು ಪೂಜ್ಯ ಮಾತಾಜಿಯವರ ಸಾಹಿತ್ಯದ ಕೀರ್ತಿಗೆ ಕಳಸವಾಗಿದೆ.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-39 ಬಸವ ಶಕೆ-875 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-3 ಮಾರ್ಚ್-2009 ವಾರ್ಷಿಕ ಚಂದಾ 100/- ರೂ.

ಅಲ್ಲಮ ಪ್ರಭು ಜೋಗುಳ

ಜೋ ಜೋ ಜೋ ಕಂದ ಅಲ್ಲಮ ಪ್ರಭು ಚಂದ್ರ
ಜೋ ಮುತ್ತಿನಾನಂದ ವದನಾರವಿಂದ । ಜೋ ಜೋ । ॥ ಪ ॥

ಭವ ತಿಮಿರ ತೊಲಗಿಸಲು ಭುವಿಗೆ ಮತ್ತವತರಿಸಿ
ಸುವಿವೇಕಯುತ ಮಾತೆ ಸುಜ್ಞಾನಿ ಗರ್ಭದಿ
ಶಿವ ಜ್ಞಾನಿ ನಿರಹಂಕಾರನ ಕಣ್ಮಣಿ ನೀನಾಗಿ
ಛವಿವೊಡೆದು ಬೆಳಗಿದೆ ಬಾಲ ತರಣಿಯ ತೆರದಿ। । ಜೋ ಜೋ ।

ಚೈತ್ರ ಮಾಸದ ಸೊಬಗು ಕುಡಿವೊಡೆದು ನಗುತಿರೆ
ಮಿತ್ರ ಕಳಕಂಠವು ಮಾಮರದಿ ಹಾಡುತಿರೆ। ವಿ
ಚಿತ್ರ ವರ್ಣವ ತಳೆವುತ್ತ ಧರೆ ಇರೆ
ಚೈತ್ರ ಯುಗಾದಿ ದಿನದಂದು ಇಳೆಗಿಳಿದೆ ॥ । ಜೋ ಜೋ ।

ತಾಯ್ಮಡಿಲ ಸುಮವಾಗಿ ತೊಟ್ಟಿಲ ಚಿಟ್ಟಾಗಿ
ಮಾಯೆಯ ಗೆಲಿದು ವಿರತಿಯ ವಿಭುವಾಗಿ
ಗುರು ಅನುಮಿಷರಿಂದ ದೃಷ್ಟಿ ದೀಕ್ಷೆಯ ಪಡೆದು
ಸ್ವಯ ಜ್ಞಾನಿ ತಾನಾಗಿ ಮೆರೆದಂಥ ಯೋಗಿ ॥ । ಜೋ ಜೋ ।

ಅನುಭವ ಮಂಟಪದ ಆಧಾರ ತಾನಾಗಿ
ಅನುಭಾವ ನಿಧಿಯಾಗಿ ಅಮರ ಕೀರುತಿಯಾಗಿ
ಶೂನ್ಯ ಪೀಠವ ಏರ್ದ ಪ್ರಥಮ ಜಗದ್ಗುರುವಾಗಿ
ಮಾನ್ಯತೆಯ ಪಡೆದ ಜಂಗಮ ಜ್ಯೋತಿ ॥ । ಜೋ ಜೋ ।

ಹರಿವ ನದಿಯೊಲು ಚರಿಸಿ ಬಸವ ಧರ್ಮವ ಬೆಳೆಸಿ
ಕರುಣಾಕರ ನಿಲುವಿನಿಂ ಭಕ್ತರ ಉದ್ಧರಿಸಿ
ವಚನ ವಾಙ್ಮಯ ನಿಧಿಯ ವೃದ್ಧಿಸಿದ ಜ್ಞಾನಿ
ಸಚ್ಚಿದಾನಂದನ ನೆಚ್ಚಿನ ಕಂದಾ ॥ । ಜೋ ಜೋ ।

- ಮಾತಾಜಿ

ಹೊನ್ನಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಮಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಹೆಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ
ಲಿಂಗದೇವರಲ್ಲಿ ಎನಗಾರು ಇಲ್ಲವೆಂದು
ಬೋಳಾದನೆನ್ನ ಪ್ರಭುದೇವರು

- ವಿಶ್ವಗುರು ಬಸವಣ್ಣನವರು

★ ಕಲ್ಯಾಣ ಕಿರಣ ★

ಕಿರಣಗನ್ನಡಿ



ವೈರಾಗ್ಯ ಯೋಗದ ಮೇಲೆ ನಿಂದು 63 ವರ್ಷ ಪೂರೈಸಿ 64ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿಯವರಿಗೆ ಸಮಸ್ತ ರಾಷ್ಟ್ರೀಯ ಬಸವ ದಳದ ವತಿಯಿಂದ ಹಾರ್ದಿಕವಾದ ಶುಭಾಶಯಗಳು.

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9620058492, 9481249857

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಕಾರಣಿಕ ಜ್ಯೋತಿ ಮಾತಾಜಿ

ಮಾತಾಜಿ ನೀವು ಜ್ಞಾನದ ನೆಲೆ
ನಿಮ್ಮ ದಿವ್ಯ ನುಡಿ ನಮಗೆ ಸ್ಫೂರ್ತಿಯ ಸೆಲೆ ||ಪ||
ನಿಮ್ಮ ಅವತಾರಕ್ಕೆ ಮುಖ್ಯಕಾರಣವು
ಆಗಿದೆ ಬಸವ ಧರ್ಮ ಪುನರುತ್ಥಾನವು ||ಅ. ಪ.||

ಈ ಜಗವು ಅಜ್ಞಾನದಿ ತುಂಬಿರೆ
ಜನರ ಮೂಢತ್ವವು ಮೆರೆದಿರೆ
ಬಸವ ಜ್ಞಾನ ಜ್ಯೋತಿಯು ಮಂಕಾಗಿರೆ
ವಚನ ವಾಙ್ಮಯವು ಕುಡಿಗಟ್ಟಿರೆ ||1||

ಅಜ್ಞಾನ ಕತ್ತಲೆಯ ಕಳೆಯಲು
ನವ ಜಾಗೃತಿ ಕಹಳೆ ಮೊಳಗಲು
ಬಸವ ಜ್ಞಾನ ಪ್ರಭೆಯ ಬೆಳಗಿಸಲು
ವಚನ ವಾಙ್ಮಯವ ಪಸರಿಸಲು ||2||

ಗುರು ಬಸವ ತಂದೆಯು ನಿಮ್ಮನು
ಧರ್ಮ ಪ್ರಚಾರಕೆ ನೀಡಲು ಪ್ರೇರಣೆಯನು
ನೀವು ನಿಮ್ಮತನವನೆಲ್ಲವ ನೀಗಿ
ಆದಿರಿ ತಾವು ಮಹಾತ್ಯಾಗಿ ||3||

ಗುರು ಲಿಂಗಾನಂದರ ಕರಸಂಜಾತೆಯಾಗಿ
ಲಿಂಗದೇವನ ಹೃದಯ ಸಾಮ್ರಾಜ್ಞಿಯಾಗಿ
ಗುರುಬಸವ ತಂದೆಯ ಆತ್ಮಜೆಯಾಗಿ
ಇರುವಿರಿ ನೀವು ಬಸವಾತ್ಮಜೆಯಾಗಿ ||4||

- ಶರಣೆ. ವಿಜಯಾ ರಾಜು, ಭದ್ರಾವತಿ

ಪೂಜ್ಯ ಮಾತಾಜಿಯವರೆಂದರೆ ಉಕ್ಕಿ ಬರುವುದು ಅಭಿಮಾನ
ಮಾಡಲೇಬೇಕೆನಿಸುವುದು ಈ ತಾಯಿಯ ಗುಣಗಾನ
ಕೇಳಲೇ ಬೇಕೆನಿಸುವುದು ಅವರ ಪ್ರವಚನ
ಲಿಂಗದೇವರ ಪ್ರೀತಿಯ ಕಂದ ಅಪ್ಪ ಬಸವಣ್ಣ
ಅಪ್ಪ ಬಸವಣ್ಣನವರ ಪ್ರೀತಿಯ ಮಗಳಿವರು ಕೇಳಿರಣ್ಣಾ
ಈ ಅವಿನಾಭಾವ ಸಂಬಂಧವ ನೆನೆದಡೆ ತುಂಬಿ ಬರುವುದೆನ್ನ ಹೃನ್ಮನ.

-ಪ್ರಿಯಾಂಕ ಬದಾಮಿ, ಹುಬ್ಬಳ್ಳಿ

Oh Mataji, You taught us
Not to pray to lessen our burden
But to strengthen our back
With a power of faith
Not to worship without
A hand of service, here a humble attempt
to repay your debt

- A.K.Sharma, Mysore

ಸಂಪಾದಕೀಯ-1

ಬಸವ ಜಯಂತಿ - ಅರ್ಥಪೂರ್ಣ ಆಚರಣೆ

ವೈಶಾಖ ಮಾಸದ ಅಕ್ಷಯ ತೃತೀಯಾದಂದು ಬರುವ ಬಸವ ಜಯಂತಿಯು ನಮ್ಮ ಪರಮ ಪವಿತ್ರವಾದ ಹಬ್ಬ ಪ್ರತಿ ಧರ್ಮದ ಇತಿಹಾಸದಲ್ಲಿ ಆ ಧರ್ಮದ ಸ್ಥಾಪಕರು ಹುಟ್ಟಿದ ದಿನ, ಅವರು ಹೊಸ ಧರ್ಮ ಕೊಟ್ಟ ದಿನ ಮತ್ತು ಅವರು ಮರ್ತ್ಯದ ಬಾಳ್ವೆಗೆ ಮಂಗಳ ಹಾಡಿ ಕ್ರಿಯಾ ವಿಶ್ರಾಂತಿಯನ್ನೈದಿದ ಲಿಂಗೈಕ್ಯ ದಿನ ಬಹಳ ಮಹತ್ವಪೂರ್ಣ . ಅವತಾರ ಮಾಡಿದ ದಿನವನ್ನು ಸಡಗರ ಸಂಭ್ರಮಗಳಿಂದ ನಾವು ಆಚರಿಸಬೇಕು.

ಈ ಬಾರಿಯ ಶರಣ ಮೇಳದ ಚಿಂತನ ಗೋಷ್ಠಿಯಲ್ಲಿ ಬಸವ ಜಯಂತಿಯನ್ನು ಹೇಗೆ ಆಚರಿಸಬೇಕೆಂದು ವಿಸ್ತೃತವಾಗಿ ಚರ್ಚಿಸಿ, ನಿರ್ಣಯಕ್ಕೆ ಬರಲಾಯಿತು. ಕ್ರೈಸ್ತರು ಕ್ರಿಸ್‌ಮಸ್ ಅನ್ನು ಎಷ್ಟು ಉಲ್ಲಾಸ, ಸಂಭ್ರಮ, ಸಡಗರಗಳಿಂದ ಆಚರಿಸುತ್ತಾರೋ ಹಾಗೆ ನಾವು ಬಸವ ಜಯಂತಿಯನ್ನು ಆಚರಿಸಬೇಕು.

1. ಗ್ರೀಟಿಂಗ್ಸ್ ಶುಭಾಶಯ ಪತ್ರಗಳನ್ನು ಬಂಧು, ಮಿತ್ರ, ಪರಿಚಿತರಿಗೆ ಮೊದಲೇ ಕಳಿಸಬೇಕು. ಶ್ರದ್ಧೆ- ಭಕ್ತಿ ಇಲ್ಲದವರಿಗೆ ಬಸವ ಜಯಂತಿ ಇಂಥ ದಿನ ಇದೆ ಎಂದು ನೆನಪಿಸಲು ಇದು ಸಹಾಯಕ -ವಾಗುವುದು. ತುಟ್ಟಿಯಾದ ಶುಭಾಶಯ ಪತ್ರವನ್ನೇ ಕಳಿಸಬೇಕೆಂದೇನೂ ಇಲ್ಲ. ಪ್ರೀತಿಯಿಂದ ಒಂದು ಕಾರ್ಡಿನಲ್ಲಿ ಸ್ವಂತ ಹಸ್ತಾಕ್ಷರದಿಂದ ಬರೆದು ಕಳಿಸಿದರೂ ಸಾಕು.

2. ಬಸವ ಜಯಂತಿಯಂದು ಹೊಸ ಬಟ್ಟೆ ತೊಡುವ ಸಂಪ್ರದಾಯ ಬೆಳೆಸಬೇಕು. ಬಿಳಿಯ ಬಟ್ಟೆಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಇವು ಒಂದು ವರ್ಷಪೂರ್ತಿ ವಿಶೇಷ ಕಾರ್ಯ ಕ್ರಮಗಳಿಗೆ ಉಪಯೋಗವಾಗಬೇಕು. ಶರಣ ಮೇಳ, ಕಲ್ಯಾಣ ಪರ್ವ, ಬಸವ ಜಯಂತಿ ಮೆರವಣಿಗೆ, ಸಮ್ಮೇಳನಗಳ ಪ್ರಾರ್ಥನಾ ಸಭೆ ಮತ್ತು ದೇವವಾರದ ಪ್ರಾರ್ಥನಾ ಸಭೆಗಳಲ್ಲಿ ಇವನ್ನು ತೊಡಬೇಕು. ಒಂದು ಬಸವ ಜಯಂತಿಯಿಂದ ಇನ್ನೊಂದು ಬಸವ ಜಯಂತಿವರೆಗಿನ ಮಧ್ಯದಲ್ಲಿ ಈ ಬಿಳಿಯ ಬಟ್ಟೆಗಳು ಉಪಯೋಗವಾಗುತ್ತವೆ.

ತಾವಷ್ಟೇ ಬಟ್ಟೆ ಹೊಲಿಸಿಕೊಳ್ಳುವುದಲ್ಲದೆ ಬಡ - ಬಗ್ಗರಿಗೆ ಆರ್ಥಿಕ ಶಕ್ತ್ಯಾನುಸಾರ ಬಟ್ಟೆಗಳನ್ನು ದಾನ ಮಾಡಬೇಕು. ಕನಿಷ್ಠಪಕ್ಷ ಸ್ಕಾರ್ಫ್ (ಬಸವ ರಕ್ಷೆ)ಗಳನ್ನಾದರೂ ಖರೀದಿಸಿ, ದಾನ ಮಾಡಬೇಕು. ವರ್ಷದಲ್ಲಿ ಒಮ್ಮೆಯಾದರೂ ಈ ರೀತಿ ಬಟ್ಟೆಗಳನ್ನು ದಾನ ಮಾಡಬೇಕು. ಬಸವ ಜಯಂತಿಯು ಇದಕ್ಕೆ ಸೂಕ್ತ ಸಮಯ.

ವಿ.ಸೂ: ಬಂಧು -ಬಳಗ, ಮಕ್ಕಳು -ಮೊಮ್ಮಕ್ಕಳಿಗೆ ಕೊಡುವುದು ಉಡುಗೊರೆ ಎನಿಸಿ ಕೊಳ್ಳುವುದು; ವಸ್ತ್ರ ದಾನ (ದಾಸೋಹ) ಎನ್ನಿಸಿಕೊಳ್ಳದು.

ಪ್ರೇರಣೆ : ನಾನು ವಸ್ತ್ರವನುಡುವುದಕ್ಕೆ ಮುನ್ನವೇ ಜಂಗಮಕ್ಕೆ ವಸ್ತ್ರವನ್ನುಡಿಸುವೆ. (-ಚನ್ನಬಸವಣ್ಣನವರು)

ಗುರು - ಜಂಗಮಕ್ಕೆ, ಆರ್ಥಿಕ ಅಶಕ್ತ (ಇಲ್ಲದವರು)ರಿಗೆ ಕೊಟ್ಟಾಗ ಅದು ದಾಸೋಹವಾಗುವುದು.

3. ಬಸವ ಜಯಂತಿಯಂದು ಸುಪ್ರಭಾತದಲ್ಲಿಯೇ ತಮ್ಮ ಮನೆಗಳ ಮೇಲೆ ಷಟ್ಕೋನ -ಇಷ್ಟಲಿಂಗ ಸಹಿತ ಚಿತ್ರವಿರುವ ಬಸವ ಧ್ವಜವನ್ನು ಹಾರಿಸಬೇಕು. ಕೆಲವು ನಿಷ್ಠಾವಂತ ಶರಣರು ವರ್ಷದಲ್ಲಿ 12 ತಿಂಗಳೂ ತಮ್ಮ ಮನೆಯ ಮೇಲೆ ಧ್ವಜ ಹಾರಿಸಿರುತ್ತಾರೆ. ಇಂಥವರು ಬಸವ ಜಯಂತಿಯ ದಿವಸ ಹೊಸ ಧ್ವಜವನ್ನು ಹಾರಿಸಬೇಕು.

4. ಮನೆಯ ಬಾಗಿಲಿಗೆ ತಳಿರು -ತೋರಣ ಕಟ್ಟಬೇಕು.

5. ಸುಪ್ರಭಾತದಲ್ಲಿಯೇ ಬಸವೇಶ್ವರ ಪೂಜಾವ್ರತ ಮಾಡಬೇಕು. ನಡುಮನೆಯಲ್ಲಿ ಮಂಟಪ ಕಟ್ಟಿ ಗುರು ಬಸವ ಭಾವಚಿತ್ರವಿಟ್ಟು ಬಸವೇಶ್ವರ ಪೂಜಾವ್ರತ ಮಾಡಿ, ಒಂದು ತೊಟ್ಟಿಲಿಟ್ಟು ಬಸವ ಧರೆಗೆ ಬಂದಾ ಎಂದು ಜೋಗುಳ ಹಾಡಿ, ತೂಗಿ, ಆರತಿ ಮಾಡಬೇಕು. ನಂತರ ಪೂಜೆಯ ಪ್ರಸಾದವನ್ನು ಸ್ವೀಕರಿಸಬೇಕು.

6. ಉಪಾಹಾರ ಮುಗಿಸಿ ಸಾರ್ವಜನಿಕವಾಗಿ ನಡೆಯುವ ಉತ್ಸವದಲ್ಲಿ ಭಾಗಿಗಳಾಗ ಬೇಕು. ಬಸವ ಮಂಟಪಗಳು, ಬಸವೇಶ್ವರ ಗುಡಿಗಳು, ಅಥವಾ ಸಮುದಾಯ ಭವನಗಳಲ್ಲಿ ಎಲ್ಲರೂ ಸೇರಿ ಬಸವ ಜಯಂತಿ ಆಚರಿಸಬೇಕು. ಸಾಮೂಹಿಕವಾಗಿ ತೊಟ್ಟಿಲಿಟ್ಟು ಗುರು ಬಸವಣ್ಣನವರ ಅವತಾರವನ್ನು ಸಂಭ್ರಮಿಸಬೇಕು. ಮಕ್ಕಳಿರದಿದ್ದವರು ವಿಶೇಷವಾಗಿ ಪೂಜೆ ಸಲ್ಲಿಸಿ, ಸಂಕಲ್ಪ ಮಾಡಿ, ತೊಟ್ಟಿಲು ತೂಗಬೇಕು.

7. ಗುರು ಬಸವ ಭಾವಚಿತ್ರ (ಅಥವಾ ಮೂರ್ತಿಯ) ಮೆರವಣಿಗೆಯಲ್ಲಿ ಭಕ್ತಿಯಿಂದ ಶರಣ ಬಂಧುಗಳು ಭಾಗವಹಿಸಬೇಕು. ಸಾಮಾನ್ಯವಾಗಿ ವೀರಶೈವ ಸಂಘ -ಸಂಸ್ಥೆಗಳವರು ಮಾಡುವ ಮೆರವಣಿಗೆಯಲ್ಲಿ ಶ್ರೀಮಂತ ವೀರಶೈವರು ತಾವು ಉತ್ಸವದಲ್ಲಿ ಭಾಗಿಗಳಾಗದೆ ಬರೀ ಡೊಳ್ಳು ಕುಣಿತ, ವೀರಗಾಸೆ, ನಂದೀಧ್ವಜ, ಎತ್ತುಗಳ ಮೆರವಣಿಗೆಯಲ್ಲಿ ಆಸಕ್ತಿ ತೋರುವರು. ಎತ್ತುಗಳನ್ನು ತಂದ ಗ್ರಾಮೀಣ ಜನ ಹಣೆ ಮೇಲೆ ವಿಭೂತಿ ಇರದು, ಬಾಯಲ್ಲಿ ತಾಂಬೂಲ -ತಂಬಾಕು ಹಾಕಿಕೊಂಡು ದಾರಿಯುದ್ದಕ್ಕೂ ಉಗುಳುತ್ತಾ ಹೋಗುವರು.

ಶರಣ ಬಂಧುಗಳು ಎಷ್ಟೇ ಜನ ಸೇರಲಿ ಬಿಳಿಯ ವಸ್ತ್ರಗಳನ್ನುಟ್ಟು ಕಾವಿಯ ಸ್ಕಾರ್ಫ್ ಹೊದ್ದು, ಬಸವ ಮಂತ್ರ ಹೇಳುತ್ತ, ಜಯಘೋಷ ಮಾಡುತ್ತ ಮೆರವಣಿಗೆಯಲ್ಲಿ ಭಾಗಿಗಳಾಗಬೇಕು. ತಮ್ಮ ಊರಿನ ಅನುಕೂಲತೆಯ ಪ್ರಕಾರ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ -ಹೀಗೆ ವಿವಿಧ ಸಮಯದಲ್ಲಿ ಭಕ್ತಿಪೂರ್ಣವಾಗಿ ಮೆರವಣಿಗೆ ಮಾಡಬೇಕು.

8. ವ್ಯಾಪಾರಸ್ಥರು, ಅಂಗಡಿಕಾರರು, ವಿದ್ಯಾರ್ಥಿಗಳು, ಶರಣರು -ಶರಣೆಯರು ಎಲ್ಲರೂ ಬಂದು ಬಸವ ಜಯಂತಿ ಮೆರವಣಿಗೆಯಲ್ಲಿ ಭಾಗಿಗಳಾಗಬೇಕು. ಸಿಖ್ಖರು, ಜೈನ ಧರ್ಮೀಯರು ಕ್ರೈಸ್ತರು -ಮುಂತಾದವರಿಂದ ಲಿಂಗಾಯತರು ಕಲಿಯುವ ಪರಿಸ್ಥಿತಿ ಬಂದಿದೆ.

9. ಬಸವ ಜಯಂತಿಯಂದು ಸಾಮೂಹಿಕ ಅನ್ನದಾಸೋಹ ನಡೆಸುವ ಪರಿಪಾಠ ಬೆಳೆಸಬೇಕು. ದೆಹಲಿಯಲ್ಲಿ ಒಮ್ಮೆ ಗುರುನಾನಕ ಜಯಂತಿಯಂದು ನೋಡಿದೆವು. ಓಣಿ ಓಣಿಗೆ ದಾಸೋಹವನ್ನು ಸಿಖ್ಖರು ನಡೆಸುತ್ತಿದ್ದರು. ರಾಷ್ಟ್ರೀಯ ಬಸವ ದಳದವರು ಇಲ್ಲವೇ ಬಸವ ಜಯಂತಿ ದಾಸೋಹ ಸಮಿತಿಯವರು ಅಂದು ಸಾರ್ವಜನಿಕ ಸ್ಥಳದಲ್ಲಿ ಶಾಮಿಯಾನಾ ಹಾಕಿ ಬ್ಯಾನರ್ ಕಟ್ಟಿ ಅಲ್ಲಿ ಪ್ರಸಾದ ದಾಸೋಹ ಮಾಡಬೇಕು. ಒಮ್ಮೆ ಪರಿಪಾಠ ಬಿದ್ದರೆ ನಂತರ ಸುರಳಿತವಾಗಿ ನಡೆಯುತ್ತದೆ.

10. ಸಭೆ - ಸಮಾರಂಭ, ಉಪನ್ಯಾಸ ನಡೆಸಬೇಕು. ವೀರಶೈವರ ಮಹಾಸಭೆ, ಬಸವ ಸಮಿತಿ -ದವರಂತೆ ಒಂದು ಪೂಜೆಯೂ ಇಲ್ಲದಂತೆ ಸಭೆ ಆರಂಭಿಸದೆ, ಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಭೆ ಆರಂಭಿಸಬೇಕು.

11. ಬಸವ ಮಂಟಪಗಳು, ಮನೆಗಳ ಮೇಲೆ ಸೀರಿಯಲ್ ಲೈಟ್ಸ್ ಹಾಕಬೇಕು. ಮನೆಯ ಮುಂಭಾಗದಲ್ಲಿ ಸಾಂಪ್ರದಾಯಿಕವಾದ ಎಣ್ಣೆ ದೀಪಗಳನ್ನು ಹಚ್ಚಿ ಇಡಬೇಕು.

ಹೀಗೆ ಬಸವ ಜಯಂತಿಯನ್ನು ವೈಯಕ್ತಿಕವಾಗಿ, ಸಾಮೂಹಿಕವಾಗಿ ಅರ್ಥಪೂರ್ಣವಾಗಿ ಆಚರಿಸಿ ಧನ್ಯರಾಗಿರಿ.

(ಶರಣ ಬಂಧುಗಳು ಇನ್ನೇನಾದರೂ ಸಲಹೆಗಳಿದ್ದರೆ ಬರೆದು ಕಳಿಸಿರಿ. ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು.)

- ಮಾತಾಜಿ

ಸಂಪಾದಕೀಯ-2

ಚೆನ್ನೈ ಸಮ್ಮೇಳನ - ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ

ಲಿಂಗಾಯತ ಸಮಾಜ ಹಲವಾರು ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದೆ. ಗುರು ಬಸವಣ್ಣನವರ ಆಶಯದಂತೆ ಒಂದು ಕೇಂದ್ರ ಬಿಂದುವಿನ ಸುತ್ತ ಹಬ್ಬದೆ ಮೇಟಿಗೂಟ ಕಿತ್ತ ಕಣದಂತೆ, ದಾರ ಕಿತ್ತ ಮಣಿಸರದಂತೆ ಆದುದರಿಂದ ಇದರಲ್ಲಿ ಸಂಘಟನೆಯೇ ಇಲ್ಲ. ಕೆಲವು ಕಡೆ ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಲಾಢ್ಯರಾಗಿದ್ದರೆ ಕೆಲವು ಕಡೆ ತೀರಾ ಹಿಂದುಳಿದ ದುಃಸ್ಥಿತಿಯಲ್ಲಿದ್ದಾರೆ. "ಹುಟ್ಟು ಬಿಡದೆ

ಮದುವೆಯಾಗದು, ಮದುವೆಯಾಗದೆ ಹುಚ್ಚು ಬಿಡದು "ಎಂಬಂತೆ ಸಂಘಟನೆಯಾಗದೆ ಸಂಸ್ಕಾರ ಕೊಡಲು ಸಾಧ್ಯವಿಲ್ಲ, ಸಂಸ್ಕಾರ ಕೊಡದೆ ಸಂಘಟನೆಯಾಗಲು ಸಾಧ್ಯವಿಲ್ಲ ಎಂಬ ಸಮಸ್ಯೆ ನಮ್ಮದಾಗಿದೆ. ಆದರೂ ಛಲ ಬಿಡದ ತ್ರಿವಿಕ್ರಮನಂತೆ ಪ್ರಯತ್ನಿಸಬೇಕಾಗಿದೆ. "ಹಿಂದೂ ಸಂಸ್ಕೃತಿಯ ಸಮುದ್ರದಲ್ಲಿ ಕರಗಿ ಹೋಗುವ ದ್ವೀಪದಂತಿದೆ ಲಿಂಗಾಯತ ಸಮಾಜ" ಎಂದು ಓರ್ವ ಪಾಶ್ಚಿಮಾತ್ಯ ವಿದ್ವಾಂಸ ಬರೆದಿರುವುದು ಕಟು ಸತ್ಯವಾಗಿದೆ. ಊಟಿಯ ಪರಿಸರದ ಸಕಲಟ್ಟಿ, ಕಾಟೇರಿ, ದೇನಾಡು ಮುಂತಾದ ಕೆಲವು ಊರುಗಳ ಶರಣರು ಧರ್ಮಕ್ಷೇತ್ರ ಕೂಡಲ ಸಂಗಮದ ಶರಣ ಮೇಳದ ಮಹತ್ವ ಮನಗಂಡು ತಪ್ಪದೆ ಶರಣ ಮೇಳಕ್ಕೆ ಬರುವರು. ಅದೇ ತಮಿಳುನಾಡಿನ ಇನ್ನೊಂದು ಭಾಗದ ಜನರು, ಆಗ ನಮಗೆ ಪೊಂಗಲ್ ಹಬ್ಬ ಬರಲು ಆಗುವುದಿಲ್ಲ ಎನ್ನುತ್ತಾರೆ. ಸೊಲ್ಲಾಪುರ ಜನರು, ನಮಗೆ ಆಗ ಸಿದ್ಧರಾಮೇಶ್ವರರ ಜಾತ್ರೆ. ಎನ್ನುತ್ತಾರೆ. ಸೊಲ್ಲಾಪುರಕ್ಕೆ ಬಸವ ಕಲ್ಯಾಣವೂ ಹತ್ತಿರ, ಕೂಡಲ ಸಂಗಮವೂ ಹತ್ತಿರ. ಅದು ಮಧ್ಯದಲ್ಲಿದೆ. ಆದರೇನು ಮಾಡುವುದು ಕೂಡಲ ಸಂಗಮ - ಬಸವ ಕಲ್ಯಾಣಗಳ ಮಹತ್ವವನ್ನು ಅರಿತಿಲ್ಲ, ಶರಣ ಮೇಳ -ಕಲ್ಯಾಣ ಪರ್ವಗಳ ಮಹತ್ವವನ್ನೂ ಅರಿತಿಲ್ಲ. ಹೀಗಾಗಿ ಲಿಂಗಾಯತ ಸಮಾಜ ಸಂಘಟನೆ ಬಹಳ ಕಠಿಣ ಸಾಧ್ಯ.

ಕುರುಡು ಕಣ್ಣಿಗಿಂತ ಮೆಳ್ಳೆಗಣ್ಣು ಶ್ರೇಷ್ಠ ಎಂಬಂತೆ ಆದಷ್ಟು ಆಗಲಿ, ಸಂಘಟನೆ ಆಗುತ್ತದೆ ಎಂದು ಸಮ್ಮೇಳನಗಳನ್ನು ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಬಹಳಷ್ಟು ಹಿಂದೆಯೇ ಚೆನ್ನಾಯ್‌ದಲ್ಲಿ ಜಾಗಗಳನ್ನು ಗೊತ್ತು ಮಾಡಿದ್ದರಿಂದ ಬಸವ ಜಯಂತಿಯ ಕಲ್ಪನೆ ಬರದೆ 2009ರ ಏಪ್ರಿಲ್ 25, 26, 27 ಎಂದು ದಿನಾಂಕಗಳನ್ನು ನಿಶ್ಚಯಿಸಿದೆವು. ಶರಣ ಮೇಳದಲ್ಲಿ ಘೋಷಿಸಿದಾಗ, ದಿ.27ಕ್ಕೆ ಬಸವ ಜಯಂತಿ. ಸ್ಥಳೀಯವಾಗಿ ಮೆರವಣಿಗೆ ಎಲ್ಲ ಮಾಡುವುದಿರುತ್ತದೆ. ಇದೇನು ಹೀಗೆ ಮಾಡಿದಿರಿ? ಎಂದಾಗ ನಮಗೂ ಗೊಂದಲವಾಯಿತು. ಮತ್ತೆ ಪ್ರಯತ್ನಿಸಿದಾಗ ಕಾರ್ಯಕ್ರಮ ಸ್ಥಳ, ಕಲ್ಯಾಣ ಮಂಟಪದವರೆಲ್ಲರೂ ದಿನಾಂಕಗಳನ್ನು ಬದಲಿಸಿ ಕೊಡುವ ಸೌಜನ್ಯ ತೋರಿಸಿದರು. ಸರಿಯಾಗಿ ಒಂದು ವಾರ ಮುಂದಕ್ಕೆ ಹಾಕಲಾಗಿದೆ. 2009ರ ಮೇ 2 (ಶರಣವಾರ), ಮೇ 3 (ದೇವವಾರ) ಮತ್ತು ಮೇ 4ರಂದು (ಶಿವವಾರದಂದು) ಸಮ್ಮೇಳನವು ನಡೆಯಲಿದೆ. ಇದಕ್ಕಾಗಿ ಕಾರ್ಯಕ್ರಮ ಸ್ಥಳ, ಕಲ್ಯಾಣ ಮಂಟಪಗಳು ಎಲ್ಲ ಗೊತ್ತು ಮಾಡಲಾಗಿದೆ.

ಕೆಲವರು ವ್ಯಕ್ತಪಡಿಸುವ ಇನ್ನೊಂದು ಆತಂಕವೆಂದರೆ ಸಮುದ್ರ ದಂಡೆಯ ಮೇಲಿರುವ ಚೆನ್ನಾಯ್‌ಯ ಬಿಸಿಲು ಮತ್ತು ಧಗೆ. ಯಾವಾಗಲೂ ಒಂದಲ್ಲ ಒಂದು ಸಮಸ್ಯೆ ಇದ್ದೇ ಇರುತ್ತದೆ. ಮಾರ್ಚ್ -ಏಪ್ರಿಲ್‌ದಲ್ಲಿ ಮಕ್ಕಳ ಪರೀಕ್ಷೆಯ ಸಮಸ್ಯೆ. ಪಾಲಕರಿಗೆ ಮನೆ ಬಿಟ್ಟು ಬರಲು ಆಗದು. ಮೇದಲ್ಲಿ ದೊಡ್ಡವರ ಪರೀಕ್ಷೆ ಇರುವುದಾದರೂ ಅವರಿಗೆ ಜವಾಬ್ದಾರಿ ಇರುವುದರಿಂದ ತಮ್ಮ ಪಾಡಿಗೆ ತಾವು ಓದಿಕೊಳ್ಳುತ್ತಾರೆ. ಅಕ್ಟೋಬರ್ ತಿಂಗಳಲ್ಲಿ ಈಗ ಕಲ್ಯಾಣ ಪರ್ವದ ಕಾರ್ಯಕ್ರಮ ಇರುತ್ತದೆ. ಮೇದಲ್ಲಿ ಚಳಿಗಾಲ ಇಲ್ಲದಿರುವುದರಿಂದ ಲಗೇಜು ಬಹಳ ತರಬೇಕಿಲ್ಲ. ಈ ಎಲ್ಲ ದೃಷ್ಟಿಯಿಂದ ಮೇ ತಿಂಗಳಲ್ಲಿ ಸಮ್ಮೇಳನ ಮಾಡುವುದೇ ಸೂಕ್ತ ಎಂದು ನಿರ್ಧರಿಸಲಾಗಿದೆ. ಅಲ್ಲದೆ ಚೆನ್ನಾಯ್‌ಗೆ ಎಲ್ಲಡೆಯಿಂದ ವಿಮಾನ, ಟ್ರೇನ್, ಬಸ್‌ಗಳು ವಿಪುಲವಾಗಿವೆ. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸ ಬಹುದೆಂದು ನಾವು ಕಲ್ಯಾಣ ಮಂಟಪಗಳನ್ನು ವಾಸಕ್ಕೆಂದು ನಿಶ್ಚಿತಗೊಳಿಸಿದ್ದೇವೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಮಾತ್ರವಲ್ಲದೆ ಮಹಾರಾಷ್ಟ್ರ, ಆಂಧ್ರಗಳಿಂದಲ್ಲ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಆಗಮಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಸೂಚಿಸುತ್ತೇವೆ.

ಕಲ್ಯಾಣ ಕಿರಣ ಚಂದಾದಾರರಲ್ಲಿ ಮನವಿ

ಕಲ್ಯಾಣ ಕಿರಣ ಸಕಾಲದಲ್ಲಿ ತಲುಪದಿರುವುದಕ್ಕೆ ಸರಿಯಾದ ವಿಳಾಸವಿಲ್ಲದಿರುವುದು ಕಾರಣವಾಗಿದ್ದು ಪ್ರತಿ ತಿಂಗಳು ಸುಮಾರು 100 - 150ರವರೆಗೆ ಪ್ರತಿಗಳು ವಾಪಸ್ಸಾಗುತ್ತವೆ. ಆದ್ದರಿಂದ ದಯವಿಟ್ಟು ಸರಿಯಾದ ವಿಳಾಸ ಮತ್ತು ಪಿನ್‌ಕೋಡ್ ಹಾಗೂ ತಮ್ಮ ದೂರವಾಣಿ ಸಂಖ್ಯೆಗಳನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿ. ಕಲ್ಯಾಣ ಕಿರಣದ ಯಾವುದೇ ಸಮಸ್ಯೆಯಿರುವವರು ಈ ಕೆಳಗೆ ನಮೂದಿಸಿದ ಜಂಗಮ ದೂರವಾಣಿಗಳಿಗೆ ಎಸ್.ಎಂ.ಎಸ್. (ಮೆಸೇಜ್) ಅಥವಾ ಕರೆ ಮಾಡಿ ತಮ್ಮ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಲು ಕೋರುತ್ತೇವೆ. **ದೂರವಾಣಿಗಳ ಸಂಖ್ಯೆಗಳು : 9620058492, 9481249857**



|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿಯ ಅಲ್ಲಮ ಪ್ರಭು ಗಿರಿಯಲ್ಲಿ 2009 ಮಾರ್ಚ್ 27, 28, 29 ರಂದು

ನಾಲ್ಕನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಆದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತೆರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸು ಹೊರಡುತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲಾಪುರ ಜಿಲ್ಲೆಯ ಹಾತ್‌ಕಣಿಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನುತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳ ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತವೆ ಮತ್ತು ಹಾತ್‌ಕಣಂಗಲೆಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್) ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್, ನೀರಿನ ತೊಟ್ಟಿ, ಕಾರ್ಯಾಲಯ (Office) ಮತ್ತು ವಾಸಕ್ಕೆ 2 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು

ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.27-3-2009 ಬೆಳಿಗ್ಗೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಯುಗಾದಿ ಪಾಡ್ಯದ ದಿವಸ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ-ಅಲಮ ಪ್ರಭು ತೊಟ್ಟಿಲು ಕಾರ್ಯಕ್ರಮ, ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ದಿ.28-3-2009 ಸಂಜೆ 5-30ರಿಂದ ಅಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಜಗದುರು ಬಸವ ಕುಮಾರ ಸ್ವಾಮಿಗಳಿಂದ. ದಿ. 29-3-2009ರಂದು ಬೆಳಿಗ್ಗೆ 10-30ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು : ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಅಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಅಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ಅಲ್ಲಮಗಿರಿಗೆ ಬರಬಹುದಾಗಿರುತ್ತದೆ.ಕಾರ್ಯಕ್ರಮದ ಸಮಯದಲ್ಲಿ ರಾಮಲಿಂಗ ಕ್ರಾಸ್‌ದಿಂದ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ರಿಯಾಯಿತಿ ದರದಲ್ಲಿ ವಾಹನಗಳನ್ನು ಓಡಿಸಲಾಗುತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲಕರಂಜಿ - 20 ಕಿ.ಮೀ ಮತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತದೆ. ಟೆಂಪೋ ಸಹ ಸಿಗುತವೆ. ದೂರದ ಊರುಗಳಿಂದ ಬರುವವರು ದಿ. 26 ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು 27ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

2009ರ ಮಾರ್ಚ್ 27, 28 ಮತು 29ರಂದು ನಡೆಯುವ ನಾಲ್ಕನೆಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ. ಒಂದೊಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ವಹಿಸಿಕೊಳ್ಳಲು ಅವಕಾಶವಿದೆ.

ಮಹಾಪೋಷಕರು	: 10000ರೂ ಮತು ಮೇಲೆ ಕೊಟ್ಟವರು	ಹಿತೈಷಿಗಳು	500 ರೂ
ಪೋಷಕರು	: 5000ರೂ ಮತ್ತು ಮೇಲೆ ಕೊಟ್ಟವರು	ಉತ್ಸವ ಸಮಿತಿ ಸದಸ್ಯರು	250 ರೂ
ದಾನಿಗಳು	: 1000ರೂ ಮತ್ತು ಮೇಲೆ ಕೊಟ್ಟವರು	ಪ್ರತಿನಿಧಿ ಶುಲ್ಕ	100 ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್/ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಎಂದಾದರೂ ಬರೆಸಬಹುದು. ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು.

ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ, ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9822720714,
(0) 9850982877, (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ
ಕಾರ್ಡ್ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23131476/22923736



ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ತಮಿಳು ನಾಡು ರಾಜ್ಯದ ರಾಜಧಾನಿ ಚೆನ್ನೈನಲ್ಲಿ
ಲಿಂಗಾಯತ ಧರ್ಮದ ಒಂಬತ್ತನೆಯ ಸಮ್ಮೇಳನ
2009, ಮೇ 2, 3 ಮತ್ತು 4ರಂದು

ಬಸವ ಧರ್ಮ ಪೀಠ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2009ನೇ ಇಸವಿಯ ಮೇ 2,3 ಮತ್ತು 4ರಂದು ಲಿಂಗಾಯತ ಧರ್ಮದ ಒಂಬತ್ತನೆಯ ಸಮ್ಮೇಳನವನ್ನು ತಮಿಳು ನಾಡು ರಾಜ್ಯದ ರಾಜಧಾನಿ ಚೆನ್ನೈದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮೊಟ್ಟ ಮೊದಲನೆಯ ಸಮ್ಮೇಳನವು 1993ರಲ್ಲಿ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ ಜರುಗಿತು. ನಂತರ ಕ್ರಮವಾಗಿ ಹೈದರಾಬಾದ್ (1994), ಬೆಂಗಳೂರು, ಇಚಲ ಕರಂಜಿ, ನವ ದೆಹಲಿ, ಗೋಕಾಕ್, ಮುಂಬಯಿಯ ಮಹಾನಗರದಲ್ಲಿ ಸಮ್ಮೇಳನಗಳು ಜರುಗಿದವು. 1997ರಲ್ಲಿ ಭಾರತದ ಹೆಮ್ಮೆಯ ರಾಜಧಾನಿ ನವದೆಹಲಿಯ ಲಾಲ್ ಕಿಲ್ಲಾ ಮೈದಾನದಲ್ಲಿ, 2005ರಲ್ಲಿ ಲಾಲ್ ಕಿಲ್ಲಾ ಮೈದಾನಕ್ಕೆ ಹತ್ತಿರದಲ್ಲಿ ಇರುವ ದರಿಯಾಗಂಜ್‌ನ ಮಹಾವೀರ ವಾಟಿಕಾದಲ್ಲಿ ಜರುಗಿತು. 2007ರಲ್ಲಿ ಮಹಾವೀರ್ ಎನ್‌ಕ್ಲೇವ್, ಪಾಲಮ್‌ದ ಎಂ.ಸಿ.ಡಿ. ಭವನದ ಸಮೀಪದ ಮೈದಾನದಲ್ಲಿ ಜರುಗಿತು. ಇದೀಗ ಒಂಬತ್ತನೆಯ ಸಮ್ಮೇಳನವನ್ನು ತಮಿಳುನಾಡಿನ ರಾಜಧಾನಿ ಚೆನ್ನೈ ಪಟ್ಟಣದಲ್ಲಿ 2009ರ ಮೇ 2, 3 ಮತ್ತು 4 ಶರಣ(ಶನಿ)ವಾರ, ದೇವ(ಭಾನು)ವಾರ ಮತ್ತು ಶಿವ(ಸೋಮ)ವಾರ ದಂದು ಸಂಯೋಜಿಸಲಾಗಿದೆ.

ಸಮ್ಮೇಳನ ಸ್ಥಳ : ಚನ್ನೈ ನಗರದ ಹೃದಯ ಭಾಗದಲ್ಲಿರುವ ತ್ಯಾಗರಾಜ ನಗರ (ಟಿ.ನಗರ ಎಂಬುದು ಸಂಕ್ಷಿಪ್ತ ರೂಪ)ದ ಹಿಂದಿ ಪ್ರಚಾರ ಸಭಾದ ಗಾಂಧಿ ಕಾನ್ವೊಕೇಷನ್ ಹಾಲ್.

ವಿಶ್ವಗುರು ಬಸವಣ್ಣನವರು (1134 -1196) ಭಾರತದ ಮೊಟ್ಟ ಮೊದಲ ಸಮತಾವಾದಿ, ಸಮಾಜ ಸುಧಾರಕರು. ಅವರ ದಿವ್ಯ ಸಂದೇಶಗಳು ಎಲ್ಲ ರಾಜ್ಯಗಳಲ್ಲಿ, ಎಲ್ಲ ಭಾಷೆಗಳಲ್ಲಿ ಪ್ರಚಾರವಾಗುವುದು ಅತ್ಯಂತ ಅವಶ್ಯಕವಾಗಿದೆ. ಗುರು ಬಸವಣ್ಣನವರು ಸಂಸ್ಥಾಪಿಸಿಕೊಟ್ಟ ಲಿಂಗಾಯತ ಧರ್ಮವು ಅತ್ಯಂತ ಪ್ರಗತಿಪರ ವಿಚಾರಗಳಿಂದ ಕೂಡಿದ ರಾಷ್ಟ್ರಧರ್ಮವಾಗಿದೆ. ಇದನ್ನು ಅನುಸರಿಸುವ ಲಿಂಗಾಯತ ಧರ್ಮ ಬಾಂಧವರು ದೇಶದಲ್ಲಿ ಎಲ್ಲೆಡೆ ಚದುರಿದಂತೆ ನೆಲೆಸಿದ್ದಾರೆ. ಲಿಂಗಾಯತ ಸಮಾಜದ ಸಂಘಟನೆ ಮತ್ತು ಬಸವ ತತ್ವ ಪ್ರಚಾರದ ದೃಷ್ಟಿಯಿಂದ ಪ್ರಸ್ತುತ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

ಪ್ರತಿನಿಧಿ ಶುಲ್ಕ ಒಬ್ಬರಿಗೆ 800ರೂಗಳು. ಮೇ 1ರ ಮಧ್ಯಾಹ್ನದಿಂದ ಮೇ4 ರ ಮಧ್ಯಾಹ್ನದ ವರೆಗೆ ಊಟ ಮತ್ತು ವಸತಿಯ ಜವಾಬ್ದಾರಿ ಸಮ್ಮೇಳನ ಸಮಿತಿಯದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

1. ಚೆನ್ನೈನಲ್ಲಿ ಸಂದರ್ಶನೀಯ ಸ್ಥಳಗಳು ಬಹಳ. ಹೀಗಾಗಿ ಜನರು ಒಂದೆರಡು ದಿವಸ ಜಾಸ್ತಿ ಉಳಿದು ನಗರ ಸಂದರ್ಶನ ಮಾಡುವುದು ಅನಿವಾರ್ಯವಾಗುತ್ತದೆ. ಆಗ ಜನರು ತಮ್ಮ ಜವಾಬ್ದಾರಿ ಮೇಲೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಗಾಂಧಿ ಭವನದ ಆವರಣದಲ್ಲಿ ಉಳಿಯಲು ಅನುಕೂಲವಿದೆ. ಆದರ ವಸತಿ ಶುಲ್ಕ ತಾವೇ ಕಟ್ಟಿಕೊಳ್ಳಬೇಕು. ನಗರ ಮಧ್ಯೆ ಇರುವುದರಿಂದ ಉಪಾಹಾರ ಗೃಹಗಳು ವಿಪುಲವಾಗಿವೆ.

2. ಪ್ರತಿನಿಧಿ ಶುಲ್ಕವನ್ನು ಆದಷ್ಟು ಬೇಗನೆ ಕಳಿಸಿ ವಿವರಗಳನ್ನು ನೀಡಬೇಕು. ಅಕ್ಕಿ, ದವಸ-ಧಾನ್ಯ, ತರಕಾರಿ ಇತ್ಯಾದಿಗಳ ಬೆಲೆ ತೀರಾ ಏರಿರುವುದರಿಂದ ಸಾಮಗ್ರಿಗಳನ್ನು ಖರೀದಿಸುವುದು ಅತ್ಯಗತ್ಯವಾಗಿರುತ್ತದೆ ಮತ್ತು ವಸತಿ ವ್ಯವಸ್ಥೆಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಲಾಗಿದೆ.

3. ಸಮ್ಮೇಳನ ಸಮಿತಿಯು ಸಾಮೂಹಿಕವಾಗಿ ವಸತಿ ವ್ಯವಸ್ಥೆಯನ್ನು ಮಾಡುತದೆ. ಪ್ರತ್ಯೇಕವಾಗಿ ಲಾಡ್ಜಿಂಗ್‌ದಲ್ಲಿ ಇರಬಯಸುವವರು ಮೊದಲೇ ತಿಳಿಸಬೇಕು. ಸಮ್ಮೇಳನ ಸ್ಥಳಕ್ಕೆ ಸಮೀಪದಲ್ಲಿರುವ ಲಾಡ್ಜಿಂಗ್ ಹುಡುಕಲಾಗುವುದು. ಲಾಡ್ಜಿಂಗ್ ಕೋಣೆಯ ಬಾಡಿಗೆ ಜೊತೆಗೆ ಸರ್ವೀಸ್ ಛಾರ್ಜು ಸೇರಿಸಲಾಗುವುದು. ಮುಂದೆ ಹೊರಡಿಸುವ ಕರಪತ್ರದಲ್ಲಿ, ಕಲ್ಯಾಣ ಕಿರಣದಲ್ಲಿ ಲಾಡ್ಜಿಂಗ್ ಕೋಣೆಗಳ ಬಾಡಿಗೆಯ ವಿವರ ನೀಡಲಾಗುವುದು. ಹಣವನ್ನು ಮೊದಲೇ ಪಾವತಿ ಮಾಡಿದರೆ ಮಾತ್ರ ಕೋಣೆ ಕಾಯ್ದಿರಿಸಲಾಗುವುದು. ಏಕೆಂದರೆ ಖಾಸಗಿ ಅತಿಥಿ ಗೃಹಗಳವರು ಮುಂಗಡ ಹಣ ಕಟ್ಟದಿದ್ದರೆ ಕಾಯ್ದಿರಿಸುವುದಿಲ್ಲ ಮತ್ತೆ ಕೆಲವರು ಫೋನ್ ಮೂಲಕ ಹೇಳುತ್ತಾರೆ. ನಾವು ನಂಬಿ ಹಣವನ್ನು ಕಟ್ಟುತ್ತೇವೆ. ನಂತರೆ ಕಾರಣಾಂತರದಿಂದ ಬರಲು ಆಗುವುದಿಲ್ಲ ಎಂದು ಹೇಳುತಾರೆ. ಆಗ ಯಾರೂ ಆ ಕೋಣೆಗೆ ಬರದಿದ್ದರೆ ನಮಗೆ ನಷ್ಟವಾಗುತ್ತದೆ. ಕಳೆದ ಎರಡು ಸಲದ ಅನುಭವದ ಮೇಲೆ ಈಗ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ.

4. ಸಮ್ಮೇಳನಗಳನ್ನು ನಾವು ಕಡಿಮೆ ಮಾಡಿದ್ದೇಕೆ ಎಂದರೆ ಅನೇಕರು ಪ್ರತಿನಿಧಿ ಶುಲ್ಕವನ್ನು ಕೊಡದಿರುವುದು. ಶರಣ ಮೇಳ, ಕಲ್ಯಾಣ ಪರ್ವಕ್ಕೆ ಧಾವಿಸಿದಂತೆ ಪರರಾಜ್ಯಗಳ ಸಮ್ಮೇಳನಕ್ಕೂ ಬಂದರೆ ನಾವು ಖರ್ಚುವೆಚ್ಚವನ್ನು ಹೇಗೆ ನಿಭಾಯಿಸಬೇಕು ? ಊರು ನೋಡಲು, ಸಾಮಾನು ಖರೀದಿಸಲು ಹಣ ಇರುತದೆ. ಪ್ರತಿನಿಧಿ ಶುಲ್ಕ ತುಂಬಲು ಇರದೆ ? ಧರ್ಮ ಸಂಸ್ಥೆಗೆ ಕೊಡಬೇಕಾದ ಶುಲ್ಕದ ಹಣದಲ್ಲಿ ಉಳಿಸಿಕೊಂಡು ವೈಯಕ್ತಿಕ ಸಾಮಾನು ಖರೀದಿಗೆ ಬಳಸಬೇಕೆಂಬ ಕ್ಷುಲ್ಲಕ ಮನೋಭಾವ ಕೆಲವರದು. ಈ ರೀತಿ ಮೊಡಬಾರದು. ಅದರಿಂದ ನಮಗೆ ಸಮ್ಮೇಳನ (ಶಿಬಿರ)ಗಳನ್ನು ನಡೆಸುವ ಉತಾಹ ಕಡಿಮೆಯಾಗಿದೆ. ಶರಣ ಮೇಳ, ಕಲ್ಯಾಣ ಪರ್ವ, ಅಲ್ಲಮ ಗಿರಿಯ ಗಣ ಮೇಳಕ್ಕೆ ನಿರ್ಬಂಧ ವಿಧಿಸುವುದಿಲ್ಲ. ಆದರೆ ಪರವೂರಿನಲ್ಲಿ ಮಾಡುವಾಗ, ಎಲ್ಲ ಸಾಮಾನುಗಳು ತುಟ್ಟಿಯಾಗಿರುವ ಈ ಕಾಲದಲ್ಲಿ, ಸಮ್ಮೇಳನಗಳನ್ನು ಮಾಡುವುದು ಎಷ್ಟು ಶ್ರಮದ ಕೆಲಸ ಎಂಬುದನ್ನು ಶರಣ ಬಂಧುಗಳು ಮನಗಾಣಬೇಕು.

ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಿದರೆ ಗುರುತಿನ ಚೀಟಿ (Identity Card) ಕಳಿಸಿಕೊಡಲು ಸಾಧ್ಯವಾಗುವುದು. ಅದರಲ್ಲಿ ಕ್ರಮ ಸಂಖ್ಯೆ, ಸಂಸ್ಥೆಯ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ವಿವರಗಳು ಇರುತ್ತವೆ.

5. ಸಮ್ಮೇಳನಕ್ಕೆ ಬಂದವರು 3 ದಿನ ತಪ್ಪದೆ ಭಾಗಿಯಾಗಿ ನಂತರ ಸುತ್ತ ಮುತ್ತಲಿನ ಸ್ಥಳ ನೋಡಲು ಹೋಗಬೇಕು. ಭಾಗವಹಿಸಿದ ಅಲ್ಲಿನ ಅತಿಥಿಗಳಿಗೆ ನಮ್ಮ ಧರ್ಮ - ಸಂಸ್ಕೃತಿ - ಸಮಾಜಗಳ ಪರಿಚಯ ಮಾಡಿಕೊಡಬೇಕೆಂಬ ಹಂಬಲ, ಉತಾಹ ನಮ್ಮದಾಗಿರುತದೆ. ಆಗ ಇಲ್ಲಿಂದ ಬಂದವರು ಬರೀ ಊರು ತಿರುಗುತ್ತಿದ್ದರೆ ಪ್ರಯೋಜನವೇನು? ಕೇವಲ ಊರು ನೋಡಲು ಬರುವುದೇ ಆದರೆ ಬೇರೆ ಸಮಯದಲ್ಲಿ ಹೋಗಿ, ಬರಬಹುದು. ಆದ್ದರಿಂದ ಅನ್ಯರ ಎದುರು ನಮ್ಮ ಶಿಸ್ತು, ಒಗ್ಗಟ್ಟು, ಸಂಸ್ಕೃತಿಯನ್ನು ತೋರಿಸುವುದು ಅವಶ್ಯವಿರುತ್ತದೆ.

6. ಬೆಂಗಳೂರಿನಿಂದ ನೇರವಾಗಿ ಚೆನ್ನೈಗೆ ಹೋಗುವವವರಿಗೆ ರೈಲ್ವೆ ರಿಸರ್ವೇಷ ನ ನೆರವು ನೀಡಲಾಗುವುದು.

1. ಮಲಗಿ ಹೋಗಲು ರಾತ್ರಿ ಟ್ರೇನ್ - ಬೆಲೆ : ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 410-00

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 320-00 (ಗಂಡಸರಿಗೆ)
60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 270-00 (ಮಹಿಳೆಯರಿಗೆ)

2. ಕುಳಿತು ಹೋಗುವ ಹಗಲಿನ ಟ್ರೇನ್ - ಬೆಲೆ : ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 240-00

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 200-00 (ಗಂಡಸರಿಗೆ)
60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 150-00 (ಮಹಿಳೆಯರಿಗೆ)
(ಇವರು 60 ವರ್ಷ ಮೇಲಿನವರೆಂದು ಸಿದ್ಧ ಪಡಿಸಲು ಏನಾದರೂ ದಾಖಲೆ ತರಬೇಕು)

ಹೋಗುವಾಗ ಎಲ್ಲರೂ ಒಟ್ಟಿಗೆ ಹೋದರೂ ಬರುವಾಗ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಬರುವುದರಿಂದ ವಾಪಸು ಬರುವ ದಿನವನ್ನು ತಿಳಿಸಬೇಕು. ತಡ ಮಾಡಿದರೆ ರಿಸರ್ವೇಷನ್ ಸಿಗುವುದು ಬಹಳ ಕಷ್ಟ. ಬೇಗನೆ ನಿರ್ಧಾರ ತೆಗೆದುಕೊಳ್ಳದೆ ಕೆಲವರು ಹಿಂದಿನ ದೆಹಲಿಯ ಸಮ್ಮೇಳನದ ಅವಕಾಶವನ್ನು ಕಳೆದುಕೊಂಡರು.

(ವಿ.ಸೂ: ದಕ್ಷಿಣ ಭಾರತವು ಬಹಳಷ್ಟು ಆಕರ್ಷಣೀಯ ಸ್ಥಳಗಳನ್ನು ಹೊಂದಿದ್ದು, ಅನೇಕರು ಅವುಗಳನ್ನು ಸಂದರ್ಶಿಸುವ ಅಭಿಲಾಷೆ ಹೊಂದಿದ್ದಾರೆ. ಆ ಸ್ಥಳಗಳ ಮಾಹಿತಿ, ಪ್ರವಾಸದ ವೆಚ್ಚ ಮುಂತಾದ ವಿವರಗಳಿಗೆ ಇಂದುಶೇಖರ್ ಅವರನ್ನು ಸಂಪರ್ಕಿಸಿರಿ.)

ರೇಲ್ವೆ ರಿಸರ್ವೇಷನ್‌ಗೆ ಸಂಪರ್ಕಿಸಬೇಕಾದವರು : ಇಂದು ಶೇಖರ್ - 9945684230.

ವಿ.ಸೂ : ಮೇಲೆ ಕೊಟ್ಟಿರುವುದು ಕೇವಲ ರೇಲ್ವೆ ಛಾರ್ಜು. ಇದರಲ್ಲಿ ಪ್ರತಿನಿಧಿ ಶುಲ್ಕ ಸೇರಿಸಿಲ್ಲ. ಅದನ್ನು ಪ್ರತ್ಯೇಕವಾಗಿ ಕೊಡಬೇಕು.

ವಿಶೇಷ ಸೂಚನೆ : 1997ರ ಸಮ್ಮೇಳನದ ಸಮಯದಲ್ಲಿ ಕೆಲವರು ಪ್ರಮುಖರು ಸಂಗ್ರಹಿಸಿದ ಪ್ರತಿನಿಧಿ ಶುಲ್ಕವನ್ನು ಕೊಡದೆ ಆ ಹಣವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡರು. ಇದರಿಂದ ಸಮ್ಮೇಳನ ಸಮಿತಿಗೆ ತೊಂದರೆಯಾಯಿತಲ್ಲದೆ ಸ್ಥಳೀಯವಾಗಿ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳಲ್ಲಿ ಒಡಕು ಉಂಟಾಯಿತು. ಆದ್ದರಿಂದ ಈಗ ರಸೀತಿ ಪುಸಕಗಳನ್ನು ಕಳಿಸಲಾಗುವುದಿಲ್ಲ. ಕೇವಲ ಅರ್ಜಿ ಫಾರ್ಮುಗಳನ್ನು ಮಾತ್ರ ಆಯ್ದ ನೇತಾರರಿಗೆ ಕಳಿಸಲಾಗುವುದು. ಕಲ್ಯಾಣ ಕಿರಣದ ಮಾರ್ಚ್ ಸಂಚಿಕೆಯಲ್ಲಿ ಅರ್ಜಿಯ ಮಾದರಿ ಇರುತ್ತದೆ. ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ ಕಾರ್ಡ್ ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬೇಕು. ಪ್ರಸ್ತುತ ಕಲ್ಯಾಣ ಕಿರಣದಲ್ಲಿ ಅರ್ಜಿಫಾರ್ಮು ಮುದ್ರಿಸಲಾಗಿದೆ.

10. ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ಒಂದೆರಡು ದಿವಸ ಮೊದಲೇ ಬಂದರೆ ಸೇವೆ ಮಾಡಲು, ಬಂದವರಿಗೆ ಸೂಚನೆ ನೀಡಲು ಅನುಕೂಲವಾಗುತದೆ. ಒಂದೆರಡು ದಿವಸ ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು. ಚೆನ್ನಾಯ್ ಬಹಳ ಉಷ್ಣದೇಶ. ಆದ್ದರಿಂದ ಪ್ರತಿನಿಧಿಗಳು ರಗ್ಗು ಮುಂತಾಗಿ ಹೆಚ್ಚಿಗೆ ಲಗೇಜು ತರುವ ಅಗತ್ಯವಿರುವುದಿಲ್ಲ. ಊಟದ ತಟ್ಟೆ, ಲೋಟ ಜೊತೆಗೆ ತಂದರೆ ಒಳ್ಳೆಯದು.

13. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಮತ್ತು ಬ್ಯಾಡ್ಜ್ ಧರಿಸಿರಬೇಕು. ಐಡೆಂಟಿಟಿ ಕಾರ್ಡ್ - ಗುರುತಿನ ಚೀಟಿ ಹೊಂದಿರಬೇಕು. (ಹಿಂದಿನ ಸಮ್ಮೇಳನಗಳಲ್ಲಿ ಸ್ಕಾರ್ಫ್‌ಗಳು ಕಳೆದು ಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು)

ಧನ ಸಹಾಯಕ್ಕೆ ವಿನಂತಿ

ತಮಿಳುನಾಡಿನ ರಾಜಧಾನಿ ಚೆನ್ನಾಯಿಯಲ್ಲಿ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಮಹಾ ಪೋಷಕರು	: ರೂ 10,000/-(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	: ರೂ 5,000/- (ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ದಾನಿಗಳು	: ರೂ 3,000/- (ಮೂರು ಸಾವಿರ ಹಾಗೂ ಮೇಲ್ಪಟ್ಟು)

ದಾನಿಗಳು	: ರೂ 1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಪ್ರತಿನಿಧಿ ಶುಲ್ಕ	: ರೂ 800/-	(ಎಂಟು ನೂರು ಹಾಗೂ ಮೇಲ್ಪಟ್ಟು)
ಹಿತೈಷಿಗಳು	: ರೂ 500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು ... ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿ... ರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ... ಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾ... ಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾ... ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

1.Basava Mahamane Charitable Trust, Payable at BANGALORE.

ವ್ಯವಹರಿಸುವ ವಿಳಾಸ :

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್(ರಿ.)
ಬಸವ ಮಂಟಪ, 2035, 20ನೇ ಮೇನ್,
2ನೇ ಬ್ಲಾಕು, ರಾಜಾಜಿ ನಗರ,
ಬೆಂಗಳೂರು -560010, ಕರ್ನಾಟಕ ರಾಜ್ಯ
ದೂರವಾಣಿ : 080-23325335/23131476

BASAVA MAHAMANE CHARITABLE TRUST (R)
BASAVA MANTAPA
2035, 20th Main, Chord Road, 2nd Block
Rajajinagar, BANGALORE -10, Karnataka -St
Ph : 080-23325335, 23131476, 22923736

ವಿಶೇಷ ವಿವರಗಳು :

1. ಬಸವ ಜಯಂತಿಯ (ಏಪ್ರಿಲ್ 27) ನಿಮಿತ್ತ ಬಹಳ ಜನರು ಸಮ್ಮೇಳನ ದಿನಾಂಕ ಕುರಿತು ಆತಂಕ ವ್ಯಕ್ತಪಡಿಸಿದ ಕಾರಣ ಸಮ್ಮೇಳನ ದಿನಾಂಕಗಳನ್ನು 2009ರ ಮೇ 2, 3 ಮತ್ತು 4ಕ್ಕೆ ಬದಲಾಯಿಸಲಾಗಿದೆ.
2. ದಾಸೋಹಿಗಳು ಒಂದೊಂದು ಹೊತ್ತಿನ ಉಪಾಹಾರದ ಖರ್ಚು, ಮಧ್ಯಾಹ್ನ ಮತ್ತು ರಾತ್ರಿ ಊಟದ ಖರ್ಚು ವಹಿಸಿಕೊಳ್ಳಲು ಅವಕಾಶವಿದೆ.
3. ವಸತಿಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಲಾಗಿದೆ. ಮುಂದಿನ ಸಂಚಿಕೆಯಲ್ಲಿ ವಿವರ ನೀಡಲಾಗುವುದು. ಟ್ರೇನ್, ಬಸ್ಸು ಇಳಿದವರು ನೇರವಾಗಿ ಅಲ್ಲಿಗೇ ಹೋಗಬಹುದು.
4. ಅಲ್ಲಮ ಪ್ರಭು ಜಯಂತಿ, ಚಾಂದ್ರಮಾನ ಯುಗಾದಿ - ಮಾರ್ಚ್ 27. ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ ನಾಲ್ಕನೆಯ ಲಿಂಗಾಯತ ಗಣಮೇಳಾವ ಮಾರ್ಚ್ 27, 28, 29
5. ದಿ.9-4-2009ರಂದು ಅಕ್ಕಮಹಾದೇವಿ ಜಯಂತಿ (ಚೈತ್ರ ಪೌರ್ಣಮೆ).

ಬಸವ ವಚನಾಮೃತ

130. ಯಾಂತ್ರಿಕ ಭಕ್ತಿ

ಒಲವಿಲ್ಲದ ಪೂಜೆ! ನೇಹವಿಲ್ಲದ ಮಾಟ
ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ!
ಚಿತ್ರದ ಕಬ್ಬು ಕಾಣಿರಣ್ಣಾ!
ಅಪ್ಪಿದಡೆ ಸುಖವಿಲ್ಲ! ಮೆಲಿದಡೆ ರುಚಿಯಿಲ್ಲ!
ಲಿಂಗದೇವಾ, ನಿಜವಿಲ್ಲದವನ ಭಕ್ತಿ! - ಬ.ವ.ದೀ.128

ಪೂಜೆ ಒಂದು ಅಕ್ಕರತೆಯಿಂದ ಮಾಡಬೇಕಾದ ಕ್ರಿಯೆ. ಸೃಷ್ಟಿಕರ್ತನಾದ ಲಿಂಗದೇವನನ್ನು ಸೃಷ್ಟಿಯನ್ನು ನಿರ್ಮಾಣ ಮಾಡಿ ಕೊಟ್ಟಿರುವುದಕ್ಕಾಗಿ, ಮಾನವ ಜನ್ಮವನ್ನು ದಯಪಾಲಿಸಿದ್ದಕ್ಕಾಗಿ, ಧರ್ಮ ಗುರುವನ್ನು ಒಂದು ಶ್ರೇಷ್ಠ ಧರ್ಮವನ್ನು ಕೊಟ್ಟುದಕ್ಕಾಗಿ, ಜಂಗಮ ಜ್ಯೋತಿಗಳನ್ನು ಜ್ಞಾನವನ್ನು ನೀಡುವುದಕ್ಕಾಗಿ ಪೂಜಿಸಬೇಕು. ಆ ಪೂಜೆಯಲ್ಲಿ ಒಲವು ಶ್ರದ್ಧೆ ಇರಬೇಕು. ಹಾಗೆಯೇ ಗುರು -ಜಂಗಮರನ್ನು, ಬಂಧು-ಮಿತ್ರರನ್ನು ಉಪಚರಿಸುವಲ್ಲಿ ಸ್ನೇಹ ಇರಬೇಕು. ಪೂಜೆ ಮಾಡುವಾಗ ಆಂತರಿಕ ಶ್ರದ್ಧೆ ಒಲವು ಇರದೆ ಯಾಂತ್ರಿಕವಾಗಿ ಮಾಡಿದರೆ ಅದು ಕಲಾವಿದನು ಚಿತ್ರಿಸಿದ. ಒಂದು ಕಲಾಕೃತಿಯಲ್ಲಿರುವ ಸುಂದರ ರೂಪದಂತೆ, ರಸ ಮಿಡಿಯುವಂತೆ ಚಿತ್ರಿಸಿದ ಕಬ್ಬಿನ ಜಲ್ಲೆಯ ಚಿತ್ರದಂತೆ.
ಚಿತ್ರಪಟದಲ್ಲಿರುವ ರೂಪವನ್ನು ಅಪ್ಪಿದರೆ ಪರಸ್ಪರ ಸಂವೇದನೆ ಇರದು, ಸಂತಸದ ವಿನಿಮಯವಿರದು. ಅದೇ ರೀತಿ ಚಿತ್ರಪಟದಲ್ಲಿರುವ ಕಬ್ಬಿನ ಚಿತ್ರವನ್ನು ಬಾಯಲ್ಲಿ ಹಾಕಿಕೊಂಡು ಜಗಿದರೆ ರಸವು ಉತ್ಪತ್ತಿಯಾಗದು; ರುಚಿ ಎನಿಸದು. ಅದೇ ರೀತಿ ಲಿಂಗದೇವನಲ್ಲಿ ನಿಜವಾದ ಶರಣಾಗತಿ, ನಿಷ್ಠೆ, ಭಕ್ತಿ ಶ್ರದ್ಧೆ ಇಲ್ಲದ ಪೂಜೆಯು ಚಿತ್ರದ ರೂಪವನ್ನು ಅಪ್ಪಿದಂತೆ, ಚಿತ್ರದ ಕಬ್ಬನ್ನು ಜಗಿದಂತೆ!

131. ಜನರ ಕೃತಘ್ನತೆ

ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೆ?
ಹೂ ಬಾಡಿದಲ್ಲಿ ಪರಿಮಳವನರಸುವರೆ ಅಯ್ಯಾ
ಎನ್ನ ತಂದೆ ಲಿಂಗದೇವಾ,
ತೊರೆ ಇಳಿದಡೆ ಅಂಬಿಗಂಗೇನುಂಟು? -ಬ.ವ.ದೀ.129

ಮಾನವರ ಸ್ವಭಾವವೇ ವಿಚಿತ್ರ. ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಕೃತಘ್ನ ಪ್ರಾಣಿ ಎಂದರೆ ಮನುಷ್ಯ ಎಂದೇ ಪಂಚತಂತ್ರ ಮುಂತಾದ ಕಥೆಗಳಲ್ಲಿ ಹೇಳಲಾಗುತ್ತದೆ. ಅದು ನಿಜವೂ ಅಹುದು. ಸ್ನೇಹ ಮಿತ್ರರ ಮಧ್ಯೆ ಇರಬಹುದು. ಗುರು-ಶಿಷ್ಯರ ಮಧ್ಯದ ಭಕ್ತಿ ಸಂಬಂಧವಾಗಿಯೇ ಇರಬಹುದು. ಚೆನ್ನಾಗಿ ರುತ್ತಲೇ ಯಾವುದೋ ಕಾರಣಕ್ಕೆ ಭಿನ್ನಾಭಿಪ್ರಾಯ ಬರುತ್ತದೆ. ಭಾರತೀಯ ದೇವಶಾಸ್ತ್ರದ ಪ್ರಕಾರ ಎಲ್ಲ ಅನಾಹುತಗಳಿಗೂ ಹೆಣ್ಣು (ಗಂಡು) - ಹೊನ್ನು-ಮಣ್ಣು ಕಾರಣ. ಸ್ವಾರ್ಥವಿರಬಹುದು; ಗಳಿಸಿದ ಹಣವನ್ನೆಲ್ಲ ತಾನೇ ಇಟ್ಟುಕೊಳ್ಳಬೇಕೆಂದು ಆಸೆ ಹೊಂದಿಯೋ, ತನ್ನ ಕೀರ್ತಿಯಲ್ಲಿ ಇತರರು ಪಾಲುಗಾರರಾಗಬಾರದೆಂದೋ, ತಾನೇ ಶ್ರದ್ಧಾಕೇಂದ್ರವಾಗಬೇಕೆಂದೋ ಮಿತ್ರರೊಡನೆ, ಗುರುಗಳೊಡನೆ ಸಂಬಂಧ ಕಳಚಿಕೊಳ್ಳುವನು. ಜನರೂ ಸುಮ್ಮನೆ ಇರುವುದಿಲ್ಲ. ಕೆದಕಿ ಕೆದಕಿ ಕಾರಣ ಕೇಳುವರು. ತನ್ನ ದೋಷ-ದೌರ್ಬಲ್ಯಗಳನ್ನು ಹೇಳಿಕೊಳ್ಳುವಷ್ಟು ಪ್ರಾಮಾಣಿಕತೆ ಇರದು. ಆಗ ತಾನು ಸಾಂಗತ್ಯ ತೊರೆದವರನ್ನು ಕುರಿತು ದೂರಲು ತೊಡಗುವನು. ಇದನ್ನು ಧರ್ಮಪಿತ ಬಸವಣ್ಣನವರು ಎರಡು ವಾಕ್ಯದಲ್ಲಿ ಮಾರ್ಮಿಕವಾಗಿ ಹೇಳುವರು, ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೆ? ಹೂ ಬಾಡಿದಲ್ಲಿ ಪರಿಮಳವನರಸುವರೆ?

ಸ್ನೇಹವಿರಲಿ, ಭಕ್ತಿ ಇರಲಿ ಇವು ಹೂವಿನಂತೆ. ಹೂ ಬಾಡಿದಾಗ ಹೇಗೆ ಅದರಲ್ಲಿ ಪರಿಮಳವಿರದೋ ಹಾಗೆ ಸ್ನೇಹ, ಭಕ್ತಿ ಅಳಿದಾಗ ಅಲ್ಲಿ ಗುಣೈಕ ದೃಷ್ಟಿ ಇರದು. ತಪ್ಪು ಹುಡುಕುವ ಮನೋಭಾವ ಇರುತ್ತದೆ. ಇದಕ್ಕೆಲ್ಲ ಆದರ್ಶ ಸಾಧಕರು ಬೇಸರ ಪಟ್ಟುಕೊಳ್ಳಬಾರದು. ಏಕೆಂದರೆ ಜಗತ್ತು, ಮಾನವ ಸ್ವಭಾವ ಇರುವುದೇ ಹೀಗೆ! ನದಿಯು ತುಂಬಿ ಹರಿಯುವಾಗ ದಾಟಿಸುವ ಅಂಬಿಗಂಗೆ ಬಹಳ ಬೆಲೆ. ಎಲ್ಲರೂ ಅವನನ್ನು ಓಲೈಸುವರು. ನಾವೆಯಲ್ಲಿ ಕುಳ್ಳಿರಿಸಿಕೊಂಡು ನದಿ ದಾಟಿಸುವಾಗಲಂತೂ

ಅಂಬಿಗನೇ ಪ್ರಯಾಣಕರ ದೇವರು! ಬೇಸಿಗೆಯಲ್ಲಿ ತೊರೆ ಇಳಿದು ನದಿಯನ್ನು ಕಾಲಿನಿಂದಲೇ ದಾಟುವಂತಾದಾಗ ಅಂಬಿಗನನ್ನು ಮಾತನಾಡಿಸುವವರ್ಯಾರು?! ಈ ವಚನದ ಮರ್ಮವೇನೆಂದರೆ, ವ್ಯಕ್ತಿಗಳಿಂದ ಸಹಾಯ ಪಡೆದು, ನಂತರ ಅವರನ್ನು ಮರೆಯುವ ದುರ್ಗುಣ ಮಾನವರಲ್ಲಿದೆ ಎಂಬುದು.

132. ಮಾನವ ಆಸೆಯ ಮುದ್ದೆ

ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು
ಪುಣ್ಯಪದವಿಯ ಬಯಸಿದಡೆ,
ಭವಮಾಲೆಯ ಭರವು ತಪ್ಪದು,
ಬೇಡಲು ಹುಟ್ಟಿದ ಪ್ರಾಣಿಗೆ, ಬೇಡಲು ವಿಧಿಯೆ?
ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ?
ಲಿಂಗ-ಉದಯ, ಶರಣ-ವಿಸ್ತಾರವು ಬಯಸಿದೊಡಳವೆ
ಲಿಂಗದೇವಾ, ನಿಮ್ಮಲ್ಲಿ? -ಬ.ವ.ದೀ.130

ಮಾನವ ಜೀವ ಹುಟ್ಟುವುದೇ ಆಸೆಯಿಂದ, ಒಂದು ಕಾಮದ ಆಸೆ ಎರಡನೆಯದು ಮಕ್ಕಳನ್ನು ಹೆತ್ತು ಸಾಕಬೇಕೆಂಬುದು. ತಾಯಿತಂದೆಯರ ಈ ಆಸೆಯಿಂದ ಜನಿಸುವ ಮಾನವ ಜೀವಕ್ಕೆ ಆಸೆಯ ತರಬೇತಿ ನಿರಂತರವಾಗಿ ಸಿಗುತ್ತದೆ. ಪುಣ್ಯ ಪದವಿಯು ಕಣ್ಣೆದುರಿಗಿದ್ದರೂ ಆಸೆಯ ಜಂಜಡ ಅದರತ್ತ ಬಿಡದು. ಹೀಗಾಗಿ ಹುಟ್ಟು-ಸಾವುಗಳ ಸರಪಳಿಯು ಭವಮಾಲೆಯಾಗಿ ಕಾಡುತ್ತದೆ. ಮಾನವ ಸೃಷ್ಟಿಕರ್ತನು ಸರ್ವಶಕ್ತನೂ ಆದ ಲಿಂಗದೇವನನ್ನು ಬೇಡಲರಿಯದೆ ಕಂಡಕಂಡವರನ್ನು ಬೇಡುತ್ತಾನೆ. ಇವನು ವೇಶ್ಯಾಪುತ್ರನಂತೆ. ವೇಶ್ಯೆಯ ಮನೆಗೆ ಅನೇಕರು ವಿಟರು ಬರುವುದರಿಂದ ವೇಶ್ಯಾಪುತ್ರನು ಎಲ್ಲರ ಬಳಿಯಲ್ಲೂ ಹೋಗಿ ಅಪ್ಪಾ, ಅಪ್ಪಾ ಎಂದು ಅವರಿಗೆ ಕೈ ಚಾಚುವನು. ಅವನಿಗೆ ಸ್ವಾಭಿಮಾನ, ಕೆಚ್ಚು ಇರುವುದಿಲ್ಲ. ಅದೇ ಒಬ್ಬ ತಂದೆಯ ಮಗನಾದರೆ ಬೇರೆ ಯಾರಿಗೂ ಕೈ ಚಾಚಲು ಹೋಗುವುದಿಲ್ಲ. ಅದೇ ರೀತಿ ಲಿಂಗದಲ್ಲಿ ಉದಯವಾಗಿ ಅಂದರೆ ಇಷ್ಟಲಿಂಗ ದೀಕ್ಷೆಯ ಮೂಲಕ ಮಂತ್ರಪಿಂಡವಾಗಿ, ಮರು ಜನ್ಮ ಪಡೆದು ಶರಣ ವಿಸ್ತಾರವನ್ನು ಅಂದರೆ ಶರಣರ ಒಡನಾಟವನ್ನು ಹೊಂದಿರುವ ಭಾಗ್ಯವಂತನಾದರೆ ಆಗ ಅವನು ಕಂಡಕಂಡ ದೇವತೆಗಳಲ್ಲಿ ಬೇಡಲು ಹೋಗದೆ ಏಕಲಿಂಗ ನಿಷ್ಠಾಪರನಾಗಿ ಇರುತ್ತಾನೆ.

133. ನಶ್ವರ ಬದುಕು.

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು;
ಕೊಂದಹರೆಂಬುದನರಿಯದೆ
ಬೆಂದ ಒಡಲ ಹೊರೆಯ ಹೋಯಿತ್ತು;
ಕೊಂದವರುಳಿವರೆ ಲಿಂಗದೇವಾ? ಬ.ವ.ದೀ. 131

ಧರ್ಮಪಿತ ಬಸವಣ್ಣನವರ ಜನಪ್ರಿಯ ವಚನಗಳಲ್ಲಿ ಇದೂ ಒಂದು. ಇಲ್ಲಿ ಒಂದು ಜೀವಂತವಾದ ರೂಪಕವಿದೆ. ಮಾರಿ ಮಸಣಿ ದುರ್ಗಿಯರಿಗೆ ಬಲಿ ಕೊಡಲೆಂದು ಹರಕೆ ಮಾಡಿಕೊಂಡು ತಾಮಸ ಭಕ್ತರು ಹರಕೆಗಾಗಿ ಬಿಟ್ಟ ಕುರಿ (ಮೇಕೆ)ಯನ್ನು ಗುಡಿಗೆ ಒಯ್ಯುತ್ತಾರೆ. ಆಗ ಅವು ಬರದೆ ಜಗ್ಗಾಡುತ್ತವೆ. ಅದಕ್ಕಾಗಿ ಅವರು ತೋರಣ ಕಟ್ಟಲು ತಂದ ಹಸಿರು ಎಲೆಗಳನ್ನು, ಚಿಗುರನ್ನು ಹಿಡಿಯುತ್ತಾರೆ. ಆಗ ಆ ಪ್ರಾಣಿ ಚಿಗುರನ್ನು ತಿನ್ನುತ್ತ ಸುಲಭವಾಗಿ ಮುಂದೆ ಮುಂದೆ ಸಾಗುತ್ತದೆ. ಇನ್ನು ಸ್ವಲ್ಪ ಹೊತ್ತಿನಲ್ಲೇ ತನ್ನನ್ನು ಕೊಲ್ಲುವರು ಎಂಬ ಪ್ರಜ್ಞೆಯಿಲ್ಲದೆ ಬಲಿಯಾಗಲಿರುವ ದೇಹದ ಪೋಷಣೆ ಮಾಡುವುದರಲ್ಲೇ ನಿರತವಾಗಿರುತ್ತದೆ.

ಈ ವಚನದಲ್ಲಿ ಎರಡು ರೀತಿಯ ಸಂದೇಶಗಳಿವೆ. ಒಂದು, ಹರಕೆಗೆ ಬಿಟ್ಟ ಕುರಿ ಮುಂದೆ ಕೆಲವೇ ಕ್ಷಣಗಳಲ್ಲಿ ಸಾವು ಕಾದಿದೆ ಎಂಬ ಅರಿವು ಇಲ್ಲದೆ ತಳಿರು ತಿನ್ನುವುದರಲ್ಲಿಯೇ ಆಸಕ್ತಿ ಹೊಂದಿದೆ. ಅದೇ ರೀತಿ ಮಾನವನ ಪರಿಸ್ಥಿತಿ. ಮಾನವ ಸದಾ ಹರಕೆಯ ಕುರಿಯೆ. ಏಕೆಂದರೆ ಅವನ ಸಾವು ಆಗಲೇ ನಿರ್ಧಾರಿತವಾಗಿರುತ್ತದೆ. ಇಂಥ ಕ್ಷಣಿಕ ಜೀವನವನ್ನು ದೈವೀಧ್ಯಾನದಿಂದ ಸಾರ್ಥಕ ಪಡಿಸಿಕೊಳ್ಳಬೇಕು ಎಂಬ ಚಿಂತೆಯಿಲ್ಲದೆ ಬರೀ ಸುಖ ಭೋಗಗಳ ತಳಿರನ್ನು ತಿನ್ನುವುದರಲ್ಲೇ

ಆಸಕ್ತನಾಗಿರುತ್ತಾನೆ. ಮನುಷ್ಯ ಜೀವ ಬಹುಕ್ಷಣಿಕ. ಪ್ರತಿ ಕ್ಷಣದಲ್ಲೂ ಹುಟ್ಟು -ಸಾವು ಎರಡೂ ಇರುತ್ತದೆ. ಸುಖ ಭೋಗಗಳನ್ನು ಅನುಭವಿಸುತ್ತ ವ್ಯಕ್ತಿ ಹರ್ಷಿಸುವನು. ಆದರೆ ಸಾವು ಪ್ರತಿ ಕ್ಷಣದಲ್ಲೂ ಹತ್ತಿರ ಬರುತ್ತಿದೆ ಎಂಬುದನ್ನು ಅರಿಯನು.

ಈ ವಚನದ ಇನ್ನೊಂದು ಸಂದೇಶ ತಾಮಸ ಭಕ್ತರ ಕುರಿತಾಗಿ ಇದೆ. ಕ್ಷುದ್ರ ದೈವವನ್ನು ತೃಪ್ತಿ ಮಾಡುತ್ತೇವೆಂದು ಮುಗ್ಧ ಪ್ರಾಣಿಯಾದ ಕುರಿಯನ್ನು ಬಲಿಗೊಟ್ಟು ಸೃಷ್ಟಿಕರ್ತನ ಕೋಪಕ್ಕೆ ಪಾತ್ರರಾಗುವ ತಾಮಸ ಭಕ್ತರು ತಾವೇನು ಸಾಯದೆ, ಶಾಶ್ವತವಾಗಿ ಉಳಿದಿರುವರೆ?

134. ಕ್ಷಣಿಕ ಬದುಕು

ಹಾವಿನ ಬಾಯ ಕಪ್ಪೆ ಹಸಿದು,
ಹಾರುವ ನೊಣಕ್ಕೆ ಆಸೆ ಮಾಡುವಂತೆ,
ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು
ಮೇಲೇಸು ಕಾಲ ಬದುಕುವನೋ?
ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು ಒಡಲ ಹೊರೆವವರ
ಲಿಂಗದೇವನವರನೊಲ್ಲ ಕಾಣಿರಣ್ಣಾ! - ಬ.ವ.ದೀ. 132

ಹಾವು ಒಂದು ಕಪ್ಪೆಯನ್ನು ನುಂಗಿದೆ. ಅರ್ಧ ಶರೀರ ಒಳಗಿದೆ ಅರ್ಧ ಹೊರಗಿದೆ. ಇಂಥ ಸ್ಥಿತಿಯಲ್ಲಿ ಇನ್ನೊಂದು ನೊಣವನ್ನು ನುಂಗಿ ಹಸಿವೆಯನ್ನು ತೃಪ್ತಿ ಮಾಡಿಕೊಳ್ಳಲು ಬಯಸುತ್ತಿದೆ. ಅದೇ ರೀತಿ ಈ ಮಾನವ ಜೀವಿ ಸಾವೆಂಬ ಹಾವಿನ ಬಾಯೊಳಗಿರುವ ಕಪ್ಪೆಯಂತಿದೆ. ಹಗಲು -ರಾತ್ರಿ, ಪ್ರತಿಕ್ಷಣ ಕಳೆದಂತೆಲ್ಲ ಅದು ಸಾವಿನ ಒಳಕ್ಕೆ ಸರಿಯುತ್ತಿದೆ. ಇದನ್ನರಿಯದೆ ಕಪ್ಪೆ ಹಾರುವ ನೊಣವನ್ನು ಹಿಡಿಯುವ ಸಾಹಸ ಮಾಡುವಂತೆ ಮನುಷ್ಯ ಸುಖ ಭೋಗಗಳಿಗೆ ಹಾತೊರೆಯುತ್ತಾನೆ.

ಓರ್ವ ಕಳ್ಳನಿಗೆ ಶೂಲವನೇರುವ ಮರಣ ದಂಡನೆಯ ಶಿಕ್ಷೆ ವಿಧಿಸಲ್ಪಟ್ಟಿದೆ. ನಿಯಮದ ಪ್ರಕಾರ ಸಾಯುವ ಮುನ್ನ ನಿನ್ನ ಆಸೆಯನ್ನು ಈಡೇರಿಸಲಾಗುವುದು. ನಿನಗೇನು ಬೇಕು? ಎಂದು ಕೇಳುವರು. ಆಗ ಅವನು ದೇವನ ಧ್ಯಾನ- ಪೂಜೆ ಮುಂತಾಗಿ ಆಶಿಸದೆ ಹಾಲು -ತುಪ್ಪ ಬೇಕೆನ್ನುವನು. ಎಂಥಾ ಅಜ್ಞಾನಿ! ಹಾಲು -ತುಪ್ಪ ಕುಡಿದು ಇನ್ನೆಷ್ಟು ಕಾಲ ಬದುಕುವನು. ಶೂಲವು ಆಹುತಿ ತೆಗೆದುಕೊಳ್ಳಲು ಕಾಯುತ್ತಲಿದೆ.

ಅದೇ ರೀತಿ ಕೆಡುವ ಒಡಲನ್ನು ನಂಬಿ, ಅದಕ್ಕಾಗಿ ನೂರಾರು ಸುಳ್ಳು ಹೇಳಿ ಹಲವರಿಗೆ ವಂಚನೆ ಮಾಡಿ ತಮ್ಮ ಬದುಕು ಹೊರೆಯುವವರನ್ನು ಲಿಂಗದೇವರು ಮೆಚ್ಚಿಕೊಳ್ಳನು.

135. ದುರ್ಗುಣ - ದುರಾಚಾರ

ಆರತವಡಗದು, ಕ್ರೋಧ ತೊಲಗದು
ಕ್ರೂರ, ಕುಭಾಷೆ, ಕುಹಕ ಬಿಡದನ್ನಕ್ಕ
ನೀನೆತ್ತಲು ಶಿವನೆತ್ತಲು ಹೋಗತ್ತ ಮರುಳೆ!
ಭವರೋಗವೆಂಬ ತಿಮಿರ ತಿಳಿಯದನ್ನಕ್ಕ
ಲಿಂಗದೇವನೆತ್ತ ನೀನೆತ್ತ ಮರುಳೆ! - ಬ.ವ.ದೀ. 133

ಆರತ ಎಂದರೆ ಅತಿಯಾದ ವಿಷಯಾ (ಕಾಮಾ)ಸಕ್ತಿ. ಮನುಷ್ಯನಲ್ಲಿ ಅಂತರ್ಗತವಾಗಿರುವ ಹುಟ್ಟು ಗುಣಗಳಲ್ಲಿ ಒಂದಾದ ಕಾಮವನ್ನು ಎಲ್ಲರೂ ತೊರೆಯಬೇಕು ಎಂದು ಯಾವ ಧರ್ಮ ಶಾಸ್ತ್ರವೂ ಹೇಳುವುದಿಲ್ಲ. ಆದರೆ ಅದು ಹುಚ್ಚು ಕುದುರೆಯಂತೆ ಎಲ್ಲೆ ಮೀರಿ ಕುಣಿಯುವಂತಾಗಬಾರದು ಎಂದು ಧರ್ಮಶಾಸ್ತ್ರಗಳ ಅಭಿಪ್ರಾಯ. ತನ್ನ ಪತ್ನಿ ಇದ್ದೂ ಪರಸ್ತ್ರೀಯರೊನೆ ಚೆಲ್ಲಾಟವಾಡುವುದು. ಕಂಡ ಕಂಡ ಮಹಿಳೆಯರ ಮೇಲೆ ಕಣ್ಣು ಹಾಕುವುದು ಮುಂತಾದ ಚಟುವಟಿಕೆಗಳೆಲ್ಲ ಆರತದಲ್ಲಿ ಬರುತ್ತವೆ. ಇವನ್ನೆಲ್ಲ ಇಟ್ಟುಕೊಂಡು ಕೆಲವರು ದೇವಸ್ಥಾನಗಳನ್ನು ಸುತ್ತುವುದೇನು, ಅಭಿಷೇಕ ಮಾಡಿಸುವುದೇನು, ಹೋಮಹವನಾದಿಗಳನ್ನು ಮಾಡುವುದೇನು, ದಾನ ಕೊಡುವುದೇನು? ನೀತಿವಂತನಲ್ಲದ ಮನುಷ್ಯನ ಪೂಜೆಯನ್ನು ಲಿಂಗದೇವನು ಸ್ವೀಕರಿಸುವುದಿಲ್ಲ.

ಅತಿ ವಿಷಯಾಕಾಂಕ್ಷೆಯಂತೆಯೇ ಮತ್ತೊಂದು ಕೆಟ್ಟ ಗುಣವೆಂದರೆ ಕ್ರೋಧ. ಕೋಪವು ವ್ಯಕ್ತಿಯ ವಿವೇಕ ಶಕ್ತಿಯನ್ನೇ ನಾಶಮಾಡುವುದು. ಸಾಧಕ ಜೀವಿಯ, ಭಕ್ತನ ಸಲ್ಲಕ್ಷಣವೆಂದರೆ ಶಾಂತ ಗುಣ. ಕೋಪವು ಉದ್ರಿಕ್ತಗೊಂಡಾಗ ಏನೆಲ್ಲ ಅನಾಹುತವನ್ನು ಮಾಡಲು ಹಚ್ಚುತ್ತದೆ. ಆದ್ದರಿಂದ ಅದನ್ನು ನಿಗ್ರಹಿಸಬೇಕು? "ಕ್ರೂರ, ಕುಹಕ, ಕುಭಾಷೆ" ಯನ್ನು ಬಿಡಬೇಕು, ಕ್ರೂರ ಎಂದರೆ ಚುಚ್ಚು ಮಾತುಗಳನ್ನಾಡಿ ಇನ್ನೊಬ್ಬರನ್ನು ನೋಯಿಸುವುದು; ಅವರು ನೊಂದು ಅಳುತ್ತಿದ್ದರೆ ಅದನ್ನು ಕಂಡು ವಿಲಕ್ಷಣ ಆನಂದ ಅನುಭವಿಸುವುದು. ಇದು ಕೆಲವರ ಪ್ರವೃತ್ತಿಯಾಗಿರುತ್ತದೆ. ಅದಕ್ಕಾಗಿಯೇ ಧರ್ಮಪಿತ ಬಸವಣ್ಣನವರು ಮೃದು ವಚನವೇ ಜಪ, ತಪ ಎಂದು ಹೇಳಿರುವುದು. ಇನ್ನು ಕುಹಕ ಭಾಷೆ. ವ್ಯಂಗ್ಯವಾದ ಭಾಷೆಯಲ್ಲಿ ಹಾಯಿಸಿ ಮಾತನಾಡುವುದು; ಇನ್ನೊಬ್ಬರ ಮೇಲೆ ಹಾಕಿ ಚುಚ್ಚುವುದು- ಇದು ಸಹ ಬಹಳ ನೋವನ್ನು ಉಂಟು ಮಾಡುವಂತಹುದಾಗಿರುತ್ತದೆ. ಕುಭಾಷೆ ಎಂದರೆ ಬೈಗುಳ; ಕೆಟ್ಟ ಅಶ್ಲೀಲ ಪದಗಳನ್ನು ಬಳಸುವುದು. ಇವನ್ನೆಲ್ಲ ಅಂತರಂಗದಲ್ಲಿಟ್ಟುಕೊಂಡು ಶಿವನನ್ನು ಪೂಜಿಸುವೆನೆಂದರೆ ಶಿವನತ್ತ ನೀನತ್ತ ಹೋಗತ್ತ ಮರಳೆ ಎಂದು ಧರ್ಮಪಿತ ಬಸವಣ್ಣನವರು ಹೇಳುತ್ತಾರೆ. ಭವ ಎಂಬುದು ಒಂದು ತಿಮಿರ, ಕತ್ತಲೆ; ಈ ಕತ್ತಲೆಯಲ್ಲಿ ದೇವನೆಂಬ ದಿವ್ಯ ವಸ್ತು ಕಾಣದು. ಈ ಅಜ್ಞಾನದ ಕತ್ತಲೆ ತಿಳಿಯಾಗುತ್ತ ಹೋದಂತೆ ದೇವನೆಂಬ ದಿವ್ಯ ರತ್ನವು ಕಾಣಬರುವುದು.

136. ಸಿರಿಗರದ ಕೀಟಲೆ

ಹಾವು ತಿಂದವರ ನುಡಿಸಬಹುದು;
ಗರ ಹೊಡೆದವರ ನುಡಿಸಬಹುದು;
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ!
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರಯ್ಯಾ, ಲಿಂಗದೇವಾ! - ಬ.ವ.ದೀ. 134

ಹಾವು ತಿಂದವರ ಎಂಬುದು ವಿಲಕ್ಷಣ ಪ್ರಯೋಗ. 1. ಹಾವನ್ನು ತಿಂದವರು. 2. ಹಾವು ಕಡಿದವರು - ಈ ಎರಡೂ ಅರ್ಥಗಳನ್ನು ಇಲ್ಲಿ ಊಹಿಸಬಹುದು. ಕೆಲವು ಬುಡಕಟ್ಟುಗಳ ಜನರು ಹಾವುಗಳನ್ನು ಕೊಂದು ತಿನ್ನುತ್ತಾರೆ ಎಂದು ಹೇಳಲಾಗುತ್ತದೆ. ಎಲ್ಲ ಹಾವುಗಳು ವಿಷಪೂರಿತವೇನಲ್ಲ. ಮತ್ತು ಹಾವಿನ ಇಡೀ ದೇಹದಲ್ಲಿ ವಿಷವಿರುವುದಿಲ್ಲ. ಹೀಗಾಗಿ ಕೆಲವು ಕಾಡು ಜನರು ವಿಷಪೂರಿತವಾದ ಚೀಲದ ಭಾಗ ತೆಗೆದುಹಾಕಿ ಹಾವನ್ನು ತಿನ್ನುವರಂತೆ. ಇಂಥ, ಹಾವು ತಿಂದಂತಹ ಜನರನ್ನು ಮಾತನಾಡಿಸಬಹುದು. ಇನ್ನೊಂದು ಅರ್ಥದಲ್ಲಿ, ಹಾವು ಕಡಿದು ವಿಷವೇರಿದವರನ್ನು ಸಹ ಮದ್ದನ್ನು ಕೊಟ್ಟು ಮಾತನಾಡಿಸಬಹುದು. ಗರ ಬಡಿದವರು ಅಂದರೆ ಅಘಾತವಾಗಿ ಸ್ತಂಭೀಭೂತ ಸ್ಥಿತಿಯಲ್ಲಿ ಇರುವವರನ್ನು ಸಹ ಮಾತನಾಡಿಸಬಹುದು. ಕೆಲವರು ಗರ ಬಡಿದವರು ಎಂದರೆ ದೆವ್ವ ಹಿಡಿದವರು ಎಂದು ಸಹ ಅರ್ಥ ಮಾಡುತ್ತಾರೆ. ಇಲ್ಲಿ ಅದು ಉಚಿತವಾಗದು. ಮನುಷ್ಯನಿಗೆ ಅತೀವ ದುಃಖವಾದಾಗ (ಕೆಲವೊಮ್ಮೆ ಅತೀವ ಸಂತೋಷವಾದಾಗಲೂ) ಗಂಭೀರ ಮೌನ ತಾಳಿದ ಸ್ತಂಭೀಭೂತ ಸ್ಥಿತಿ ಪ್ರಾಪ್ತಿಯಾಗುವುದುಂಟು. ಇದು ಬಹಳ ಅಪಾಯಕಾರಿ. ಅತ್ತು ಬಿಟ್ಟರೆ ಅಂತರಂಗದಲ್ಲಿ ಮಡುಗಟ್ಟಿದ ದುಃಖವು ಹೊರಹೋಗುವುದು. ಅಳದೆ, ಪಿಳಿಪಿಳಿ ಕಣ್ಣು ಬಿಡುತ್ತ ಮೌನವಾದ ಸ್ಥಿತಿಯಲ್ಲಿ ಇರುವುದಕ್ಕೆ ಗರ ಬಡಿದ ಸ್ಥಿತಿ ಎನ್ನುವುದುಂಟು. ಇಂಥವರನ್ನು ಸಹ ಯಾವುದಾದರೂ ಉಪಾಯದಿಂದ ಮಾತಾಡುವಂತೆ ಮಾಡಬಹುದು. ಆದರೆ ಶ್ರೀಮಂತಿಕೆಯ ಗರ ಬಡಿದವರನ್ನು ಮಾತನಾಡಿಸುವುದು ಮಾತ್ರ ಬಲು ಕಠಿಣ. ಏಕೆಂದರೆ ಹಣದ ಮದ ತುಂಬಿ ತುಳುಕುತ್ತದೆ. ವಿನಯ -ಸೌಜನ್ಯ ಬತ್ತಿ ಹೋಗಿರುತ್ತವೆ. ಶ್ರೀಮಂತಿಕೆ ಇದ್ದೂ ವಿನಯ ಸಂಪನ್ನರಾಗಿ ಇರುತ್ತ ದಾನ ಧರ್ಮ ಪರೋಪಕಾರಗಳಲ್ಲಿ ತಲ್ಲೀನರಾಗಿರುವ ಧನವಂತರ ಬಳಿ ಸಂಪತ್ತು ಚಿರಕಾಲ ಇರುತ್ತದೆ. ದುರಹಂಕಾರದಿಂದ ವರ್ತಿಸುವವರ ಬಳಿಯಿಂದ ಸಂಪತ್ತು ಬೇಗನೆ ತೊಲಗುತ್ತದೆ. ಏಕೆಂದರೆ ಬಡತನವೆಂಬ ಮಂತ್ರವಾದಿ ಬರುತ್ತಲೇ ವ್ಯಕ್ತಿಯು ವಿನೀತನಾಗಿ ಎಲ್ಲರ ಮುಂದೆ ತಲೆಬಾಗಿ, ಕೈಚಾಚಿ ನಿಲ್ಲುತ್ತಾನೆ. ಜ್ಞಾನಿಗಳಾದವರು ಸಂಪತ್ತು ಇದ್ದರೂ ವಿನಯದಿಂದ ವರ್ತಿಸುತ್ತಾರೆ. ಅಜ್ಞಾನಿಗಳು ಸಿರಿವಂತಿಕೆಯ ಮದದಿಂದ ಬೀಗುತ್ತಾರೆ.

137. ಅರೆ ಭಕ್ತರ ಸಹವಾಸ ಸಲ್ಲ

ಅರೆ ಭಕ್ತರಾದವರ ನೆರೆ ಬೇಡ, ಹೊರೆ ಬೇಡ.
ದಾರಿ ಸಂಗಡ ಬೇಡ; ದೂರ! ನುಡಿಯಲು ಬೇಡ
ಲಿಂಗದೇವನ ಶರಣರಲ್ಲಿ
ಅಚ್ಚ ಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ - ಬ.ವ.ದೀ. 135

ಒಬ್ಬನು ನಿಜ ಶರಣನಾಗಿರುತ್ತಾನೆ ಎಂದುಕೊಳ್ಳೋಣ. ಅವನು ಪೂರ್ತಿ ಅಜ್ಞಾನಿಯಾದವನ ಕೂಡ ಒಡನಾಡುವಾಗಲೂ ಎಚ್ಚರವಾಗಿರುತ್ತಾನೆ. ಪೂರ್ಣ ಜ್ಞಾನಿಯಾದವನ ಒಡನಾಡಿದಾಗ ಉತ್ತಮ ಜ್ಞಾನವನ್ನು ಹೊಂದುತ್ತಾನೆ. ಅರೆ ಭಕ್ತರಾದವರ ಸಂಗ ಮಾಡಿದಾಗ ಗೊಂದಲಕ್ಕೆ ಒಳಗಾಗುತ್ತಾನೆ. ಏಕೆಂದರೆ ಅವರ ಆಚರಣೆ ನೋಡಿ ಇದೇ ತನ್ನ ಧರ್ಮವಿರಬಹುದೇನೋ ಎಂಬ ಗೊಂದಲ ಉಂಟಾಗುತ್ತದೆ. ಅಂಥವರ ಹಂಗಂತೂ ಖಂಡಿತಾ ಸಲ್ಲ. ದಾರಿಯಲ್ಲೂ ಜೊತೆಗೂಡಿ ಸಾಗಬಾರದು. ಏಕೆಂದರೆ ಈ ಅರೆಭಕ್ತರು ಹೋಗುತ್ತಾ ಯಾವುದೇ ಗುಡಿ ಕಂಡಲ್ಲಿ, ಬಣ್ಣದ ಕಲ್ಲು ಕಂಡಲ್ಲಿ ನಮಿಸುವರು. ತತ್ವನಿಷ್ಠರು ನಮಿಸದೆ ಇದ್ದಾಗ ಅವನು ನಾಸ್ತಿಕನೆಂದು ವ್ಯಂಗ್ಯವಾಡುವರು. ಈ ಅರೆಭಕ್ತರಿಂದ ದೂರವಿರಬೇಕು, ಹೆಚ್ಚು ಮಾತನಾಡಲು ಹೋಗಬಾರದು. ಏಕೆಂದರೆ ಅವರು ತಮ್ಮ ಮೂಢ ಭಕ್ತಿಯನ್ನು ಬಿಟ್ಟು ಜ್ಞಾನಿಗಳಾಗುವ ಬದಲು ಇವರನ್ನೇ ಪರಿಪರಿಯಾಗಿ ಪರಿವರ್ತಿಸಲು ನೋಡುವರು. ತತ್ವನಿಷ್ಠರಾದ ನಿಜ ಶರಣರು ಸಿಕ್ಕಿದಾಗ ಅವರ ಬಳಿ ಸೇವಕರಾಗಿದ್ದರೂ ಪರವಾಗಿಲ್ಲ. ಅವರ ಒಡನಾಟದಿಂದ ನಿಜ ಜ್ಞಾನಿಯಾಗುವನು.

ಈ ವಚನವನ್ನು ಪಾಲಿಸುವುದು ಬಹು ಕಠಿಣ. ಏಕೆಂದರೆ ಬೆರಳೆಣಿಕೆಯಷ್ಟು ಬಿಟ್ಟರೆ ಉಳಿದೆಲ್ಲ ಮಠಾಧೀಶರು ಅರೆಭಕ್ತರೆ! ಅವರು ಕಟ್ಟಿರುವುದು ಇಷ್ಟಲಿಂಗವನ್ನು. ಅವರು ಮಾಡುವ ಲಿಂಗಪೂಜಾ ವಿಧಾನದಿಂದ ಹಿಡಿದು, ಗಣಪತಿ ಮುಂತಾದ ಅನ್ಯ ದೇವತಾರ್ಚನೆ ಇತ್ಯಾದಿ ಆಚರಣೆ ಗಳೆಲ್ಲವೂ ಸ್ವಧರ್ಮ ವಿರೋಧಿ ಆಚರಣೆಗಳು. ಇಂಥ ಅರೆಭಕ್ತರ ಒಡನಾಟವನ್ನು ಭಕ್ತರು ಮಾಡಲೇ ಬಾರದು. ಇದು ಸಾಧ್ಯವೆ?

138. ಅರೆ ಭಕ್ತರ ಸಹವಾಸ ಸಲ್ಲ

ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ
ದೂರ; ದುರ್ಜನರ ಸಂಗ ಭಂಗವಯ್ಯಾ
ಸಂಗವೆರಡುಂಟು; ಒಂದು ಹಿಡಿ, ಒಂದು ಬಿಡು,
ಮಂಗಳಮೂರ್ತಿ ನಮ್ಮ ಲಿಂಗದೇವನ ಶರಣರ. - ಬ.ವ.ದೀ. 136

ಒಡನಾಡಿಗಳು ಎರಡು ಬಗೆ. ಸಜ್ಜನರು ಮತ್ತು ದುರ್ಜನರು ಎಂದು. ಸಜ್ಜನರು ಪ್ರಾಮಾಣಿಕರು, ಸಾತ್ವಿಕರು, ನಿರ್ವಂಚಕರು. ಅವರು ಎಂದೂ ಸುಳ್ಳು ಹೇಳರು, ಇನ್ನೊಬ್ಬರನ್ನು ವಂಚಿಸರು. ದುರ್ಜನರು ಹಾಗಲ್ಲ ಸಾತ್ವಿಕರನ್ನು ಮುಗ್ಧರನ್ನು ಹೇಗೆ ವಂಚಿಸಬೇಕು ಎಂಬ ತಂತ್ರವನ್ನು ಸದಾ ಹೆಣೆಯುವರು. ನಂಬಿದವರ ಗೋಣು ಕೊಯ್ಯುವವರು. ಆದ್ದರಿಂದ ವ್ಯಕ್ತಿಯು ಹುಡುಕಿ ಹುಡುಕಿ ಸಜ್ಜನರ ಸಂಗವನ್ನೇ ಮಾಡಬೇಕು. ಈ ಜಗತ್ತಿನಲ್ಲಿ ಲೌಕಿಕರು, ದುರ್ಜನರ ಸಂಖ್ಯೆಯೇ ಬಹಳ. ಏನು ಮಾಡಬೇಕು? ಅಹಿಂಸಾತ್ಮಕ ಪ್ರಾಣಿಗಳೆಲ್ಲ ಗುಂಪು ಗೂಡಿಯೇ ಬದುಕುವಂತೆ ಲಿಂಗದೇವನ ಶರಣರ ಒಂದು ಒಕ್ಕೂಟವನ್ನು (Holy Fellowship) ರಚಿಸಿಕೊಳ್ಳಬೇಕು; ತಮ್ಮ ಧರ್ಮ - ಸಂಸ್ಕೃತಿಗಳನ್ನು ರಕ್ಷಿಸಿ ಕೊಳ್ಳಬೇಕು.

139. ಶರಣರ ಒಡನಾಟ

ಹೊಲೆಯ ಹೊಲಬಿಗನಾದಡೆ,
ಅವನ ಹೊರೆಯಲ್ಲಿಪ್ಪುದು ಲೇಸು ಕಂಡಯ್ಯಾ
ಹೊಲಬುಗೆಡದೆ ಲಿಂಗಶರಣೆನ್ನಿರಯ್ಯಾ,
ಹೊಲಬುಗೆಡದೆ ಶರಣರಿಗೆ ಶರಣೆನ್ನಿರಯ್ಯಾ.
ನಮ್ಮ ಲಿಂಗದೇವನ ಮಹಾಮನೆಯಲು
ಮಾದಾರ ಚನ್ನಯ್ಯ ಹೊಲಬಿಗನಯ್ಯಾ - ಬ.ವ.ದೀ. 137

ಹೊಲೆಯ ಅಂದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಶ್ರೇಣಿಯಲ್ಲಿರುವ ವ್ಯಕ್ತಿ ಸಹ ಶರಣ ಪಥಕ್ಕೆ ಬಂದರೆ ಆಗ ಸಂಕೋಚವಿಲ್ಲದೆ ಅವನ ಒಡನಾಟದಲ್ಲಿರಬಹುದು; ಮಾತ್ರವಲ್ಲ ಆತನ ಕೈ ಕೆಳಗೆ ಉದ್ಯೋಗವನ್ನು ಮಾಡಬಹುದು. ಆತನ ಹೊರೆ - ಅರ್ಥಾತ್ ಹಂಗಿನಲ್ಲಿ ಇರಬಹುದು. ಏಕೆಂದರೆ ಶರಣರು ಕಷ್ಟಕಾಲದಲ್ಲಿ ನೆರವು ನೀಡಿದರೆ ಪದೇ ಪದೇ ಅದನ್ನು ಎತ್ತಿ ಆಡುವುದಿಲ್ಲ. ಹಂಗಿಸುವುದಿಲ್ಲ; ವ್ಯಕ್ತಿಯ ಸ್ವಾಭಿಮಾನಕ್ಕೆ ಧಕ್ಕೆ ತರುವುದಿಲ್ಲ. ಅದಕ್ಕಾಗಿ ಧರ್ಮಪಿತ ಬಸವಣ್ಣನವರು ಕರೆ ಕೊಡುತ್ತಾರೆ. ಹೊಲಬು ಅಂದರೆ ದಾರಿ ತಪ್ಪಿ, ಎಲ್ಲೆಲ್ಲೋ ಹೋಗಬೇಡಿರಿ. ಲಿಂಗದೇವನಿಗೆ ಶರಣಾಗಿರಿ. ಲಿಂಗ ಪಥದಲ್ಲಿರುವ ಶರಣರಿಗೆ ಶರಣೆನ್ನಿರಿ. ನಮ್ಮ ಲಿಂಗದೇವನ ಮಹಾಮನೆಯಲ್ಲಿ ಮಾದಾರ ಚೆನ್ನಯ್ಯ ನಿಜ ಶರಣ ಮಾರ್ಗಿ ಎಂಬುದನ್ನರಿಯಿರಿ.

ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ಮಾದಾರ ಚನ್ನಯ್ಯನ ಹೆಸರು, ದಾಸಯ್ಯನ ಹೆಸರು ಹಲವು ಬಾರಿ ಬಂದು ಸಾಹಿತಿಗಳು, ಸಂಶೋಧಕರು ಮುಂತಾದವರು ಗೊಂದಲದಲ್ಲಿ ಸಿಲುಕಿದ್ದಾರೆ. ಅದೇ ಗೊಂದಲವನ್ನು ಜನರಿಗೆ ತುಂಬುತ್ತಿದ್ದಾರೆ. ಕಾಂಚೀಪುರದ ರಾಜೇಂದ್ರ ಚೋಳನ ಬಳಿ ಇದ್ದ ಮಾದಾರ ಚನ್ನಯ್ಯ ಬೇರೆ; ಅನುಭವ ಮಂಟಪದಲ್ಲಿದ್ದ ಮಾದಾರ ಚನ್ನಯ್ಯ ಬೇರೆ. ಆತ ಕುದುರೆಯ ಲಾಯಕ್ಕೆ ಹುಲ್ಲು ಒದಗಿಸುವ ಕಾಯಕ ಮಾಡುತ್ತಿದ್ದ. ಶಿವನಿಗೆ ಬೇಕೆಂದು ಉಣ್ಣುತ್ತಿದ್ದ ಅಂಬಲಿಯಿಂದ ಕೈತೆಗೆದವನು ಆತ. ಅನುಭವ ಮಂಟಪದ ಚನ್ನಯ್ಯ ಬಸವಾದಿ ಪ್ರಮಥರ ಸಮಕಾಲೀನ. ಅದೇ ರೀತಿ ದೇವರ ದಾಸಿಮಯ್ಯ ಬಸವಾದಿ ಪ್ರಮಥರಿಗೂ ಹಿಂದಿನವನು. ಸೀರೆಯನ್ನು ನೀಡಿ ತವನಿಧಿ ಪಡೆದವನು. ಜೇಡರ ದಾಸಿಮಯ್ಯ ವಚನಕಾರ ಮತ್ತು ಅನುಭವ ಮಂಟಪದ ಶರಣ.

140. ದೂಷಕರ ನೆರೆ ಹೊಲ್ಲ

ದೂಷಕನವನೊಬ್ಬ ದೇಶವ ಕೊಟ್ಟಡೆ,
ಆಸೆ ಮಾಡಿ ಅವನ ಹೊರೆಯಲಿರಬೇಡ;
ಮಾದಾರ ಶಿವ ಭಕ್ತನಾದಡೆ.
ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರಲೇಸಯ್ಯಾ!
ತೊತ್ತಾಗಿಪ್ಪುದು ಕರಲೇಸಯ್ಯಾ!
ಕಾಡ ಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟುಕೊಂಡು
ಕೂಡಿಕೊಂಡಿಪ್ಪುದು ನಮ್ಮ ಲಿಂಗದೇವನ ಶರಣರ. - ಬ.ವ.ದೀ. 138

ದೂಷಕ ಎಂದರೆ ಕೊಟ್ಟು ಸದಾ ಹಂಗಿಸುವವನು. ಕೆಲವರು ಅನಿವಾರ್ಯವಾಗಿ ಸಹಾಯ ಮಾಡುವರು. ಆದರೆ ತಾವು ಸಹಾಯ ಮಾಡಿರುವುದಾಗಿ ಪುನಃ ಪುನಃ ಚುಚ್ಚಿ ಹೇಳುವರು. ಸಹಾಯ ಮಾಡಿಸಿಕೊಂಡವರು ದಾಸ್ಯದಲ್ಲಿ ದೀನರಾಗಿದ್ದುಕೊಂಡು ಮಾಡಿದ ಸಹಾಯವನ್ನು ಸದಾ ಸ್ಮರಿಸಿಕೊಳ್ಳಬೇಕೆಂದು ಒಂದು ದೇಶವನ್ನು ಕೊಡುತ್ತೇವೆ ಎಂದರೂ ನಿಜ ಶರಣನು ಆಸೆ ಮಾಡಿ ದೂಷಕದಾನಿಗಳ ಹಂಗಿನಲ್ಲಿ ಇರಬಾರದು. ಮಾದಾರ ಅಂದರೆ ಸಾಮಾಜಿಕ ಕೆಳ ಶ್ರೇಣಿಯಲ್ಲಿ ಇಡಲ್ಪಟ್ಟ ಒಬ್ಬ ವ್ಯಕ್ತಿ ಶರಣ ಮಾರ್ಗಿಯಾದಡೆ ಅಂಥವನ ಹಂಗಿನಲ್ಲಿ, ಕೈ ಕೆಳಗೆ ಸೇವಕನಾಗಿ ಇರುವುದು ಬಹಳ ಲೇಸು; ತೊತ್ತಾಗಿರುವುದು ಲೇಸು. ಹಂಗಿಸುವ ಸಿರಿವಂತರ ಒಡನಾಟಕ್ಕಿಂತ, ಕಾಡ ಸೊಪ್ಪನ್ನು ಆಯ್ದು ತಂದು, ಹೆಂಚಿನಲ್ಲಿ ಹುರಿದಿಟ್ಟುಕೊಂಡು ಲಿಂಗದೇವನ ಶರಣರ ಒಡನಾಟದಲ್ಲಿ, ನೆರೆಯಲ್ಲಿ ಇರುವುದು ಒಳ್ಳಿತು.

ಜೀವನದಲ್ಲಿ ಕೆಲವು ಸನ್ನಿವೇಶ ಒದಗುತ್ತವೆ. ಗುರು ಬಸವಣ್ಣನವರ ಮಾತೃಹೃದಯಕ್ಕೆ, ತತ್ವಕ್ಕೆ ಮಾರುಹೋಗಿ ಕೆಲವು ಹಿಂದುಳಿದ ಜಾತಿಗಳವರು ದೀಕ್ಷೆಯನ್ನು ಪಡೆದು ಶರಣ ಮಾರ್ಗಿಗಳಾಗುತ್ತಾರೆ. ಮುಗ್ಧ ಭಕ್ತರಾದ ಅವರು ಅಷ್ಟೇ ನಿಷ್ಠಾವಂತರಾಗಿರುತ್ತಾರೆ. ಹುಟ್ಟು ಲಿಂಗಾಯತರಲ್ಲಿ ಕೆಲವರು ನಿಷ್ಠಾವಂತ ಶರಣರು ಅಂತಹ ದೀಕ್ಷಿತರ ಜೊತೆ ಪ್ರಾರ್ಥಿಸಲು, ಪೂಜಿಸಲು, ಭಜನೆ ಮಾಡಲು, ಬೆರೆಯಲು ಇಷ್ಟಪಡುತ್ತಾರೆ. ಆದರೆ ಅವರ ಮನೆಯವರು, ಮೇಲ್ಜಾತಿ ಲಿಂಗಾಯತರು ಸಿಡಿಸಿಡಿ ಮಾಡುತ್ತಾರೆ. ನಿಜ ಭಕ್ತರು ನಿಜ ಭಕ್ತಿಯುಳ್ಳವರ ಒಡನಾಟವನ್ನೇ ಬಯಸುತ್ತಾರೆ. ಅದು ಧರ್ಮಪಿತರ ಮೇಲಿನ ವಚನದಲ್ಲಿ ಅಭಿವ್ಯಕ್ತವಾಗಿದೆ.

141. ಲಿಂಗದೇವನ ಪರುಷ ಸ್ಪರ್ಶ

ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು ನೋಡಾ!
ಲಿಂಗ ಮುಟ್ಟಿದ ಬಳಿಕ ಕುಚಿತ್ತಾಚಾರವಾಗದು ನೋಡಾ!
ಲಿಂಗದೇವನ ಶರಣರು ಅನ್ಯವನರಿಯರಾಗಿ. - ಬ.ವ.ದೀ. 138

ಪರುಷವು ಕಬ್ಬಿಣವನ್ನು ಮುಟ್ಟಿದ ಬಳಿಕ ಅದು ಬಂಗಾರವಾಗುವುದು, ಪುನಃ ಕಬ್ಬಿಣವಾಗದು. ಹಾಗೆ ಇಷ್ಟಲಿಂಗ ದೀಕ್ಷೆ ಪಡೆದುಕೊಂಡ ಬಳಿಕ ಸದಾಚಾರ ಉಳ್ಳ ಸದ್ಭಕ್ತನಾಗಬೇಕೇ ವಿನಾ ದುರ್ಮಾರ್ಗಿ, ದುರಾಚಾರಿ ಆಗಬಾರದು. ಏಕೆಂದರೆ ಲಿಂಗದೇವನ ಶರಣರು ಇಷ್ಟಲಿಂಗದ ಮಾರ್ಗದ ಹೊರತು ಬೇರೆ ಅರಿಯರು.

142. ಭಕ್ತರಲ್ಲಿ ಕುಲವನ್ನರಸಬಾರದು

ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ?
ಲಿಂಗದೇವನ ಪೂಜಿಸಿ ಕುಲವನರಸುವರೆ?
ಲಿಂಗದೇವ
ಭಕ್ತಕಾಯ ಮಮಕಾಯವೆಂದನಾಗಿ! - ಬ.ವ.ದೀ. 139

ರಾಜನ ಸಿಂಹಾಸನಕ್ಕೆ ಅಥವಾ ಗುರು ಪೀಠಕ್ಕೆ ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ ಹಲವಾರು ಲಕ್ಷಣಗಳನ್ನು ನೋಡುವರು. ಪಟ್ಟವನ್ನು ಕಟ್ಟುವ ಮೊದಲೇ ಲಕ್ಷಣಗಳನ್ನು ಹುಡುಕಬೇಕು. ಒಮ್ಮೆ ಪಟ್ಟಕ್ಕೆ ಏರಿಸಿದ ಬಳಿಕ ನೋಡಲು ಹೋಗಬಾರದು. ಅದೇ ರೀತಿ ಯಾವ ಜಾತಿ ಕುಲ ಮತದವರಿಗೇ ಆಗಲಿ ದೀಕ್ಷೆಯನ್ನು ನೀಡಿ, ಅವರು ಲಿಂಗದೇವನನ್ನು ಪೂಜಿಸುವಾಗ ಅವರ ದೀಕ್ಷಾ ಪೂರ್ವದ ಕುಲವನ್ನು ಹುಡುಕಲು ಹೋಗಬಾರದು. ಏಕೆಂದರೆ ದೇವನು, "ಭಕ್ತನ ಶರೀರವೇ ನನ್ನ ಶರೀರ. ಭಕ್ತನ ಮೂಲಕ ನಾನು ಪ್ರಕಟಗೊಳ್ಳುತ್ತೇನೆ." ಎನ್ನುವನು.

143. ಎಲ್ಲ ಲೋಕಗಳೂ ಇಲ್ಲಿಯೇ ಇವೆ.

ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ?
ಈ ಲೋಕದೊಳಗೆ ಮತ್ತೆ ಅನಂತ ಲೋಕ!
ಶಿವಲೋಕ ಶಿವಾಚಾರವೆಯ್ಯಾ
ಶಿವಭಕ್ತನಿದ್ದ ಠಾವೆ ದೇವಲೋಕ,
ಭಕ್ತನಂಗಳವೆ ವಾರಣಾಸಿ; ಕಾಯವೆ ಕೈಲಾಸ!
ಇದು ಸತ್ಯ, ಲಿಂಗದೇವಾ. -ಬ.ವ.ದೀ.140

ಪುರಾಣಗಳಲ್ಲಿ ಹಲವಾರು ಲೋಕಗಳ ವರ್ಣನೆ ಬರುತ್ತದೆ. ಊರ್ಧ್ವ ಲೋಕ ಅಧೋ ಲೋಕ ಎಂಬುದಾಗಿ. ದೇವಲೋಕವು ಊರ್ಧ್ವಲೋಕ, ಅಲ್ಲಿ ದೇವತೆಗಳು ಇರುತ್ತಾರೆ ಎಂದೆಲ್ಲ ಬಣ್ಣಿಸಲಾಗುತ್ತದೆ. ಧರ್ಮಪಿತ ಬಸವಣ್ಣನವರ ಪ್ರಕಾರ ಎಲ್ಲ ಲೋಕಗಳೂ ಈ ಮರ್ತ್ಯಲೋಕದಲ್ಲಿಯೇ ಇವೆ. ಶಿವಾಚಾರವಿದುದೇ ಶಿವಲೋಕ. ಸಾಮಾನ್ಯವಾಗಿ ಶಿವಲೋಕದ ಕಲ್ಪನೆಯಲ್ಲಿ ಶಿವಲೋಕ ವಾಸಿಗಳು ಯಾವ ಭೇದವಿಲ್ಲದೆ ಶಿವ ಮಹಿಮೆಯನ್ನು ಹಾಡುತ್ತ, ಶಿವನನ್ನು ಕೊಂಡಾಡುತ್ತ, ಹಸಿವು ತೃಷೆ ನಿದ್ರೆಗಳಿಲ್ಲದೆ ಆನಂದದಿಂದ ಇರುತ್ತಾರೆ. ಧರ್ಮಪಿತ ಬಸವಣ್ಣನವರ ದೃಷ್ಟಿಯಲ್ಲಿ ಶಿವಾಚಾರ ಅಂದರೆ ಸಾಮಾಜಿಕ, ಧಾರ್ಮಿಕ ಸಮತೆ ಇರುವುದೇ ಶಿವಲೋಕ. ಏಕೆಂದರೆ ಅಲ್ಲಿ ಭೇದವಿಲ್ಲ; ಎಲ್ಲರಿಗೂ ಸಮಾನವಾದ ಸಾಮಾಜಿಕ, ಧಾರ್ಮಿಕ ಹಕ್ಕುಗಳಿವೆ. ಆದ್ದರಿಂದ ಸತ್ತನಂತರ ಸಿಗಬಹುದಾದ ಭ್ರಾಂತ್ಯಾತ್ಮಕ ಶಿವಲೋಕಕ್ಕೆ ಹಂಬಲಿಸುವುದಕ್ಕಿಂತಲೂ ಶಿವಾಚಾರವನ್ನ ಅಂದರೆ ಸಾಮಾಜಿಕ, ಧಾರ್ಮಿಕ ಸಮಾನತೆಯನ್ನು ಸಮಾಜದಲ್ಲಿ ಸ್ಥಾಪಿಸಿಬಿಟ್ಟರಾಯಿತಲ್ಲವೆ?

"ಭಕ್ತನಿದ್ದ ಠಾವೇ ದೇವಲೋಕ". ಎಲ್ಲಿ ಸದ್ಭಕ್ತನು ವಾಸವಾಗಿರುವನೋ ಅಲ್ಲಿ ಪೂಜೆ -ಪ್ರಾರ್ಥನೆ -ಧ್ಯಾನ - ಅನುಭವ ಗೋಷ್ಠಿ, ಸಚ್ಚಿಂತನೆ ನಡೆಯುತ್ತವೆ. ಅದೇ ದೇವಲೋಕ. ಭಕ್ತನ ಮನೆಯ ಅಂಗಣವೇ ಕಾಶಿ ಕ್ಷೇತ್ರ; ಕೇವಲ ಪುಣ್ಯ ಪ್ರದಾಯಕ ಮಾತ್ರವಲ್ಲ ಜ್ಞಾನ ಪ್ರದಾಯಕ. ಶರಣನು ಪವಿತ್ರಾತ್ಮನಾದ್ದರಿಂದ ಅವನ ಶರೀರವೇ ಕೈಲಾಸ. ಲಿಂಗದೇವನ ಸಾಕ್ಷಿಯಾಗಿ ಗುರು ಬಸವಣ್ಣನವರು "ಇದು ಸತ್ಯ" ಎಂದು ದೃಢವಾಗಿ ಹೇಳುವರು.

144. ಶರಣರ ಸಂಗ

ಕಟ್ಟಿದಿರಿನಲ್ಲಿ ಸದ್ಭಕ್ತನ ಕಂಡು
ದೃಷ್ಟಿಯಾರೆ ಶರಣೆಂದಡೆ
ಹುಟ್ಟೇಳು ಜನ್ಮದ ಪಾಪ ಬಿಟ್ಟುಹೋಹುದು ನೋಡಾ!
ಮುಟ್ಟಿ ಚರಣಕ್ಕೆರಗಿದಡೆ,
ತನುವೊಪ್ಪಿದಂತೆ ಅಹುದು ಪರುಷ ಮುಟ್ಟಿದಂತೆ.
ಕರ್ತೃ ಲಿಂಗದೇವನ ಶರಣರ ಸಂಗವು
ಮತ್ತೆ ಭವಮಾಲೆಗೆ ಹೊದ್ದಲೀಯದು ನೋಡಾ! -ಬ.ವ.ದೀ.142

ದಾರಿಯಲ್ಲಿ ಹೋಗುವಾಗ ಎದುರಿನಲ್ಲಿ ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗ ಧಾರಿಯಾದ ಓರ್ವ ಸದ್ಭಕ್ತನು ಬರುತ್ತಿದ್ದರೆ ಅವನನ್ನು ಕಣ್ತುಂಬ ನೋಡಿ "ಶರಣು" ಎಂದು ಕೈ ಮುಗಿಯಬೇಕು. ಇದರಿಂದ ಏಳೇಳು ಜನ್ಮಗಳ ಪಾಪ ತೊಲಗಿ ಹೋಗುವುದು. ಇನ್ನೂ ಮುಂದುವರಿದು ಪಾದಸ್ಪರ್ಶ ಮಾಡಿ, ಚರಣಕ್ಕೆ ಎರಗಿದರೆ ಆಗ ಶರೀರವು ದೈವೀಕರಣಗೊಳ್ಳುವುದು, ಕಬ್ಬಿಣವು ಪರುಷವನ್ನು ಸ್ಪರ್ಶಿಸಿದಂತೆ ಪೂಜಾ ನಿಷ್ಠರು, ನಿರ್ಮಲ ಅಂತಃಕರಣ ಉಳ್ಳವರು ಆದವರ ದೇಹದ ಸುತ್ತಲೂ ಒಂದು ಪ್ರಭಾವಳಿ (Aura) ಇರುತ್ತದೆ. ಆ ಪ್ರಭಾವಳಿಯ ವಲಯಕ್ಕೆ ಬಂದಾಗ ದೈವೀ ತರಂಗಗಳು (Divine Vibrations) ಪ್ರಭಾವ ಬೀರುತ್ತವೆ.

ಇದೇ ಅನುಭವವನ್ನು ಜೇಡರ ದಾಸಿಮಯ್ಯ ಶರಣರು ಹೀಗೆ ಹೇಳುತ್ತಾರೆ.

ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ
ಆ ತೃಣವನಾ ಕೆಂಡ ಕೊಂಡ ತೆರದಿ
ಗುರು ಚರಣದ ಮೇಲೆ ತನುವ ತಂದಿರಿಸಲು
ಸರ್ವಾಂಗ ಲಿಂಗವೈ ರಾಮನಾಥ॥

ಉರಿಯುವ ಕೆಂಡದ ಮೇಲೆ ಹುಲ್ಲನ್ನು ಇಟ್ಟಾಗ ಹೇಗೆ ಆ ತೃಣವನ್ನು ತನ್ನಂತೆ ಮಾಡಿಕೊಳ್ಳುವುದೋ ಹಾಗೆ ಗುರುವಿನ ಚರಣದ ಮೇಲೆ ಶರೀರವನ್ನು ಇಟ್ಟಾಗ ಅಂದರೆ ಹಣೆಯನ್ನು ಹಚ್ಚಿದಾಗ, ಸರ್ವಾಂಗವೂ ದೈವೀಮಯವಾಗುತ್ತದೆ. ಸೃಷ್ಟಿಕರ್ತ ಲಿಂಗದೇವನ ಶರಣರ ಸಂಗವು ಮತ್ತೆ ಹುಟ್ಟು - ಸಾವುಗಳ ಜಂಜಾಟಕ್ಕೆ ಸಿಲುಕಿಸುವುದಿಲ್ಲ.

145. ಶರಣರ ಸಂಗದಿಂದ ಕರ್ಮ ನಿರ್ಮಳ

ಆರಾರ ಸಂಗವೇನೇನ ಮಾಡದಯ್ಯಾ?
ಕೀಡೆ ಕುಂಡಲಿಗನಾಗದೇ ಅಯ್ಯಾ?
ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ,
ಬೇವು, ಬೊಬ್ಬುಲಿ ತರೆಯ ಗಂಧಂಗಳಾಗವೆ?
ನಮ್ಮ ಲಿಂಗದೇವನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ? -ಬ.ವ.ದೀ.143

ಒಡನಾಟ, ಸಂಗ ಎನ್ನುವುದು ಬಹಳ ಮುಖ್ಯ. ಇದು ಏನೇನನ್ನು ಸಾಧಿಸದು?! ಕೀಡೆಯಂತಹ ಸಣ್ಣ ಜಂತು ಕುಂಡಲಿಗನ ಒಡನಾಟದಿಂದ ತಾನೂ ಕುಂಡಲಿಗನೇ ಆಗುವುದು. ಚಿಟ್ಟೆ (Butterfly), ಪತಂಗ (Moth) ರೇಷ್ಮೆ ಹುಳು ಇವೆಲ್ಲ ಒಂದೇ ಜಾತಿಯವು. ಕುಂಡಲಿಗ ಮಣ್ಣಿನ ಚಿಕ್ಕ ಗೂಡನ್ನು ಕಟ್ಟುವುದು. ಅದರಲ್ಲಿ ಈ ಕೀಡೆಯನ್ನು (ಹಸಿರು ಹುಳು) ತಂದು ಇಡುವುದು. ಕಾಲಾನಂತರದಲ್ಲಿ ಈ ಕೀಡೆಯು ಕುಂಡಲಿಗ ರೂಪ ಹೊಂದಿ, ಗೂಡಿನಿಂದ ಹೊರಗೆ ಬರುವುದು. ಚಂದನ ಅಥವಾ ಶ್ರೀಗಂಧದ ಗಿಡ ಕಾಡಿನಲ್ಲಿದೆ ಎಂದುಕೊಳ್ಳೋಣ. ಅದರ ಪಕ್ಕದಲ್ಲಿ ಬೇವು, ಜಾಲಿ (ಬೊಬ್ಬುಲಿ) ಮುಂತಾದ ಗಿಡಗಳಿರುತ್ತವೆ. ಗಾಳಿ ಬೀಸಿದಾಗ ಒಂದಕ್ಕೊಂದು ತರೆಯುತ್ತವೆ, ಶ್ರೀಗಂಧದೊಡನೆ ಉಜ್ಜಿದಾಗ ಬೇವು, ಜಾಲಿಗೂ ಶ್ರೀಗಂಧದ ಸುವಾಸನೆ ಬಡಿಯುತ್ತದೆ. ಅಂಥ ಬೇವಿನ, ಜಾಲಿಗೂ ಶ್ರೀಗಂಧದ ಸುವಾಸನೆ ಬಡಿಯುತ್ತದೆ. ಅಂಥ ಬೇವಿನ ,ಜಾಲಿಯ ತುಂಡನ್ನು ಮೂಸಿದರೆ ಶ್ರೀಗಂಧದ ವಾಸನೆ ಬರುತ್ತದೆ. ಅದೇ ರೀತಿ ಸುಜ್ಞಾನಿಗಳಾದ ಶರಣರ ಸಂಗದಿಂದ ದುರ್ಗುಣ, ದುಶ್ಚಟ ಎಲ್ಲವೂ ಬಿಡುಗಡೆಯಾಗಿ ಕರ್ಮವು ಬಿಡುಗಡೆಯಾಗುವುದು.

146. ಲಿಂಗದೀಕ್ಷೆ ಸಮಾನತೆಯ ಸಾಧನೆ

ಎಂತಹನಾದಡೇನು, ಲಿಂಗ ಮುಟ್ಟಿದವನ ಕೀಳುಜಾತಿ,
ಕುಲವಹುದು ತಪ್ಪದು ಲಿಂಗಮುಟ್ಟಲೊಡನೆ
ಹೊನ್ನಹುದು ತಪ್ಪದು ಪರಷ ಮುಟ್ಟಲೊಡನೆ
ಲಿಂಗದೇವನೊಲ್ಲ ಸರ್ವ ಸಂದೇಹಿಗಳ. -ಬ.ವ.ದೀ.145

ಎಂತಹ ವ್ಯಕ್ತಿಯಾದರೇನು ಲಿಂಗ ಮುಟ್ಟದವನೆ ಕೀಳು ಜಾತಿ. ಎಂಬುದನ್ನು ಸರಿಯಾಗಿ ಅರ್ಥ ಮಾಡಬೇಕು. ಇಂದಿನ ಕಾಲದಲ್ಲಿ ಧರ್ಮಕ್ಕಿಂತಲೂ ಜಾತಿ ರಾಜಕೀಯವೇ ಜಾಸ್ತಿಯಾಗಿರುವಾಗ ಮೇಲಿನ ಮಾತು ಮತಾಂಧತೆ ಎನ್ನಿಸಬಹುದು. 12ನೆಯ ಶತಮಾನದ ಹಿನ್ನೆಲೆಯಲ್ಲಿ ಈ ವಚನವನ್ನು ಅರ್ಥ ಮಾಡಬೇಕು. ಇಂದು ಬಹುಪಾಲು ಜನರು ಧರ್ಮರಾಹಿತ್ಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇದು ಸ್ವಯಂಕೃತಾಪರಾಧ. ಏಕೆಂದರೆ ಧರ್ಮ, ದೀಕ್ಷೆ ಲಭ್ಯವಿದ್ದರೂ ಪಡೆದುಕೊಳ್ಳಲಾರದ ನಿರಾಸಕ್ತಿ, ಸುಖ ಭೋಗಾಸಕ್ತಿ. ಅಂದು ಎಲ್ಲರಿಗೂ ಸಾಮಾಜಿಕ ನ್ಯಾಯ ಲಭ್ಯವಿಲ್ಲದ ಧರ್ಮರಾಹಿತ್ಯ ಸ್ಥಿತಿ. ಹೀಗಾಗಿ ಧರ್ಮಕ್ಕಾಗಿ ಯಾವುದೇ ತ್ಯಾಗಕ್ಕೂ ದೀನರು, ದಲಿತರು ಸಿದ್ಧವಿದ್ದರು. ಗುರು ಬಸವಣ್ಣನವರು ಸಾಮಾಜಿಕ, ಧಾರ್ಮಿಕ ಶೋಷಕ ವ್ಯವಸ್ಥೆಯ ವಿರುದ್ಧ ಕೈಗೊಂಡ ಚಳುವಳಿಯಲ್ಲಿ ಕೆಳಗಿನ ವರ್ಗದವರೇ ಹೆಚ್ಚು ಭಾಗಿಗಳಾದುದನ್ನು ಗಮನಿಸಬಹುದು. ಲಿಂಗಾಂಗಯೋಗಿ ಸಿದ್ಧರಾಮೇಶ್ವರರ ಮಿಶ್ರ ಸ್ತೋತ್ರ ತ್ರಿವಿಧಿಯಲ್ಲಿ ಉಕ್ತವಾಗಿರುವ ಶರಣರ ಪಟ್ಟಿ ಇದನ್ನು ದೃಢಪಡಿಸುತ್ತದೆ. ಕೀಳು ಜಾತಿಯಲ್ಲಿ ಹುಟ್ಟಿದವರೆಂಬ ಕೀಳರಿಮೆ ಕ್ಲೈಬ್ಯ, ಮೇಲು ಜಾತಿಯಲ್ಲಿ ಹುಟ್ಟಿದವರೆಂಬ ಮೇಲರಿಮೆಯ ಅಹಂ ಎರಡನ್ನೂ ಕಳೆಯಲು ಸಾಧನವಾದುದು ಇಷ್ಟಲಿಂಗ. ಇದರ ಪರುಷ ಸ್ಪರ್ಶದಿಂದ ಗುರು ಬಸವಣ್ಣನವರು ಕೆಳ ಜಾತಿಯವರನ್ನೆಲ್ಲ ಮೇಲಕ್ಕೆತ್ತಿದರು, ಆತ್ಮವಿಶ್ವಾಸ ತುಂಬಿದರು.

"ಎಂತಹನಾದಡೇನು ಲಿಂಗ ಮುಟ್ಟದವನೇ ಕೀಳುಜಾತಿ" - ಯಾವ ಜಾತಿಯಲ್ಲಿ ಹುಟ್ಟಿದರೇನು ಸೃಷ್ಟಿಕರ್ತ ಲಿಂಗದೇವನ್ನು ನಂಬಿ, ಮನದಿಂದ ಮುಟ್ಟಿ, ಆ ದೇವನ ಸಾಕಾರ ಕುರುಹಾದ ಇಷ್ಟಲಿಂಗ ದೀಕ್ಷೆ ಪಡೆದು ಅದನ್ನು ಧರಿಸದವನೇ ಕೀಳುಜಾತಿ. ಶ್ರದ್ಧೆಯಿಂದ ಪಡೆದು, ನಿಷ್ಠೆಯಿಂದ ಧರಿಸಿದವನೇ ಶ್ರೇಷ್ಠ ಜಾತಿಯವನು. ಇಷ್ಟಲಿಂಗ ದೀಕ್ಷೆಯಿಂದ ಪೂರ್ವದ ಕುಲವಳಿದು, ಶರಣನಾಗುವನು, ಪರುಷ ಸ್ಪರ್ಶದಿಂದ ಕಬ್ಬಿಣ ತನ್ನ ಕೀಳ್ತನವನ್ನಳಿದುಕೊಂಡು ಬಂಗಾರವಾಗುವಂತೆ ! ಇದನ್ನು ಸಂದೇಹಿಸುವವನ್ನು ಲಿಂಗದೇವನು ಒಲ್ಲನು.

ಈ ಕಡೆಯ ವಾಕ್ಯದಲ್ಲಿ ಉಭಯತರಿಗೂ ಸಂದೇಶವಿದೆ. ಯಾವುದೇ ಜಾತಿ, ಕುಲದವರಿರಲಿ ಇಷ್ಟಲಿಂಗ ದೀಕ್ಷೆಯ ನಂತರ ಸರ್ವರೂ ಸಮಾನರು, ಅವರೊಡನೆ ಅನುಭವ ಗೋಷ್ಠಿಯಲ್ಲಿ, ಸಹ ಪಂಕ್ತಿ ಭೋಜನದಲ್ಲಿ ಭಾಗವಹಿಸಬೇಕೇ ವಿನಾ ಭೇದ ಮಾಡಬಾರದು. ಅದೇ ರೀತಿ ವಿವಾಹ ಸಂಬಂಧ ಬೆಳೆಸುವಲ್ಲಿ ಸಂದೇಹಿಸಬಾರದು.

ಕೆಳವರ್ಗದಿಂದ ದೀಕ್ಷೆ ಪಡೆದು ಬಂದವರು ತಮ್ಮ ಕೀಳರಿಮೆ ತೊಡೆದು ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಅನ್ಯರು ಹಂಗಿಸಿದರೆ ತಾವು ಮುಖಭಂಗಿತರಾದಂತೆ ವರ್ತಿಸದೆ ಧೈರ್ಯವಾಗಿ ಉತ್ತರಿಸಬೇಕು. ಇದು ಗುರು ಬಸವಣ್ಣನವರ ಆಶಯ. ಅದನ್ನು ಈ ಕೆಳಕಂಡ ವಚನದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಗೋತ್ರ ನಾಮವ ಬೆಸಗೊಂಡಡೆ
ಮಾತನೂಕದೆ ಸುಮ್ಮನಿದ್ದಿರಿದೇಕಯ್ಯ?
ತಲೆಯ ಕುತ್ತಿ ನೆಲನ ಬರೆಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚನ್ನಯ್ಯ ಡೋಹಾರ ಕಕ್ಕಯ್ಯನೆಂಬುದೇನು ಲಿಂಗದೇವ!

ಮೇಲ್ಜಾತಿ ವೈದಿಕರು ತಮ್ಮ ಗೋತ್ರಗಳನ್ನು ಹೆಮ್ಮೆಯಿಂದ ಹೇಳಿ, ಕೆಳ ಜಾತಿಯವರನ್ನು ನಿಮ್ಮ ಗೋತ್ರವಾವುದು ಎಂದು ಮೂದಲಿಸಿದಾಗ ಮುಗ್ಧರು ನಾಚಿ, ತಲೆ ತಗ್ಗಿಸಿ ನೆಲದ ಮೇಲೆ ಹೆಬ್ಬೆರಳಿನಿಂದ ಗೆರೆ ಎಳೆಯುವುದು ಕಂಡು ಗುರು ಬಸವಣ್ಣನವರು "ಏಕೆ ನಾಚುತ್ತೀರಿ. ನಿಮ್ಮ ಜನಾಂಗದಿಂದ ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯನಂತಹವರು ಆಗಿ ಹೋಗಿಲ್ಲವೆ? ಹೆಮ್ಮೆಯಿಂದ ಹೇಳಿರಿ." ಎನ್ನುತ್ತಾರೆ. ಪ್ರೌಢ ಚಿಂತನೆಯುಳ್ಳ ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯನಂತಹವರು ಮೂದಲಿಸುವವರನ್ನೇ ಮೂದಲಿಸಿ ಅವರ ಕುಮತಾಚಾರವನ್ನು ವಿಡಂಬಿಸಿ, ತಿರುಗಿ ಉತ್ತರವನ್ನು ಕೊಡುತ್ತಾರೆ. ಮಾತ್ರವಲ್ಲ ನಮ್ಮ ಸ್ವಾಭಿಮಾನ ಕೆಣಕುವವರ ಬಟ್ಟೆಗಳನ್ನೇ ತೊಳೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡುವಷ್ಟು ಮಾಚಯ್ಯನವರು ಮುಂದೆ ಹೋಗುತ್ತಾರೆ.

ಹೀಗೆ ಗುರು ಬಸವಣ್ಣನವರ, "ಎಂತಹನಾದಡೇನು ಲಿಂಗ ಮುಟ್ಟದವನೇ ಕೀಳು ಜಾತಿ" ಎಂಬುದು ಬಹಳ ವಿಶಾಲಾರ್ಥದ ವಚನ. (ಮುಂದುವರಿಯುವುದು.....)

ಸಮಸ್ಯೆ ಸಮಾಧಾನ

☐ ಬಸಗೌಡ. ಆ. ಪಾಟೀಲ್, ನಿಗಡಿ, ಪೂನಾ. 15-2-2009

1.? 22ನೆಯ ಶರಣ ಮೇಳ ಅಭೂತಪೂರ್ವವಾಗಿತ್ತು ಜ್ಞಾನ ಪ್ರಸಾದ ಮತ್ತು ಅನ್ನ ಪ್ರಸಾದ ಎರಡೂ ಅಚ್ಚುಕಟ್ಟಾಗಿದ್ದವು. ಒಂದು ಸಮಸ್ಯೆ ಎಂದರೆ ಬಾದಾಮಿ, ಬನಶಂಕರಿ, ಯಲ್ಲಮ್ಮನ ಗುಡ್ಡದ ಜಾತ್ರೆಗಳಿಗೆ ಹೋಗಿ ಬಂದ ಭಕರ ಸಮೂಹ ಬಹಳ ಕಿರಿಕಿರಿ ಉಂಟು ಮಾಡಿತು. ಅವರಿಗೆ ಸಂಸ್ಕಾರವಿಲ್ಲ ಪ್ರಸಾದ ಸ್ವೀಕಾರದಲ್ಲಿ ಶಿಸ್ತಿಲ್ಲ. ಮನಸ್ಸಿಗೆ ಬಂದಂತೆ ಪ್ರಸಾದ ನೀಡಿಸಿಕೊಂಡು ಚೆಲ್ಲುತ್ತಿದ್ದರು ಕಂಡು ಬಹಳ ಬೇಸರವೆನಿಸಿತು ಇವರು ಶರಣ ಮೇಳದ ತಾತ್ವಿಕತೆ ಮತ್ತು ಶಿಸ್ತನ್ನು ಹಾಳು ಮಾಡುತ್ತಿದ್ದಾರೆ ಎನಿಸಿತು. ಇದಕ್ಕೆ ಪರಿಹಾರವೇನು?

★ ಕಾರ್ಯಕ್ರಮ ನಡೆಯುತ್ತ ನಾನು ವೇದಿಕೆಯ ಮೇಲಿದ್ದಾಗ ನಮ್ಮ ಕೆಲವು ಕಾರ್ಯಕರ್ತರು ಬಂದು 'ಅವರಿಗೆ ಪ್ರಸಾದ ಇಲ್ಲ' ಎನ್ನೋಣವೆ ಎಂದು ಕೇಳಿದರು. 'ಇಲ್ಲ ಹಾಗನ್ನಬಾರದು. ಪ್ರಸಾದ ಇಲ್ಲ ಎಂದರೆ ಗುರು ಬಸವಣ್ಣನವರ ತತ್ವಕ್ಕೆ ಚ್ಯುತಿ ಬರುತ್ತದೆ' ಎಂದು ಹೇಳಿದೆ. ನಂತರ ಸಂಸ್ಕಾರವಿಲ್ಲದ ಆ ಜನ ಸಾಕಷ್ಟು ಪ್ರಸಾದವನ್ನು ಚೆಲ್ಲಿದುದನ್ನು ಕಾರ್ಯಕರ್ತರು ಹೇಳಿದರು. ಇದಕ್ಕೆ ಮುಂದಿನ ಬಾರಿ ಪರಿಹಾರ ಹುಡುಕೋಣ. ಅಂಥವರಿಗೇ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲು ಸಾಧ್ಯವೇ ಪ್ರಯತ್ನಿಸೋಣ.

2.? ಲಿಂಗಾಯತರನ್ನು ನಿರ್ಲಕ್ಷಿಸದಿರಿ. ಎಂಬ ಶೀರ್ಷಿಕೆಯಡಿಯಲ್ಲಿ ವೀರಶೈವ ಮಹಾಸಭಾಧ್ಯಕ್ಷ ಭೀಮಣ್ಣ ಖಂಡ್ರೆಯವರು ವೀರಶೈವರು, ಲಿಂಗಾಯತರು, ಬಸವ ಧರ್ಮೀಯರು, ಶರಣ ಧರ್ಮೀಯರು ಎಂದು ಬಡಿದಾಡುವುದು ಬೇಡ. ಇಷ್ಟಲಿಂಗಧಾರಿಗಳೆಲ್ಲ ಒಂದೇ ಎಂದು ಮುನ್ನಡೆಯಬೇಕು. ಇದರಿಂದ ಸಮಾಜಕ್ಕೆ ಭವಿಷ್ಯವಿದೆ ಎಂದು ಕರೆ ನೀಡಿದ್ದಾರೆ. (ವರದಿ: ಸಂ.ಕ.ದಿನಾಂಕ-8.2.2009) ಈ ಕರೆಗೆ ಸಮಾಜ ಬಾಂಧವರು, ಗುರು -ವಿರಕರು ಓಗೊಡಬಹುದೆ?

★ ಯಾರು ಓಗೊಡುತಾರೋ ಬಿಡುತಾರೋ ನಾವಂತೂ ವೀರಶೈವ ಲಿಂಗಾಯತ ಎರಡನ್ನೂ ಕಲಸು ಮೇಲೋಗರ ಮಾಡುವುದನ್ನು ವಿರೋಧಿಸುತೇವೆ. ವೀರಶೈವ ಭವನ ಉದ್ಘಾಟಿಸಿದ ಸಭೆ ಕುರಿತು ಜನರು ಹೇಳಿದರು. ಬಂದ ಜನರಲ್ಲಿ ಸ್ವಲ್ಪವಾದರೂ ಧಾರ್ಮಿಕ ಸ್ವರೂಪವಿರಲಿಲ್ಲ, ಫ್ಯಾಷನ್ ಷೋ ಇದ್ದಂತಿತ್ತು ಎಂದು. ಪ್ರತಿ ಧರ್ಮಕ್ಕೂ ತನ್ನದೇ ಆದ ಸಂಸ್ಕೃತಿ ಇರುತ್ತದೆ. ಅದು ಅವರ ಸಭೆಗಳಲ್ಲಿ ವ್ಯಕ್ತವಾಗಬೇಕು. ವೀರಶೈವರು ಎಂದರೆ ಹರಿಯುವ ನದಿಯಂತೆ. ಬಸವ ಧರ್ಮೀಯರೆಂದರೆ ಶೋಧಿಸಿದ ನೀರಿನಂತೆ (Filtered water) ರಾಷ್ಟ್ರೀಯ ಬಸವ ದಳದವರ ಸಂಸ್ಕೃತಿ, ಶಿಸ್ತು, ಭಕ್ತಿ ನೋಡಿರಿ. ಶರಣ ಮೇಳದ ಪ್ರಾರ್ಥನಾ ಸಭೆ ನೋಡಿರಿ. ಇಬ್ಬರಿಗೂ ಹೊಂದಾಣಿಕೆ ಸಾಧ್ಯವೇ ಇಲ್ಲ. ಹತ್ತಾರು ಜನ ಶ್ರೀಮಂತರು ವೀರಶೈವ ಭವನದಲ್ಲಿ ಕುರಿತು ರಾಜಕೀಯ ಮಾಡಿದರೆ, ಹರಿದು ಹಂಚಿ ಹೋಗಿ, ದುಃಸ್ಥಿತಿಯಲ್ಲಿರುವ ಲಿಂಗಾಯತ ಸಮಾಜ ಸುಧಾರಿಸುವುದೆ? ರೋಮ್ ಹೊತ್ತಿ ಉರಿಯುತ್ತಿರುವಾಗ ರಾಜಕುಮಾರ ನೀರೋ ಪಿಟೀಲು ಬಾರಿಸುವಂತೆ, ಭೀಮಣ್ಣ ಖಂಡ್ರೆಯವರ ಕರೆ!

3.? 75ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಎಲ್.ಬಸವರಾಜು (ವಯಸು 90) ಅವರು, ಅಲ್ಲಮ ಪ್ರಭು ಲಿಂಗಾಯತನಲ್ಲ ಆತನ ಎದೆಯ ಮೇಲೆ ಲಿಂಗ ಇರಲಿಲ್ಲ. ಅಲ್ಲಮ ಹೆಸರು ಬಂದಿದ್ದು ಅರಬ್ಬಿಯ ಅಲ್ಲಾಹ ಶಬ್ದದಿಂದ ಎಂದು ಹೇಳಿದರು. (ಸಂ.ಕ. 8-2-2009) ಇದೇನಿದು ಹೊಸ ಸಂಶೋಧನೆ. ಅಲ್ಲಮ ಪ್ರಭು ಇಷ್ಟಲಿಂಗಧಾರಿಯಾಗಿಲ್ಲದಿದ್ದರೆ ಶೂನ್ಯ ಪೀಠಕ್ಕೆ ಅವರನ್ನು ಗುರು ಬಸವಣ್ಣನವರು ಏರಿಸುತ್ತಿದ್ದರೆ? ಅನುಭವ ಮಂಟಪ, ಅಲ್ಲಮ ಪ್ರಭು -ಅಕ್ಕಮಹಾದೇವಿ ಸಂವಾದ ಎಲ್ಲ ಕಾಲ್ಪನಿಕವೆ?

★ ಎಲ್.ಬಸವರಾಜು ಅವರ ವಯಸು 90 ಎನ್ನುವುದು ನೆನಪಿರಲಿ. ಚಿಂತನ ಶಕ್ತಿ ಕಳೆದುಕೊಂಡು ಮರೆವಿನ ಮಹಾನುಭಾವರಾದವರನ್ನೆಲ್ಲ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡುವ ದುರಭ್ಯಾಸವನ್ನು ಕನ್ನಡ ಸಾಹಿತ್ಯ ಪರಿಷತ್ತು ಕೈ ಬಿಡಬೇಕು. ಸಾಹಿತ್ಯ ಸಮ್ಮೇಳನದಲ್ಲಿ ಕ್ರಿಯಾತ್ಮಕ ಯೋಜನೆಗಳ ಚರ್ಚೆಯಾಗಬೇಕು. ಮೊದಲೇ ಪತ್ರಿಕೆಗಳಲ್ಲಿ ಹಾಸ್ಯಾಸ್ಪದವಾಗಿ ಊಟದ ವೈಭವವನ್ನು ಪ್ರಚಾರ ಮಾಡಲಾಗಿರುತ್ತದೆ. ಊಟಕ್ಕೆಂದೇ ಜನರು ಮುಗಿ ಬೀಳುತ್ತಾರೆ. ಸಾಹಿತ್ಯಾಸಕ್ತಿ ಗೌಣವಾಗುತ್ತದೆ.

ಎಲ್.ಬಸವರಾಜು ಅವರಿಗೆ ಖಂಡಿತಾ ಮತಿಭ್ರಾಂತಿಯಾಗಿದೆ. ಏಕೆಂದರೆ ಹತ್ತಿ ಬಂದ ನಿಚ್ಚಣಿಕೆಯನ್ನು ಒದೆಯುವ ಪ್ರವೃತ್ತಿಯನ್ನು ಪ್ರದರ್ಶಿಸಿದ್ದಾರೆ. ಅವರ ಸಂಪಾದಿತ ಕೃತಿಗಳಾದ ಶೂನ್ಯ ಸಂಪಾದನೆ, ಶಿವದಾಸ ಗೀತಾಂಜಲಿ ಇವೆಲ್ಲವೂ ಮಠಗಳಿಂದಲೇ ಬೆಳಕಿಗೆ ಬಂದವು. ಅವರು ಇನ್ನೂ ಹೆಚ್ಚು ಖ್ಯಾತರಾಗುವ ಪೂರ್ವದಲ್ಲಿ ಮಠಮಾನ್ಯಗಳು ಇವರ ಕೃತಿಗಳನ್ನು ಪ್ರಕಟಿಸದಿದ್ದರೆ ಅವರು ಅನಾಮಿಕರಾಗಿಯೇ ಉಳಿಯಬಹುದಿತ್ತೇನೋ, ಚಿತ್ರದುರ್ಗದ ಮುರುಘಾಮಠ, ಸುತ್ತೂರು

ಶಿವರಾತ್ರೀಶ್ವರ ಗ್ರಂಥ ಮಾಲೆ, ಗುಲಬರ್ಗಾದ ಶರಣ ಬಸವೇಶ್ವರ ಸಂಸ್ಥಾನ -ಇವೆಲ್ಲವೂ ಇವರ ಸಂಪಾದಿತ ಕೃತಿಗಳನ್ನು ಪ್ರಕಟಿಸಿವೆ. ಮಠಗಳಿಂದ ಆದ ಸಾಹಿತ್ಯ ಸೇವೆ ಅಪ್ರತಿಮ ಎಂದು ಗೊತ್ತಿದ್ದೂ ಸಹ ಸಾಹಿತ್ಯ ಸಮ್ಮೇಳನದಿಂದ ಮಠಾಧೀಶರನ್ನು ದೂರವಿಡಬೇಕೆಂದು ಎಲ್.ಬಸವರಾಜು ಕರೆ ಕೊಟ್ಟದ್ದು ಅತ್ಯಂತ ಹಾಸ್ಯಾಸ್ಪದವಷ್ಟೇ ಅಲ್ಲ ಅವರ ಮತಿ ವಿಕೃತಿಗೆ ಸಾಕ್ಷಿ.

ದೇವರು ದೊಡ್ಡವನು; ಇವರಿಗೆ ತಲೆ ಕೆಡಲಿಕ್ಕೆ ಪೂರ್ವದಲ್ಲಿಯೇ ಇವರಿಂದ ಅಲ್ಲಮನ ವಚನ ಚಂದ್ರಿಕೆ, ಶಿವದಾಸ ಗೀತಾಂಜಲಿಯಂತಹ ಉತ್ಕೃಷ್ಟ ಕೃತಿಗಳು ಹೊರಬಂದವು. ತಲೆ ಕೆಟ್ಟ ಮೇಲಾಗಿದ್ದರೆ ಇಷ್ಟಲಿಂಗ, ಲಿಂಗಾಂಗ ಯೋಗಕ್ಕೆ ಸಂಬಂಧಿಸಿದ ವಚನಗಳು, ಪದಗಳು ಕತ್ತರಿ ಹಾಕಲ್ಪಡುತ್ತಿದ್ದವು. ಶಿವದಾಸ ಗೀತಾಂಜಲಿಯಲ್ಲಿ ಶರಣರು ಧರ್ಮಗುರು ಬಸವಣ್ಣನವರನ್ನು ಸ್ತುತಿಸಿದ ಹಾಡುಗಳು, ಇಷ್ಟಲಿಂಗ ಯೋಗದ ದಿವ್ಯಾನುಭವ ಕುರಿತ ಪದಗಳೇ ತುಂಬಿವೆ. ಈಗಲೋ ಎಲ್.ಬಸವರಾಜು ಅವರಲ್ಲಿ ಬಸವ ಭಕ್ತಿಯೂ ಶೂನ್ಯ, ಲಿಂಗನಿಷ್ಠೆಯೂ ಶೂನ್ಯ, ಮತಿಮನಗಳ ತುಂಬ ರಾಗದ್ವೇಷಗಳೇ ತುಂಬಿವೆ. ಈ ಸ್ಥಿತಿಯಲ್ಲಿ ಆ ಕೃತಿಗಳು ಎಷ್ಟು ವಿಕೃತ ರೂಪ ತಾಳುತ್ತಿದ್ದವೊ!

ಅಲ್ಲಮ ಪ್ರಭುದೇವರಿಗೆ ಸಿದ್ಧರಾಮೇಶ್ವರರಿಗೆ ಇಷ್ಟಲಿಂಗ ಬಿಡಿಸಿ ಭವಿಶೈವರನ್ನು ಮಾಡುವ ದುರ್ಬುದ್ಧಿ ಎಲ್. ಬಸವರಾಜುರವರ ಹೊಸ ಮಾನಸಿಕ (ಮರುಳು) ಸ್ಥಿತಿ. ನಮ್ಮ ಸಾಹಿತಿಗಳಲ್ಲಿ ಪ್ರಾಮಾಣಿಕ ಸಂಶೋಧನೆಯೇ ಕಡಿಮೆ. ಅವರ ಕುಲಜಾತಿ, ಜೀವನದಲ್ಲಿ ಉಂಡಿರಬಹುದಾದ ಕಹಿ ಇವೆಲ್ಲವೂ ಸಂಶೋಧನೆಯನ್ನು (?!) ನಿರ್ಣಯಿಸುವ ಐಟಂಗಳು. ನಾನು ಇಂಥದೊಂದು ಕಹಿ ಅನುಭವವನ್ನು ಎಲ್. ಬಸವರಾಜು ಅವರ ಬದುಕಿನಲ್ಲಿ ಊಹಿಸಿದ್ದೇನೆ. ಹೀಗಾಗಿ ಅವರಿಗೆ ಇತ್ತೀಚೆಗೆ ಲಿಂಗಾಯತ ಧರ್ಮ, ಸಮಾಜ ಹಾಗೂ ಇಷ್ಟಲಿಂಗದ ಬಗ್ಗೆ ದ್ವೇಷ ಉಕ್ಕಿ ಹರಿದು, ಲಿಂಗಾಂಗಯೋಗಿ ಶರಣರನ್ನು ಭವಿ ಶೈವರನ್ನು ಮಾಡುವ ಸಂಚು ಆರಂಭವಾಗಿದೆ. ಇದೇ ರೋಷ ದ್ವೇಷ ಎಲ್.ಬಸವರಾಜು ಅವರ ಬುದ್ಧಿಯನ್ನು ಮೊದಲೇ ವಿಕಾರ ಗೊಳಿಸಿದ್ದರೆ ಆಗ ಅವರು ಇಷ್ಟಲಿಂಗ ಧಾರಣೆ-ಯೋಗವೇ ಪ್ರಮುಖವಾದ ವಚನ ಸಾಹಿತ್ಯದ ಬಗ್ಗೆ ಬಹುಶಃ ಬರೆಯುತ್ತಲೇ ಇರಲಿಲ್ಲವೇನೋ! ಈಗ ಬಸವರಾಜು ಹೋಗಿ ಬುರುಡೇರಾಜು ಆಗುತ್ತಿರುವುದು ಲಿಂಗಾಯತ ಧರ್ಮದ ಸುದೈವವೋ ದುರ್ದೈವವೋ ಕಾಲವೇ ನಿರ್ಣಯಿಸಬೇಕು.

"ಶ್ರೀ ಸಿದ್ಧರಾಮೇಶ್ವರರು ಲಿಂಗಾಂಗಯೋಗಿಯಲ್ಲ ಶೈವ ಸಾಧು ಮಾತ್ರ. ಶ್ರೀ ಅಲ್ಲಮ ಪ್ರಭುದೇವರಿಗೆ ಇಷ್ಟಲಿಂಗವಿರಲಿಲ್ಲ." ಎಂಬ ಇವರ ಸಂಶೋಧನೆಗಳು ಮತಿ ವಿಕೃತಿಯ ಫಲಗಳೆಂದು ಈಗಾಗಲೇ ಬರೆದಿದ್ದೇನೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಲಿಂಗಾಯತರು ಇರುವ ಊರು ಸೊಲ್ಲಾಪುರ. ಏಕೆ? ಮತ್ತು ಹೇಗೆ? ಶ್ರೀ ಸಿದ್ಧರಾಮೇಶ್ವರರು ನೆಲೆಸಿದ್ದ ಪುಣ್ಯಭೂಮಿ ಎಂದೇ ಲಿಂಗಾಯತ ಧರ್ಮ - ಸಮಾಜಗಳು ಅಷ್ಟು ಬೆಳೆದವು. ಅವರೇ ಇಷ್ಟಲಿಂಗವಿರಹಿತ ಅವಧೂತ ಸಾಧುವಾಗಿದ್ದರೆ ಲಿಂಗಾಯತ ಸಮಾಜ ಬೆಳೆಯುತ್ತಿತ್ತೆ? ಶ್ರೀ ಸಿದ್ಧರಾಮೇಶ್ವರರನ್ನು ತಮ್ಮ ಕುಲಗುರುವೆಂದು ಆರಾಧಿಸುವ ಒಂದು ಸಮೂಹ- ನೊಳಂಬರು ಶರಣ ಮಾರ್ಗಿಗಳಾಗಿದ್ದಾರೆ. ಲಿಂಗಾಯತ ಸಮಾಜದ ಶರಣ ಪರಂಪರೆಯ ಎಲ್ಲರೂ ಸಿದ್ಧರಾಮೇಶ್ವರರನ್ನು ತಮ್ಮವರೆಂದು ಗೌರವಿಸುತ್ತಾರೆ. ವಿರಕ್ತ ಪರಂಪರೆಯ ಪ್ರಥಮ ಗುರುವೆಂದು ಸಾಂಪ್ರದಾಯಿಕವಾಗಿ ಅಲ್ಲಮಪ್ರಭು ದೇವರನ್ನು ಗೌರವಿಸುತ್ತ ಬರಲಾಗಿದೆ. ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮ ಪ್ರಭು ಡೋಂಗರ (ಗಿರಿ) ಸುತ್ತಲು ಹಳ್ಳಿಗಳಲ್ಲಿ ಅಲ್ಲಮ ಪ್ರಭುದೇವರು ತಮ್ಮ ಮನೆದೇವರೆಂದು ಲಿಂಗಾಯತರು ಆರಾಧಿಸುತ್ತಾರೆ ಮತ್ತು ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದು ಏನನ್ನು ತೋರಿಸುತ್ತದೆ. ಅಲ್ಲಮ ಪ್ರಭುದೇವರಿಂದ ದೀಕ್ಷಿತರಾದ ಜನ ಅವರು ಎಂಬುದನ್ನಲ್ಲವೆ?

ಸಾಹಿತಿಗಳು ತಮ್ಮ ವ್ಯಕ್ತಿತ್ವ ಹೇಗಿರುವುದೋ ಅದರಂತೆ ಶರಣರನ್ನು ಚಿತ್ರಿಸಿದರೆ, ಸಂಶೋಧಕರು ತಮ್ಮ ಪೂರ್ವನಿರ್ಧಾರಿತ ಅಭಿಪ್ರಾಯಗಳನ್ನು (ಉದಾ: ಡಾ||ಎಂ.ಚಿದಾನಂದ ಮೂರ್ತಿ, ಡಾ|| ಎಲ್.ಬಸವರಾಜು) ಸಂಶೋಧನೆಯ ಸೋಗಿನಲ್ಲಿ ಹರಿಯಬಿಡುವರು. ಇಂಥವರನ್ನು ಕುರಿತೇ ಅಲ್ಲಮಪ್ರಭು ದೇವರು ಹೇಳಿರುವುದು.

ಕವಿ ಸಾಧಕರೆಲ್ಲರು ಕಳವಳಿಸಿ ಕೆಟ್ಟರು
ವಿದ್ಯಾಸಾಧಕರೆಲ್ಲರೂ ಬುದ್ಧಿ ಹೀನರಾದರು
ಪವನ ಸಾಧಕರೆಲ್ಲರೂ ಹದ್ದು ಕಾಗೆಗಳಾದರು..........
ಬಸವಣ್ಣ ಸದ್ಗುರು ಸಾಧಕನಾಗಿ
ಸ್ವಯಂ ಲಿಂಗವಾದ ಕಾಣಾ ಗುಹೇಶ್ವರಾ.

ಎಲ್ಲ ಬಣ್ಣನ ಮಸಿ ನುಂಗಿತು ಎಂಬಂತೆ ಈವರೆಗಿನ ಅವರ ಸಾಧನೆಯನ್ನು ಸಮ್ಮೇಳನಾಧ್ಯಕ್ಷರ ಭಾಷಣ ನುಂಗಿ ನೀರು ಕುಡಿದುದಕ್ಕೆ ಮರುಕಪಡಬೇಕೇ ವಿನಾ ಹೆಚ್ಚಿನ ಪ್ರತಿಕ್ರಿಯೆ ಅಗತ್ಯವೆನಿಸುತ್ತಿಲ್ಲ.

ಲಿಂಗಾಯತ ಧರ್ಮ ಸಂವಿಧಾನಕ್ಕೆ ಅಲ್ಲಮ ಪ್ರಭುದೆ

(ಅಲ್ಲಮ ಪ್ರಭು ಜಯಂತಿ ನಿಮಿತ್ತ ವಿಶೇಷ ಲೇಖನ)

-ಸಚ್ಚಿದಾನಂದ ಚಟನಳ್ಳಿ

ಶ್ರೀ ಮದಮಲಜ್ಞಾನಭಕ್ತಿ
ಪ್ರೇಮ ವೇದಪುರಾಣಶಾಸ್ತ್ರ
ಸ್ತೋಮನುತನತಚಾರುಚರಣಾಂಬೋಜ ಘನ ಮಹಿಮ
ನಾಮ-ರೂಪ-ಕ್ರಿಯಾಕಳಾಪವಿ
ರಾಮನನುಪಮದಿವ್ಯತೇಜೋ
ವ್ಯೋಮ ಮೂರುತಿ ಗುರು ಗುಹೇಶ್ವರ ಲಿಂಗ ಶರಣಾರ್ಥಿ.

"ನಾನೊಂದು ಕಾರಣಕ್ಕೆ ಮರ್ತಕ್ಕೆ ಬಂದೆನು ಬಂದ ಬಳಲಿಕೆಯ ಕಳೆಯಲೆಂದು ಚೆನ್ನ ಬಸವಣ್ಣ ಬಂದನು, (ಬಳಲಿಕೆಯ) ಇನ್ನು ಬಾರದಂತೆ ಪ್ರಭುದೇವರು ಬಂದರು". ಎಂದು ಗುರು ಬಸವಣ್ಣನವರು ಹೇಳುವಲ್ಲಿ ಲಿಂಗಾಯತ ಧರ್ಮದಲ್ಲಿ ಅಲ್ಲಮ ಪ್ರಭುದೇವರ ಪಾತ್ರ ಎಷ್ಟು ಮಹತ್ವದ್ದು ಎಂಬುದು ಮನದಟ್ಟಾಗುತ್ತದೆ. ಒಂದು ದೊಡ್ಡ ಮನೆಯನ್ನು ಕಟ್ಟಲಿಕ್ಕೆ ಇಂಜನಿಯರರ ಯೋಜನೆ ಅತ್ಯಂತ ಪ್ರಮುಖವಾದುದು ಜೊತೆಗೆ ಮೇಲ್ವಿಚಾರಕರ ಕಾರ್ಯ, ಕೆಲಸಗಾರರ ಕಾರ್ಯ ದಕ್ಷತೆಗಳೂ ಕೂಡ ಮುಖ್ಯವೇ. ಅದೇ ರೀತಿ ಗುರು ಬಸವಣ್ಣನವರು ಲಿಂಗಾಯತ ಧರ್ಮದ ಮಹಾಮನೆ ಕಟ್ಟುವಲ್ಲಿ ಪ್ರಮುಖರು. ಇವರರಿಗೆ ಸಹಾಯಕ ಶಕ್ತಿಗಳಾಗಿ ನಿಂತವರು ಚೆನ್ನಬಸವಣ್ಣನವರು, ಅಲ್ಲಮಪ್ರಭುದೇವರು, ಮಡಿವಾಳ ಮಾಚಿದೇವರು ಮತ್ತು ಇತರರು.

ಅಲ್ಲಮ ಪ್ರಭುದೇವರು ತಮ್ಮ ವಚನಗಳಲ್ಲಿ ಪ್ರಮುಖವಾಗಿ ಮನಸ್ಸನ್ನು ಅಧ್ಯಾತ್ಮದೆಡೆಗೆ ಕೊಂಡುಯ್ಯುವ ವಿಧಾನ, ಇಷ್ಟಲಿಂಗ ಯೋಗ ಮತ್ತು ಗುರು ಬಸವ ಭಕ್ತಿಯ ಬಗ್ಗೆ ಹೇಳುತ್ತಾರೆ.

ಸುತ್ತಿ ಸುತ್ತಿ ಬಂದಡಿಲ್ಲ ಲಕ್ಷ ಗಂಗೆಯ ಮಿಂದಡಿಲ್ಲ.
ತುಟ್ಟ ತುದಿಯ ಮೇರು ಗಿರಿಯ ಮೆಟ್ಟಿ ಕೂಗಿದಡಿಲ್ಲ.
ನಿತ್ಯ ನೇಮದಿಂದ ತನುವ ಸುಟ್ಟುಕೊಂಡರಿಲ್ಲ.
ನಿಚ್ಚಕ್ಕೆ ನಿಚ್ಚ ನೆನೆವ ಮನವ ಅಂದಂದಿಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚ ಬರಿಯ ಬಯಲು ಗುಹೇಶ್ವರ ಲಿಂಗವು

ಮೊಟ್ಟ ಮೊದಲು ಪ್ರತಿಯೊಬ್ಬರೂ ತಮ್ಮ ಮನಸ್ಸನ್ನು ಅರಿಯಬೇಕು, ಅದನ್ನರಿಯದೇ ಏನೇ ಮಾಡಿದರೂ ಪ್ರಯೋಜನವಿಲ್ಲ ಎನ್ನುತ್ತಾರೆ. ಮನಸ್ಸನ್ನು ನಿಲ್ಲಿಸಲಿಕ್ಕೆ ಇಷ್ಟಲಿಂಗವೇ ಸಾಧನ. ಅನೇಕ ಜನ್ಮಗಳ ಪುಣ್ಯದಿಂದ ಇಷ್ಟಲಿಂಗ ಪ್ರಾಪ್ತಿಯಾಗುತ್ತದೆ ಎಂದು ತಿಳಿಸುತ್ತಾ ಇಷ್ಟಲಿಂಗ ಧರಿಸದೇ, ಪೂಜೆ ಮಾಡದೇ, ಯಾವುದೇ ಧ್ಯಾನ ತಪಸ್ಸುಗಳಿಂದ ಪ್ರಯೋಜನವಿಲ್ಲ ಎನ್ನುತ್ತಾರೆ. ಗುರು ಅಲ್ಲಮ ಪ್ರಭುದೇವರ ಪ್ರಕಾರ ಇಷ್ಟಲಿಂಗ ಒಂದು ಕುರುಹು ಮಾತ್ರ, ಆ ಕುರುಹಿನಿಂದ ಅರುಹ ಅರಿಯಬೇಕು. ಆರಂಭದ ಹಂತದಲ್ಲಿ ಇಷ್ಟಲಿಂಗವನ್ನೇ ಸಾಕ್ಷಾತ್ ದೇವರೆಂದು ಅರಿತ ಭಕ್ತನು ನಂತರದಲ್ಲಿ ದೇವರನ್ನು ಕೇವಲ ಇಷ್ಟಲಿಂಗದಲ್ಲಿ ಮಾತ್ರ ಕಾಣದೆ ತನ್ನ ಸರ್ವಾಂಗದಲ್ಲಿಯೂ ಕಾಣಬೇಕು. ತನ್ನನ್ನು ಲಿಂಗದೇವನಲ್ಲಿ ಕಾಣಬೇಕು. ಇದು ಬಿಟ್ಟು ಕೇವಲ ರಾಶಿ ರಾಶಿ ಪತ್ರೆ ಪುಷ್ಪಗಳಿಂದ ಅರ್ಚಿಸುವವರನ್ನು ಆಡಿನ ದಾಯಾದಿಗಳು (ಶತ್ರು) ಎಂದು ಕರೆಯುತ್ತಾರೆ.

ಆಡಿಗೆ ದಾಯಾದಿಯಾದಿರಲ್ಲ!
ಕಾಡಗಿಡುವಿಂಗೆ ಮೃತ್ಯುವಾದಿರಲ್ಲ!
ಅರಿವನರಿಯ ಹೇಳಿ ಶ್ರೀ ಗುರು ಕುರುಹು ಕೈಯಲ್ಲಿ ಕೊಟ್ಟಡೆ
ಅರಿವನೆ ಮರೆತು ಕುರುಹು ಪೂಜಿಸುವ
ಕುರಿಗಳ ನೋಡಾ ಗುಹೇಶ್ವರಾ.

ಅದಕ್ಕಾಗಿ ಇಷ್ಟಲಿಂಗವನ್ನು ಧರಿಸಿದ ಭಕ್ತನು ದಿನದಿಂದ ದಿನಕ್ಕೆ ಹೆಚ್ಚು ಯೋಗ ಧ್ಯಾನಗಳನ್ನು ಮಾಡುತ್ತ ಜ್ಞಾನಮಾರ್ಗ, ಭಕ್ತಿಮಾರ್ಗದಲ್ಲಿ ನಡೆಯಬೇಕು ಎನ್ನುತ್ತಾರೆ. ಕೇವಲ ಲಿಂಗಾಯತರಾಗಿ ಹುಟ್ಟಿದ್ದೇವೆ, ಇಷ್ಟಲಿಂಗ ಕಟ್ಟಿಕೊಳ್ಳುವುದು ಒಂದು ನಿಯಮವೆಂದು ತಿಳಿದು, ಅದರ ಮರ್ಮವನ್ನರಿಯದೆ ಕಟ್ಟಿಕೊಳ್ಳುವವರನ್ನು ಜರಿಯುತ್ತಾರೆ.

ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದಡೇನು
ಹಸಿವು ಹೋಹುದೆ?
ಅಂಗದ ಮೇಲೆ ಲಿಂಗ ಸ್ವಾಯತವಾದಡೇನು? ಭಕ್ತನಾಗಬಲ್ಲನೆ?
ಇಟ್ಟ ಕಲ್ಲು ಮೆಳೆಯ ಮೇಲೆ ಸಿಲುಕಿಸಿದಡೆ
ಆ ಕಲ್ಲು ಲಿಂಗವೆ? ಇಟ್ಟಾತ ಗುರುವೆ?
ಇಂಥವರ ಕಂಡರೆ ನಾಚುವೆನಯ್ಯ ಗುಹೇಶ್ವರಾ.

ಹೊಟ್ಟೆಯ ಮೇಲೆ ಸ್ವಾದಿಷ್ಟವಾದ ಊಟದ ಗಂಟನ್ನು ಕಟ್ಟಿಕೊಂಡ ಮಾತ್ರಕ್ಕೆ ಹಸಿವು ಹೋಗಲಾರದು, ಅದನ್ನು ಬಿಚ್ಚಿಕೊಂಡು ಉಣ್ಣಬೇಕು. ಅದೇ ರೀತಿ ಗೋಡೆಯ ಮೊಳೆಗೆ ನೇತು ಹಾಕಿರುವ ಹಾಗೆ ಕೇವಲ ಯಾಂತ್ರಿಕವಾಗಿ ಲಿಂಗವನ್ನು ಧರಿಸಿದರೆ ಪ್ರಯೋಜನವಿಲ್ಲ. ಭಕ್ತಿಯಿಂದ ದಿನನಿತ್ಯ ಅರ್ಚಿಸಿ ಲಿಂಗ ಪ್ರೇಮವನ್ನು ಬೆಳೆಸಿಕೊಂಡು ಇಷ್ಟ ಲಿಂಗಯೋಗ ಮಾಡಬೇಕು ಎನ್ನುತ್ತಾರೆ. ಇಷ್ಟಲಿಂಗವನ್ನು ಭಾವನಾತ್ಮಕವಾಗಿ ಧರಿಸಬೇಕು.

ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ
ಲಿಂಗವನರಿದ ಬಳಿಕ ಮತ್ತೇನನರಿದಡೂ ಫಲವಿಲ್ಲ
ಸರ್ವಕಾರಣ ಲಿಂಗವಾಗಿ,
ಲಿಂಗವನೆ ಅರಿದರಿದು, ಲಿಂಗಸಂಗನೆ ಮಾಡುವೆ
ಸಂಗ ಸುಖದೊಳು ಓಲಾಡುವೆ ಗುಹೇಶ್ವರಾ.

ಯಾವುದನ್ನು ಅರಿತರೆ ಎಲ್ಲವನ್ನು ಅರಿತಂತಾಗುತ್ತದೆಯೋ ಅದುವೇ ಇಷ್ಟಲಿಂಗ, ಲಿಂಗದೇವರು ಪರಮಾತ್ಮ ತತ್ವ. ಅನೇಕ ಲಿಂಗಧಾರಿಗಳು ತಮ್ಮಲ್ಲಿರುವ ಲಿಂಗದ ಮಹತ್ವ ಅರಿಯದೆ ಗುಡಿ - ಗುಂಡಾರಗಳನ್ನು ಸುತ್ತುತ್ತಿರುತ್ತಾರೆ. ಇದರಿಂದ ಇನ್ನಷ್ಟು ಮತ್ತಷ್ಟು ತೊಂದರೆಗೆ ಒಳಗಾಗುತ್ತಾರೆ.

ವ್ಯಕ್ತಿ ಅನುಭಾವಿಯಾಗಬೇಕು ಜ್ಞಾನಿಯಾಗಬೇಕು ಎನ್ನುವುದನ್ನು ತುಂಬಾ ವಿಶೇಷವಾಗಿ ಹೇಳುತ್ತಾರೆ. ನಾನು ಅನೇಕ ಸಲ ಯೋಚನೆ ಮಾಡುತ್ತಾ ಇರುತ್ತೇನೆ ಕರ್ನಾಟಕದಲ್ಲಿ ಸಾವಿರಾರು ಮಠಾಧೀಶರಿದ್ದರೂ ಕೂಡ ಲಿಂಗಾಯತ ಧರ್ಮವನ್ನು ಪ್ರಚಾರ ಮಾಡುವಲ್ಲಿ, ಧರ್ಮಕ್ಕೆ ಕುಂದು ಬಂದಾಗ ಹೋರಾಟ ಮಾಡಲು ಬಸವ ಧರ್ಮ ಪೀಠವೇ ಏಕೆ ಮುಂಚೂಣಿಯಲ್ಲಿರುತ್ತೇ? ಉಳಿದವರು ಏಕೆ ಸುಮ್ಮನಿರುತ್ತಾರೆ? ಎಂದು. ಅಲ್ಲಮ ಪ್ರಭುದೇವರ ವಚನದಲ್ಲಿ ಇದಕ್ಕೆ ಉತ್ತರ ಸಿಕ್ಕಿತು.

ಅಯ್ಯಾ ಅನುಭಾವವಿಲ್ಲದ ವಿರಕ್ತಿ, ಆಯುಧವಿಲ್ಲದ ವೀರನಂತೆ
ಅನುಭಾವವಿಲ್ಲದ ಷಟಸ್ಥಲವು ಕಣ್ಣಿಲ್ಲದ ಕುರುಡನಂತೆ
ಅನುಭಾವವಿಲ್ಲದ ಜಂಗಮವು ಕಾಲಿಲ್ಲದ ಹೆಳವನಂತೆ.

ಒಬ್ಬ ವ್ಯಕ್ತಿ ಎಷ್ಟೇ ವೀರನಾದರೂ ಅವನಲ್ಲಿ ಆಯುಧವಿಲ್ಲದಿದ್ದರೆ ಏನು ಪ್ರಯೋಜನ? ಅದೇ ರೀತಿ ಒಬ್ಬ ವ್ಯಕ್ತಿ ಎಷ್ಟೇ ತ್ಯಾಗಿಯಾಗಿರಲಿ, ವಿರಕ್ತನಾಗಿರಲಿ ಅವರಲ್ಲಿ ಅನುಭಾವ, ಜ್ಞಾನಗಳೆಂಬ ಆಯುಧ ಇಲ್ಲದಿದ್ದರೆ ಏನು ಪ್ರಯೋಜನ? ಕರ್ನಾಟಕದ ಬಹುಪಾಲು ಮಠಾಧೀಶರು, ಅನುಭಾವ ಗಳಿಸಿಕೊಳ್ಳುವಲ್ಲಿ ತುಂಬಾ ಹಿಂದೆ ಇದ್ದಾರೆ. ಅದಕ್ಕಾಗಿ ಅವರಿಗೆ ಧರ್ಮಕ್ಕೆ ಕುಂದನ್ನುಂಟು ಮಾಡುವ ಶತ್ರುಗಳೊಡನೆ ಹೋರಾಡಲು ಸಾಧ್ಯವಾಗುತ್ತಿಲ್ಲ.

ನಂತರ ಅಲ್ಲಮ ಪ್ರಭುದೇವರ ವಚನಗಳಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಬಾರದು ಎಂದು ಹೇಳಿ ದೇವಾಲಯಗಳ ಸಂಸ್ಕೃತಿಯನ್ನು ತಿರಸ್ಕರಿಸುತ್ತಾರೆ.

ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದೊಡೆ ದೇವರತ್ತ ಹೋದರೋ
ಲಿಂಗ ಪ್ರತಿಷ್ಠೆಯ ಮಾಡಿದವರಿಗೆ ನಾಯಕ ನರಕ ಗುಹೇಶ್ವರಾ.

ಭಕ್ತರಿಂದ ಕಾಣಿಕೆ ಬರುವುದು ಎಲ್ಲಿ ತಪ್ಪಿ ಹೋಗುತ್ತೋ ಎನ್ನುವ ಭಯದಿಂದ ಅನೇಕ ಲಿಂಗಧಾರಿ (ವೇಷಧಾರಿ) ಮಠಾಧೀಶರುಗಳು, ಗಣಪತಿ, ನವಗ್ರಹಗಳ ಪ್ರತಿಷ್ಠಾಪನೆ ಮಾಡುತ್ತಾರೆ. ಭಕ್ತರಿಗೆ ಜ್ಞಾನವನ್ನು ಕೊಡದೇ ಮತ್ತಷ್ಟು ಅಜ್ಞಾನದ ಕೂಪದಲ್ಲಿ ಅವರನ್ನು ತಳ್ಳುತ್ತಾರೆ. ಅಂಧಕನ ಕೈ ಅಂಧಕ ಹಿಡಿದಂತೆ ಇವರ ಭಕ್ತಿ. ಗುರುವಾದವರು ತಮ್ಮ ಭಕ್ತರಿಗೆ ಸದಾಚಾರವನ್ನು ಬೋಧಿಸಬೇಕೆ ಹೊರತು ಮೂಢನಂಬಿಕೆಗಳನ್ನಲ್ಲ. ಆಚಾರವಿದ್ದರೆ ಗುರು ಇಲ್ಲದಿದ್ದರೆ ಗುರುವಲ್ಲ ನರನು.

ಅಲ್ಲಮ ಪ್ರಭುದೇವರು ಹೇಳುವ ಇನ್ನೊಂದು ಅತಿ ಮುಖ್ಯವಾದ ಅಂಶ ಏನೆಂದರೆ ಬಂಧು ಬಳಗ, ಅಣ್ಣ-ತಂಗಿ, ತಾಯಿ-ತಂದೆ ಯಾರೇ ಇರಲಿ ಲಿಂಗೈಕ್ಯರಾದಾಗ ದುಃಖಿಸಬಾರದು, ಅಳಬಾರದು, ಕಣ್ಣೀರು ಅಜ್ಞಾನಿಯ ಲಕ್ಷಣ ಎನ್ನುತ್ತಾರೆ.

ಅರಿವರತು, ಮರಹುಗೆಟ್ಟು
ತನ್ನಲ್ಲಿ ತಾನು ಸನ್ನಿಹಿತನಾದವರಿಗೆ;
ದುಃಖಿಸುವರೆ ಹೇಳಾ ಶೋಕಿಸುವರೆ ಹೇಳಾ ?
ಒಡಲಿಲ್ಲದಾತಂಗೆ ಎಡೆಯಲ್ಲೊಂದು ಅಳಿವುಂಟೆಂದು
ನುಡಿದು ಹೇಳುವ ಮಾತು ಭ್ರಾಂತು ನೋಡಾ
ಗುಹೇಶ್ವರನ ಶರಣ ಅಜಗಣ್ಣಂಗೆ.

ಈ ರೀತಿ ತನ್ನ ಅಣ್ಣ ಲಿಂಗೈಕ್ಯನಾದಾಗ ಅಳುತ್ತಾ ಕುಳಿತ ಮುಕ್ತಾಯಕ್ಕನಿಗೆ ಬೋಧಿಸಿರುವುದನ್ನು ಕಾಣುತ್ತೇವೆ. ಮನುಷ್ಯನಿಗೆ ಹುಟ್ಟು ಆಕಸ್ಮಿಕ ಆದರೆ ಸಾವು ಖಚಿತ. ನಾವು ಹಳೇ ಬಟ್ಟೆ ಕಳಚಿ ಹೊಸ ಬಟ್ಟೆ ಧರಿಸಿದಂತೆ ಆತ್ಮವು ಹಳೆಯದಾದ ದೇಹವನ್ನು ಕಳಚಿ ಹೊಸ ದೇಹವನ್ನು ಧರಿಸುತ್ತದೆ. ನಾವು ಎರಡು ಸಂದರ್ಭಗಳಲ್ಲಿ ಬಟ್ಟೆಗಳನ್ನು ಬದಲಾಯಿಸುತ್ತೇವೆ. ಒಂದು ನಾವು ದಿನ ನಿತ್ಯ ಧರಿಸುವ ಬಟ್ಟೆ ಶಿಥಿಲವಾಗಿ ಹರಿದುಹೋದಾಗ ಮತ್ತು ಎರಡನೆಯದಾಗಿ ಹೊಸ ಬಟ್ಟೆಯೇ ಆಕಸ್ಮಿಕವಾಗಿ ಯಾವುದೋ ವಸ್ತುವಿಗೆ ಸಿಲುಕಿ ಹರಿದು ಹೋದಾಗ. ಅದೇ ರೀತಿ ದೇಹವೆಂಬ ಬಟ್ಟೆ ಆಕಸ್ಮಿಕವಾಗಿ ಅಪಘಾತಗಳಿಂದಾಗಿ ಹರಿದು ಹೋದಾಗ ಮತ್ತು ಮುಪ್ಪಾಗಿ ಶಿಥಿಲವಾದಾಗಲೂ ಆತ್ಮವು ದೇಹವನ್ನು ಬದಲಿಸಿಕೊಳ್ಳುತ್ತದೆ. ಹೀಗಾಗಿ ಸಾವು ದೇಹ ಧರ್ಮವಲ್ಲದೆ ಆತ್ಮದ ಧರ್ಮವಲ್ಲ. ಆತ್ಮವು ಮುಕ್ತಾತ್ಮನಾಗಿ ಪರಮಾತ್ಮನಲ್ಲಿ ಒಂದಾಗುತ್ತದೆ. ಇಲ್ಲವೇ ಹೊಸದೊಂದು ಜನ್ಮವನ್ನು ಪಡೆದುಕೊಳ್ಳುತ್ತದೆ ಆದಕ್ಕಾಗಿ ಲಿಂಗೈಕ್ಯರಾದಾಗ ದುಃಖಿಸಬಾರದು.

ಮನುಷ್ಯನಿಗೆ ದಿನನಿತ್ಯದಲ್ಲಿ ಬರುವ ಸಮಸ್ಯೆಗಳು, ಸ್ತುತಿ ನಿಂದೆಗಳನ್ನು ಹೇಗೆ ಸ್ವೀಕರಿಸಬೇಕು ಎನ್ನುವುದನ್ನು ತಮ್ಮ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ಸ್ತುತಿ ನಿಂದೆಗೆ ಕಿವುಡನಾಗಿರಬೇಕು.
ಪರಧನ ಪರಸತಿಯರಿಗೆ ಅಂಧಕನಾಗಿರಬೇಕು.
ವಾಕ್ಕಿನಿಂ ಪರಬ್ರಹ್ಮವ ನುಡಿವ ಕುತರ್ಕಿಗಳ ಎಡೆಯಲ್ಲಿ
ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು.

ಒಂದು ಎಂದು ಅರಿದಲ್ಲಿ ಸಂದೇಹವಿಲ್ಲದಿರಬೇಕು.
ಗುಹೇಶ್ವರ ಲಿಂಗದಲ್ಲಿ ತನ್ನ ತಾ ಮರೆದಿರಬೇಕು.

ಯಾವ ವ್ಯಕ್ತಿ ಸ್ತುತಿಸಿದಾಗ ಅತ್ಯಂತ ಹಿಗ್ಗುತ್ತಾನೋ ಅಂಥವನು ನಿಂದನೆಗಳು ಬಂದಾಗ ಅಷ್ಟೇ ದುಃಖಿಸುತ್ತಾನೆ. ನಿಂದನೆಗಳನ್ನು ಎದುರಿಸುವ ಶಕ್ತಿ ಅವನಲ್ಲಿರುವುದಿಲ್ಲ. ಅದಕ್ಕಾಗಿಯೇ ಇಲ್ಲಿ ಪ್ರಭುದೇವರು ಸ್ತುತಿ ನಿಂದೆ ಎರಡನ್ನು ಗಮನಕ್ಕೆ ತೆಗೆದುಕೊಳ್ಳಬಾರದು ಎನ್ನುತ್ತಾರೆ. ಪ್ರಾಂಜಲ ಮನಸ್ಸಿನವರ ಒಳ್ಳೆಯತನವನ್ನು ನೋಡಿ ಸ್ತುತಿಸುತ್ತಾರೆ. ಯಾರಿಗೆ ಸ್ತುತಿಸಲಿಕ್ಕೆ ಕೊಂಡಾಡಲಿಕ್ಕೆ ಬರುವುದಿಲ್ಲವೋ ಅವರು ನಿಂದಿಸುತ್ತಾರೆ. ಅದಕ್ಕಾಗಿ ನಿಂದನೆಯೂ ಅಪರೋಕ್ಷವಾಗಿ ಒಂದು ರೀತಿಯ ಮೆಚ್ಚುಗೆಯೇ! ಸಾಧಕ ಜೀವಿ ಇದನ್ನರಿತು ಸಾಗಿದರೆ ಅವನಿಗೆ ದುಃಖವೆಂಬುದೇ ಇಲ್ಲ.

ಅಲ್ಲಮ ಪ್ರಭುದೇವರು ನಮಗೆ ಕಲಿಸುವ ಇನ್ನೊಂದು ಅತೀ ಮುಖ್ಯವಾದ ಅಂಶವೆಂದರೆ ಗುರು ಬಸವ ಭಕ್ತಿ. ತಾವು ಅನುಭಾವ ಮಂಟಪಕ್ಕೆ ಬರುವ ಮೊದಲೇ ವ್ಯೋಮಕಾಯ ಸಿದ್ಧಿಯ ಜೊತೆಗೆ ಅನೇಕ ಸಿದ್ಧಿಗಳನ್ನು ಪಡೆದ ಅವರು, ''ಬಸವಣ್ಣನಾಗಿ ಹುಟ್ಟಿಸದೆ ಪ್ರಭುವಾಗಿ ಏಕೆ ಹುಟ್ಟಿಸಿದೆ?'' ಎಂದು ದೇವರನ್ನು ಕೇಳುತ್ತಾರೆ. ಇದನ್ನು ನೋಡಿದರೆ ಅವರಿಗೆ ಗುರುಬಸವಣ್ಣನವರ ಮೇಲಿರುವ ಭಕ್ತಿ, ಅಭಿಮಾನ ಎಷ್ಟೆಂಬುದು ಗೊತ್ತಾಗುತ್ತದೆ.

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ.
ಬ್ರಹ್ಮವ ನುಡಿದು ಭ್ರಮಿತನಾದೆನಯ್ಯಾ.
ಶೂನ್ಯವ ನುಡಿದು ಸುಖದುಃಖಕ್ಕೆ ಒಳಗಾದೆನಯ್ಯಾ.
ಗುಹೇಶ್ವರಾ ನಿಮ್ಮ ಶರಣ ಸಂಗನ ಬಸವಣ್ಣನ
ಸಾನ್ನಿಧ್ಯದಿಂದಾನು ಸದ್‌ಭಕ್ತನಾದೆನಯ್ಯ.

ಹೀಗೆ ಅವರ ವಚನಗಳಲ್ಲಿ ಬಸವ ಭಕ್ತಿ ನೀರಿನ ಬುಗ್ಗೆಯಂತೆ ಪುಟಿದೇಳುತ್ತದೆ. ''ಮಹಾ ಮಹಿಮ ಸಂಗನ ಬಸವಣ್ಣ ಎನಗೆಯೂ ಗುರು ನಿನಗೆಯೂ ಗುರು ಜಗವೆಲ್ಲಕ್ಕೂ ಗುರು ಕಾಣಾ ಗುಹೇಶ್ವರಾ''; ''ಆದಿಯ ಲಿಂಗ ಮೇದಿನಿಗೆ ತಂದು ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದನಯ್ಯ ಸಂಗನ ಬಸವಣ್ಣನು''; ''ಆದಿಯಲ್ಲಿ ನೀನೇ ಗುರುವಾದ ಕಾರಣ, ನಿನ್ನಿಂದ ಹುಟ್ಟಿತ್ತು ಲಿಂಗ; ''ಬಸವಾಕ್ಷರ ತ್ರಯವೆನ್ನ ಸರ್ವಾಂಗದಲ್ಲಿ ತೊಳಗಿ ಬೆಳಗುವ ಭೇದವನರಿದು ಆನು ನೀನು ಬಸವ ಬಸವ ಎನುತಿರ್ದೆನಯ್ಯಾ ಗುಹೇಶ್ವರಾ''; ''ಇದ್ದಾನೆ ನೋಡಾ ಎನ್ನ ಗುರುವಿನ ಗುರು ಪರಮಗುರು ಬಸವಣ್ಣ ಎನ್ನ ಕಣ್ಣ ಮುಂದೆ''. ಇಂಥ ನೂರಾರು ವಚನ ವಾಕ್ಯಗಳಲ್ಲಿ ಅಲ್ಲಮ ಪ್ರಭುದೇವರು ಗುರು ಬಸವಣ್ಣನವರನ್ನು ಕೊಂಡಾಡಿದ್ದಾರೆ.

ಬಸವ ಭಕ್ತಿಯಿಂದ ಮಾತ್ರ ಭವ ಹರಿಯಲು ಸಾಧ್ಯವಾಗುತ್ತದೆ, ಬಸವ ಭಕ್ತಿಯಿಂದ ಸರ್ವಜ್ಞಾನಿಯಾಗಲೂ ಸಾಧ್ಯವಿದೆ ಎಂದು ಅಲ್ಲಮ ಪ್ರಭುದೇವರು ನಮಗೆ ಕಲಿಸಿಕೊಡುತ್ತಾರೆ. ಅದಕ್ಕಾಗಿ ನಾವು ಇನ್ನಷ್ಟು ಮತ್ತಷ್ಟು ಬಸವ ಭಕ್ತಿಯನ್ನು, ಶರಣಾಗತಿಯನ್ನು ಅಳವಡಿಸಿಕೊಳ್ಳೋಣ.

ಚೆನ್ನೈ ಸಮ್ಮೇಳನದ ನಂತರ ದಕ್ಷಿಣ ಭಾರತದ ಪ್ರವಾಸ

5-5-2009ರಂದು ಚೆನ್ನೈನಿಂದ ಹೊರಟು ಪಾಂಡಿಚೇರಿ, ತಂಜಾವೂರು. ರಾಮೇಶ್ವರ, ಮಧುರೈ, ಕನ್ಯಾಕುಮಾರಿ ಮತ್ತು ಸುತ್ತಮುತ್ತಲ ಪ್ರವಾಸಿ ಸ್ಥಳಗಳನ್ನು ನೋಡಿ ದಿನಾಂಕ 11-05-09ರಂದು ಬೆಳಿಗ್ಗೆ ಬೆಂಗಳೂರು ಸೇರುವ ಹಾಗೆ ಶರಣ ಇಂದುಶೇಖರ ರವರು ವೈಯಕ್ತಿಕವಾಗಿ ವ್ಯವಸ್ಥೆ ಮಾಡಿದ್ದಾರೆ. ಪ್ರವಾಸದ ದರ ಒಬ್ಬರಿಗೆ 7500/-ರೂ. ಇದರಲ್ಲಿ ಪ್ರಯಾಣ, ಊಟ, ವಸತಿ, ಪ್ರವೇಶ ಶುಲ್ಕ ಮತ್ತು ಚೆನ್ನೈನಿಂದ ಬೆಂಗಳೂರಿಗೆ ಬರುವ ಶುಲ್ಕ ಸೇರಿವೆ. ಸಮ್ಮೇಳನಕ್ಕೆ ಹೋಗುವ ಖರ್ಚು ಮತ್ತು ಸಮ್ಮೇಳನದ ಪ್ರತಿನಿಧಿ ಶುಲ್ಕ ತಾವೇ ಭರಿಸಿಕೊಳ್ಳಬೇಕು. ವಿವರಗಳಿಗಾಗಿ ಇಂದುಶೇಖರರವರನ್ನು ಈ ದೂರವಾಣಿಗೆ ಸಂಪರ್ಕಿಸಿ; 9945684230

ಮಾತಾಜಿಯವರ ಜನ್ಮದಿನಕ್ಕೆ ಆದಿ ಪ್ರಮಥರ ಸಂದೇಶಗಳು

ಗ್ರಹಿಸಿದವರು-ಸಚ್ಚಿದಾನಂದ ಚಟನಳ್ಳಿ

ತಮ್ಮೊಡಲ ಕುಡಿ ಬಸವಾತ್ಮಜೆಯವರಿಗೆ ಧರ್ಮಗುರು ಬಸವಣ್ಣನವರಿಂದ ಜನ್ಮದಿನದ ಶುಭಹಾರೈಕೆಯ ಸಂದೇಶ

ಮಮತೆಯ ಮಗಳಾದ ಮಾತೆ ಮಹಾದೇವಿಯವರಿಗೆ ಲಿಂಗದೇವಸ್ಮರಣಪೂರ್ವಕ ಶುಭ ಹಾರೈಕೆಗಳು. ನೀವು ನನ್ನ ಪ್ರೀತಿಯ ಅಪರೂಪದ ಮಗಳು. ನಿಮ್ಮ ಗುಣಗಾನ ಮಾಡಲು ಎನ್ನ ಹೃದಯ ತುಂಬಿ ಬರುತ್ತದೆ. ನಿಮ್ಮನ್ನು ಎನ್ನ ತನುವ ಬಗೆದು ತನುವಿನೊಳಗೆ, ಮನವ ಬಗೆದು ಮನದೊಳಗೆ, ಎನ್ನ ಕಂಗಳು ಬಗೆದು ಕಂಗಳೊಳಗೆ ಇಂಬಿಟ್ಟುಕೊಂಡಿದ್ದೇನೆ. ನನ್ನ ಮೋಹದ ಮಗಳಾಗಿ ಬಂದ ನನ್ನ ಭಾವದ ಸಾಕಾರ ರೂಪ ನೀವು. ಅಂದು ನಾನು ಕಲ್ಯಾಣರಾಜ್ಯ ನಿರ್ಮಾಣ ಮಾಡಿ ಸಮತಾವಾದ ಸಮಾಜ ರಚಿಸಿದ್ದೆ. ಗಣ ಪರ್ವಗಳನ್ನು ಮಾಡಿದಾಗ ಅಂಗ, ವಂಗ, ಕಳಿಂಗ, ಗುರ್ಜರ ದೇಶಗಳಿಂದೆಲ್ಲ ಶರಣರು ಕಲ್ಯಾಣಕ್ಕೆ ಧಾವಿಸಿ ಬರುತ್ತಿದ್ದರು. ಕಲ್ಯಾಣ ಕ್ರಾಂತಿಯಾದ ಮೇಲೆ ಇಂಥ ಗಣ ಪರ್ವಗಳು ಮತ್ತೊಮ್ಮೆ ನಡೆಯುತ್ತವೆಯೋ ಇಲ್ಲವೋ ಎಂದು ಆತಂಕಗೊಂಡಿದ್ದೆ. ನೀವು ನನ್ನ ನೆಚ್ಚಿನ ಕೂಡಲ ಸಂಗಮ ಸುಕ್ಷೇತ್ರದಲ್ಲಿ 1988ರಲ್ಲಿ ಮೊಟ್ಟಮೊದಲ ಶರಣ ಮೇಳ ಮಾಡಿದಾಗ 800 ವರ್ಷಗಳಿಂದ ಇಂಥ ಗಣಮೇಳಾಪಕ್ಕಾಗಿ ಕಾಯುತ್ತಿದ್ದ ನಾನು ಶರಣ ಮೇಳದಲ್ಲಿ ಗಣಮೇಳಾಪವಾದಾಗ ಬಂದು ಅನುಭವಿಸಿದ ಆನಂದ ಅಷ್ಟಿಷ್ಟಲ್ಲ. ಎನ್ನ ಮನ ಉಬ್ಬಿ ಕೊಬ್ಬಿ ಹರುಷದೊಳೋಲಾಡಿ, ಆಡಿ, ಹಾಡಿ ಆನಂದದಿಂದ ನಲಿನಲಿದಾಡಿದೆ.

ನನ್ನ ಕಾರ್ಯಕ್ಷೇತ್ರವಾದ ಕಲ್ಯಾಣಕ್ಕೆ ಅದೆಷ್ಟೋ ಬಾರಿ ಹೋಗಬೇಕೆಂದರೂ ಕಲ್ಯಾಣದ ದುಃಸ್ಥಿತಿಯನ್ನು ನೋಡಿ ಕಂಗಳಶ್ರುಗಳಲ್ಲಿ ಮುಂದುಗಾಣದೆ ಸುಮ್ಮನಿದ್ದೆ. ಶರಣರ ರಕ್ತ ಹರಿದ ಕಲ್ಯಾಣಕ್ಕೆ ಹೋಗಲಿಕ್ಕೆ ಮನಸ್ಸೇ ಒಪ್ಪುತ್ತಿರಲಿಲ್ಲ. ಆದರೆ ನೀವು ಸಾಹಸ ಮಾಡಿ ನನಗೆ ಒರೆಗಲ್ಲಾಗಿದ್ದ ಕೊಂಡಿ ಮಂಚಣ್ಣನವರ ಸಂತತಿಯವರ ಅನಂತ ಅಡ್ಡಿ ಆತಂಕಗಳನ್ನು ಎದುರಿಸಿ, ನಾನು ಸ್ಥಾಪಿಸಿದ್ದ ಶೂನ್ಯ ಪೀಠವನ್ನು ಮತ್ತೊಮ್ಮೆ ಸ್ಥಾಪಿಸಿ ವೀರತೆಯನ್ನು ಮೆರೆದ ವೀರ ಪುತ್ರಿ ನೀವು. ಆದಿ ಶರಣರನ್ನು ಕಲ್ಯಾಣಕ್ಕೆ ಬರಮಾಡಿಕೊಂಡು ಕಲ್ಯಾಣವನ್ನು ಶಾಪದಿಂದ ವಿಮುಕ್ತಿಗೊಳಿಸಿದ ದಿವ್ಯ ಸುತೆ. ನನ್ನ 108 ಅಡಿ ಮೂರ್ತಿಯನ್ನು ನಿರ್ಮಿಸುವ ಸಾಹಸಕ್ಕೆ ಕೈಹಾಕಿ ಕಲ್ಯಾಣ ಹಾಗು ನನ್ನ ತತ್ವಗಳನ್ನು ವಿಶ್ವ ವಿಖ್ಯಾತ ಮಾಡಲು ಹೊರಟಿರುವ ನೀವು ನನ್ನ ನಿಜ ವಾರಸುದಾರಳು. ನಾನೊಮ್ಮೆ ಉತ್ತರ ಭಾರತದ ಕಾಶ್ಮೀರಕ್ಕೆ ಹೋಗಿ ಅಲ್ಲಿ ಕಾಯಕವಿಲ್ಲದೆ ಮಹಾದೇವ ಭೂಪಾಲನ ಆಶ್ರಯದಲ್ಲಿದ್ದ ಜಂಗಮರನ್ನು ಕಲ್ಯಾಣಕ್ಕೆ ಕರೆದು ತಂದೆ. ನೀವು ಇಂದು ದೇಶದ ರಾಜಧಾನಿ ದೆಹಲಿಗೆ ಹೋಗಿ ಅಲ್ಲೊಂದು ನನ್ನ ಧರ್ಮದ ಕೇಂದ್ರವನ್ನು ಸ್ಥಾಪಿಸಿದ ನಿಮ್ಮನ್ನು ಎಷ್ಟೇ ಕೊಂಡಾಡಿದರೂ ಸಾಲದು. ನೀವು ಯಾರಿಗೂ ಯಾವುದಕ್ಕೂ ಹೆದರದೆ ಮುನ್ನಡೆಯುತ್ತಿರುವುದನ್ನು ಕಂಡು ನನಗಾಗುವ ಆನಂದವನ್ನು ಶಬ್ದಗಳಲ್ಲಿ ಹೇಳಲಿಕ್ಕೆ ಆಗುತ್ತಿಲ್ಲ.

ಊರೊಳಗೆ ಹೊಸಬರು ಬಂದರೆ
ಪುರದೊಳಗಣ ಶ್ವಾನ ನೋಡಿ ಬೊಗುಳದೆ ಸುಮ್ಮನೆ ಬಿಡುವುದೆ?
ಊರಿಗೆ ಹೊರಗಾದ ಶರಣರು ಊರುಗಳ ಮಧ್ಯದೊಳಿರಲು
ದೂಷಕರು ದೂಷಿಸದಿಪ್ಪರೇ ಅಯ್ಯಾ?
ದೂಷಕರ ಧೂಮಕೇತುಗಳು ನಿಮ್ಮ ಶರಣರು ಲಿಂಗದೇವಾ.

ನೀವು ಯಾವಾಗಲೂ ಹೊಸ ಕಾರ್ಯಗಳನ್ನು ಮಾಡುತ್ತಿರುವುದರಿಂದ ಶ್ವಾನಂತಿರುವ ಅನೇಕರು ನಿಂದನೆಗಳ ಬೊಗಳಿಕೆ ಮಾಡುತ್ತಾರೆ. ಇಂಥವರು ನನ್ನ ಕಾಲದಲ್ಲಿಯೂ ಅನೇಕರಿದ್ದರು. ಲಿಂಗದೇವನ ರಾಜತೇಜದಲ್ಲಿದ್ದ ನಾನು ಇವರಾರಿಗೂ ಹೆದರಲಿಲ್ಲ. ನನ್ನ ಮಾನಸ ಪುತ್ರಿಯಾಗಿ ನನ್ನ ಶ್ರೀ ರಕ್ಷೆಯಲ್ಲಿರುವ ನೀವು ಕೂಡ ಇಂಥ ಬೊಗಳಿಕೆಗೆ ಹೆದರದೆ ಮುನ್ನಡೆಯಬೇಕು. ಇಂದು ಅನೇಕರು ನಿಮ್ಮನ್ನು ಅರ್ಥ ಮಾಡಿಕೊಳ್ಳದಿದ್ದರೂ ಮುಂದೊಂದು ದಿನ ಖಂಡಿತವಾಗಿಯೂ ಅರ್ಥ ಮಾಡಿಕೊಳ್ಳುತ್ತಾರೆ. ಋಣಗೇಡಿಗಳಾದ ನನ್ನ ಅನೇಕ ಮಕ್ಕಳನ್ನು ನೋಡಿ ನನಗೆ ಬೇಸರವಾಗುವುದಿಲ್ಲ. ಅವರೆಲ್ಲರಿಗೂ ಮೀರಿದ ಕಾರ್ಯ ಮಾಡುತ್ತಿರುವ ನಿಮ್ಮಂಥ ಮಗಳನ್ನು ನೋಡಿ ಹೆಮ್ಮೆ ಪಡುತ್ತೇನೆ. ನೀವು ಕೂಡ ಹಾಗೆಯೇ ಈ ಸಮಾಜವನ್ನು ನೋಡಿ ಎಂದೆಂದಿಗೂ ದುಃಖ ಹಾಗು ನಿರುತ್ಸಾಹಗಳನ್ನು ತಂದುಕೊಳ್ಳಬೇಡಿ. ಶತ ಶತಮಾನಗಳ ಕಾಲ ಕೊಳೆಯಿಂದ ತುಂಬಿರುವ ಇವರ ಮನಸ್ಸುಗಳು ಮೆಲ್ಲ ಮೆಲ್ಲನೆ ಭಕ್ತರಾಗುತ್ತವೆ. ನೀವು ಲೋಕ, ಲೌಕಿಕತೆ ಎನ್ನುವ ಊರಿಗೆ ಹೊರಗಾದ ಶರಣೆ. ಆದ್ದರಿಂದ ದೂಷಕರು ಸದಾ ದೂಷಿಸುತ್ತಿರುತ್ತಾರೆ. ಇದಾವುದಕ್ಕೂ ಕಿವಿಗೊಡದೆ ಮುನ್ನಡೆ ಮಗಳೇ.. ಸದಾ ನಾನು ನಿನ್ನ ಬೆನ್ನಿಗೆ ಇರುತ್ತೇನೆ. ನೀನು ನಿಂದಲ್ಲಿ ನಿಂದಪೆಂ, ನಿನ್ನೊಡನೆ ಬಪ್ಪೆಂ, ನಡೆದಲ್ಲಿ ನಡೆದಪೆಂ, ಬಂದಲ್ಲಿ ಬಂದಪೆಂ, ನುಡಿವಲ್ಲಿ ನುಡಿದಪೆಂ. ಸದಾ ನನ್ನ ಕಾರುಣ್ಯದ ವಜ್ರ ಪಂಜರದ ಶ್ರೀರಕ್ಷೆ ನಿಮಗಿದೆ. ಅಂದು ನಾನು ಅಲ್ಲಮಪ್ರಭುದೇವರ ನಂತರ ಶೂನ್ಯ ಪೀಠಕ್ಕೆ ನನ್ನ ಮೋಹದ ಮಗಳಾದ ಅಕ್ಕಮಹಾದೇವಿಯವರನ್ನು ಪೀಠಾರೋಹಣ ಮಾಡಿಸಬೇಕು ಎನ್ನುವ ಸಂಕಲ್ಪ ಹೊಂದಿದ್ದೆ. ಆದರೆ ಅಕ್ಕ ಬೇಗನೆ ಕೊಟ್ಟ ಮನೆಗೆ ಹೋದುದರಿಂದ ಆ ನನ್ನ ಸಂಕಲ್ಪ ಈಡೇರಲಿಲ್ಲ. ನನ್ನ ಸಂಕಲ್ಪಧಾರಿಯಾಗಿ ಬಂದ ನನ್ನ ಚೊಚ್ಚಲ ಮಗ ಲಿಂಗಾನಂದ ಸ್ವಾಮೀಜಿಯವರು ಅಕ್ಕನ ಸಂಕಲ್ಪಧಾರಿಯಾಗಿ ಬಂದ ನಿಮ್ಮನ್ನು ಅಕ್ಕ ಮಹಾದೇವಿ ಅನುಭಾವ ಪೀಠಕ್ಕೆ ಜಗದ್ಗುರುವಾಗಿ ಪೀಠಾರೋಹಣ ಮಾಡಿಸಿದಾಗ 800 ವರ್ಷಗಳ ಕಾಲ ಇದ್ದ ಚಿಂತೆ ನಿಶ್ಚಿಂತೆಯಾಗಿತ್ತು. ನನ್ನ ಹಾಗು ಆದಿಶರಣರ ಮಮತೆಯ ಮಗಳಾಗಿ ಅತ್ಯಂತ ಯಶಸ್ವಿಯಾದ ಹೆಜ್ಜೆಗಳನ್ನಿಡುತ್ತ 63 ವರ್ಷ ಪೂರೈಸಿ 64 ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ ಶುಭ ಸಂದರ್ಭದಲ್ಲಿ ಲಿಂಗದೇವನು ನಿಮಗೆ ಆರೋಗ್ಯಯುತವಾದ ದೀರ್ಘಾಯುಷ್ಯವನ್ನು ನೀಡಿ, ನನ್ನ ಎಲ್ಲಾ ಸಂಕಲ್ಪಗಳನ್ನು ನಿಮ್ಮ ಮೂಲಕ ಈಡೇರಿಸಲಿ ಎಂದು ಲಿಂಗದೇವನಲ್ಲಿ ಪ್ರಾರ್ಥಿಸುತ್ತಾ, ಸದಾ ನಿಮ್ಮ ಲೇಸನ್ನು ಬಯಸಿ ಶುಭ ಹಾರೈಸುವ

ನಿಮ್ಮ ಪ್ರೀತಿಯ ತಂದೆ
ಧರ್ಮಪಿತ ಗುರು ಬಸವಣ್ಣನವರು.

ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರಿಂದ ಮಹಾಜ್ಞಾನಿ ಮಾತಾಜಿಯವರ ಜನ್ಮದಿನಕ್ಕೆ ಶುಭಹಾರೈಕೆಯ ಸಂದೇಶ

ಅಕ್ಕರೆಯ ಸಹೋದರಿ ಮಾತೆ ಮಹಾದೇವಿಯವರಿಗೆ ನಿಮ್ಮ ಅಣ್ಣ ಚೆನ್ನಬಸವಣ್ಣನ ಹಾರ್ದಿಕವಾದ ಶುಭಹಾರೈಕೆಗಳು. ನಿಮ್ಮ ವ್ಯಕ್ತಿತ್ವ, ನಿಲುವುಗಳನ್ನು ನೋಡಿ ನನಗಾಗುವ ಆನಂದ ಹೇಳಲು ಶಬ್ದಗಳು ಸಾಲವು. ಅಂದು ಅನುಭಾವ ಮಂಟಪಕ್ಕೆ ಬಂದ ಅಕ್ಕನ ರೂಪವೇ ನೀವು. ರೂಪ ಕಾಲ ದೇಶ ಬೇರಾದರೂ ಭಾವ ಒಂದೇ. ಅದೇ ಜ್ಞಾನ, ಅದೇ ವೈರಾಗ್ಯ; ಎಲ್ಲವೂ ಅಕ್ಕನ ಗುಣಗಳೇ!

ಇಂದು ವೈರಾಗ್ಯ ಯೋಗದ ಮೇಲೆ ನಿಂದು ನೀವು ಮಾಡುತ್ತಿರುವ ಕಾರ್ಯಗಳನ್ನು ನೋಡಿ ನನ್ನ ಮನಸ್ಸು 850 ವರ್ಷಗಳ ಹಿಂದೆ ಹೋಗುತ್ತಿದೆ. ಅಂದು ನಾವುಗಳೆಲ್ಲರು ಅನುಭಾವ ಮಂಟಪದ ಅನುಭಾವ ಗೋಷ್ಠಿಯಲ್ಲಿ ಭಾಗಿಗಳಾಗಿದ್ದೆವು. ಧರ್ಮಪಿತ ಗುರು ಬಸವಣ್ಣನವರಿಗೆ ಗಡಿಪಾರು ಸಂದೇಶ ಬಂದಿತು. ಅವರು ಕೂಡಲ ಸಂಗಮಕ್ಕೆ ಹೊರಡಲು ಅಣಿಯಾದರು. ಹೊರಡುವುದಕ್ಕೆ ಮುಂಚೆ, "ಶಿವಯೋಗಿ ಮಗ ಬಾರೋ, ಶಿವಪುತ್ರ ಚೆನ್ನ ಬಸವ ಕಲ್ಯಾಣ ಶಿವಗಳಸ ಬಾರೋ" ಎಂದು ಕರೆದು ಆಶೀರ್ವದಿಸಿ, "ವರಚೆನ್ನಬಸವ ಶರಣರಿಗೆ ಕಂಟಕವು ಹುರಿಯಾಳು ಕಾಯೋ ಹೊಸ ಮತವ" ಎಂದು ಹೇಳಿ, ಎಲ್ಲವೂ ದೇವನಿಚ್ಛೆ ಎಂದು ನಿರ್ಲಿಪ್ತವಾಗಿ ಧರ್ಮಪಿತರು ಹೊರಟರು. ಮರುದಿನವೇ ಹರಳಯ್ಯ ಮಧುವಯ್ಯನವರಿಗೆ ಎಳೆಹೂಟೆ ಶಿಕ್ಷೆಯಾಗಿ ಕಲ್ಯಾಣ ಹೌಹಾರಿತು. ದುಷ್ಟರಾದ ಜಾತಿವಾದಿಗಳು ಶರಣರನ್ನೂ ವಚನ ಸಾಹಿತ್ಯವನ್ನೂ ನಾಶಗೊಳಿಸಲು ಹಾಕಿರುವ ಯೋಜನೆ ನಮಗೆ ಗೊತ್ತಾಗಿ ರಾತ್ರೋ ರಾತ್ರಿ ಕಲ್ಯಾಣದಿಂದ ಹೊರಟೆವು. ಶತ್ರು ಸೈನ್ಯ ಬೆನ್ನು ಹತ್ತಿತು. ಖಡ್ಗಹಿಡಿದು ಅವರೊಡನೆ ಹೋರಾಡಿದೆ. ಯುದ್ಧದಲ್ಲಿ ನನಗೂ ಅನೇಕ ಗಾಯಗಳಾದವು. ಉಳುವೆಯ ದಟ್ಟಾರಣ್ಯದ ಮಹಾಮನೆ ಗವಿಯಲ್ಲಿ ವಚನ ಸಾಹಿತ್ಯವನ್ನು ಸುರಕ್ಷಿತವಾಗಿ ಬಚ್ಚಿಟ್ಟ ಮೇಲೆ ಮನಸ್ಸಿಗೆ ಸ್ವಲ್ಪ ನೆಮ್ಮದಿಯೆನಿಸಿತು. ಆದರೆ ರಸ್ತೆ ಜನ ಸಂಪರ್ಕವೇ ಇಲ್ಲದ ಆ ಕಾಡಿನಲ್ಲಿ, ಭೋರ್ಗರೆಯುವ ಮಳೆಯಲ್ಲಿ, ರಕ್ತ ಹೀರುವ ಜಿಗಣೆಗಳ ಕಾಟದಲ್ಲಿ ಜೀವನ ಸಾಗಿಸುವುದೇ ದುಸ್ತರವಾಯಿತು. ಹೀಗಾಗಿ ಅಪ್ಪ ಬಸವಣ್ಣನವರು ನನಗೆ ವಹಿಸಿದ್ದ ಹೊಸ ಮತ ಕಾಯುವ ಬೆಳೆಸುವ ಮಣಿಹ ಪೂರೈಸಲು ಸಾಧ್ಯವಾಗುತ್ತಿಲ್ಲವಲ್ಲ ಎಂದು ನನಗೆ ತುಂಬಾ ಕಳವಳವಾಗುತ್ತಿತ್ತು. ಆಗಾಗಲೇ ನನಗೆ ಯುದ್ಧದಲ್ಲಿ ಆದ ಗಾಯಗಳಿಂದ ಚೇತರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ನಾನು ಲಿಂಗೈಕ್ಯವಾಗುವ ಸಮಯ ಹತ್ತಿರವಾಗುತ್ತಿದೆ ಎನಿಸಿದಾಗ ಪಕ್ಕದಲ್ಲಿದ್ದ ತಾಳೆಗರಿಯ ಮೇಲೆ ನನ್ನ ಸಂಕಲ್ಪವನ್ನು ಬರೆದೆ.

ಭೂಮಿಯಲ್ಲಿ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ,
ಮುಂದಣ ಫಲದೊಳಗರಸಿಕೋ.
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನಬೇಡ,
ಮುಂದಣ ಬಣ್ಣದೊಳಗರಸಿಕೋ.
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನಬೇಡ,
ಮುಂದಣ ಬೆಳಗಿನೊಳಗರಸಿಕೋ.
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ,
ಇದು ಕಾರಣ ಕೂಡಲ ಚೆನ್ನ ಸಂಗನ ಶರಣರ
ಪ್ರತಿಬಿಂಬದೊಳಗರಸಿಕೋ ಸಂಗನ ಬಸವಣ್ಣನ.

ಅಂದು ನಾನು ಲಿಂಗಾಯತ ಧರ್ಮವೃಕ್ಷ ಬೆಳೆಸಲು ಒಂದು ಬೀಜವಾಗಿ ಹೋದೆ, ಜ್ಯೋತಿಯಾಗಿ ಉರಿದೆ. ಮುಂದೆ ಒಂದು ದಿನ ಫಲ ಬರುತ್ತದೆ, ಮತ್ತೆ ಈ ತತ್ವ ಬೆಳಗುತ್ತದೆ ಎಂಬ ನಂಬಿಕೆಯಿಂದ. 800 ವರ್ಷಗಳ ಕಾಲ ಚಂದ್ರನಿಗಾಗಿ ಚಕೋರ ಪಕ್ಷಿ ಕಾಯುವಂತೆ ಕಾಯ್ದೆ. ನೀವು ಬಂದು ನಾಡಿನಾದ್ಯಂತ ಭಾರಿ ಅಬ್ಬರ ಹೊತ್ತು ಪ್ರವಚನ ಮಾಡುತ್ತ ಬಸವ ತತ್ವವನ್ನು ಬೋಧಿಸುವ ವೈಖರಿಯನ್ನು ಕಂಡಾಗ, ನಾನು ಬಿತ್ತಿದ ಬೀಜದ ಫಲ, ನಾನು ಹೊತ್ತಿಸಿದ ಜ್ಯೋತಿಯ ಬೆಳಕು ಕಂಡು ನನ್ನ ಮನಸ್ಸಿಗೆ ನೆಮ್ಮದಿ ದೊರಕಿತು. ಅಪ್ಪ ಬಸವಣ್ಣನವರ ಋಣ ತೀರಿಸಲು ನನ್ನಿಂದ ಆಗಲಿಲ್ಲವಲ್ಲ ಎಂದು ಅಪಾರ ನೋವನ್ನು ಅನುಭವಿಸುತ್ತಿದ್ದೆ. ಉಳುವೆಯ ದಟ್ಟಾರಣ್ಯದಲ್ಲಿ ಯಾವುದೇ ಸೌಕರ್ಯಗಳಿರದುದರಿಂದ

ಅನುಭವ ಮಂಟಪ ಮತ್ತೊಮ್ಮೆ ಕಟ್ಟಲಿಕ್ಕೆ ನಮ್ಮಿಂದ ಆಗಿರಲಿಲ್ಲ. ಆದರೆ ನೀವು ಇಂದು ಕಟ್ಟಿರುವ ಸಂಸ್ಥೆಗಳ ಜೊತೆಗೆ ಸಾಹಿತ್ಯ ಪ್ರಕಟಣೆ ಮಾಡುತ್ತ ಧರ್ಮಪ್ರಚಾರ ಮಾಡುವ ಪರಿಯಿಂದ ಎಲ್ಲಾ ಪ್ರಮಥರ ಮುಂದೆ ಅಹುದಹುದೆನಿಸುವ ಕಾರ್ಯವನ್ನು ನೀವು ಮಾಡುತ್ತಿದ್ದೀರಿ. ಅಂದು ನಾನು ಹೊತ್ತಿಸಿದ ಜ್ಯೋತಿ ಕೆಡದೆ ಇಂದು ಬಸವ ತತ್ವದ ಬೆಳಕನ್ನು ಚೆಲ್ಲುತ್ತ ದೇದೀಪ್ಯಮಾನವಾಗಿ ಬೆಳಗುತ್ತಿರುವುದನ್ನು ಕಂಡು ಆನಂದ ತುಂದಿಲನಾಗಿದ್ದೇನೆ. ನೀವು ಹುಟ್ಟಿ ಬರದಿದ್ದರೆ ನಮ್ಮ ಸಂಕಲ್ಪಗಳೆಲ್ಲವೂ ಹಾಗೆಯೇ ಉಳಿಯುತ್ತಿದ್ದವು. ನಮ್ಮ ಎಲ್ಲಾ ಸಂಕಲ್ಪಗಳನ್ನು ಪೂರೈಸಲು ಕಾರಣವಾದ ತಮ್ಮ ಈ ಜನ್ಮದಿನದ ಶುಭ ಸಂದರ್ಭದಲ್ಲಿ ಗುರು ಬಸವಣ್ಣನವರು ಹಾಗು ಕೂಡಲಚೆನ್ನಸಂಗಮದೇವರು ನಿಮಗೆ ದೀರ್ಘಾಯುಷ್ಯವನ್ನು ನೀಡಿ ಬಹು ಕಾಲದವರೆಗೆ ತಮ್ಮಿಂದ ಬಸವ ಜ್ಯೋತಿ ಬೆಳಗಿಸುವಂತೆ ಮಾಡಲಿ ಎಂದು ಪ್ರಾರ್ಥಿಸಿ ತಮಗೆ 64ನೇ ಜನ್ಮದಿನದ ಶುಭಾಶಯಗಳನ್ನು ಕೋರುವ

ನಿಮ್ಮ ಅಣ್ಣ
ಚೆನ್ನ ಬಸವಣ್ಣ.

ವೈರಾಗ್ಯ ಯೋಗದ ಮೇಲೆ ನಿಂದು 63 ವರ್ಷ ಪೂರೈಸಿದ ಮಾತಾಜಿಯವರಿಗೆ ವೀರ ವೈರಾಗ್ಯನಿಧಿ ಅಲ್ಲಮ ಪ್ರಭುದೇವರ ಶುಭ ಹಾರೈಕೆಯ ಸಂದೇಶ

ಗುಹೇಶ್ವರ ಲಿಂಗದ ಮೋಹದ ಸತಿ, ನನ್ನ ಮಮತೆಯ ಸೊಸೆ, ಮಾತೆ ಮಹಾದೇವಿಯವರಿಗೆ 64ನೇ ಜನ್ಮ ದಿನದ ಶುಭಾಶಯಗಳು.

ಅಂದು ನಮ್ಮೆಲ್ಲರನ್ನು ಒಂದೊಂದು ನಾಮ ವಿಶೇಷಣಗಳಿಂದ ಕರೆಯುತ್ತಿದ್ದರು. ಗುರು ಬಸವಣ್ಣನವರನ್ನು ಭಕ್ತಿ ಭಂಡಾರಿಯೆಂದೂ, ಚೆನ್ನಬಸವಣ್ಣನವರನು ಚಿನ್ಮಯ ಜ್ಞಾನಿಯೆಂದೂ, ಸಿದ್ಧರಾಮರನ್ನು ಶಿವಯೋಗಿಯೆಂದೂ, ನನ್ನನ್ನೂ ವೈರಾಗ್ಯನಿಧಿಯೆಂದೂ ಕರೆಯುತ್ತಿದ್ದರು. ಗುರು ಬಸವಣ್ಣನವರ ಭಕ್ತಿ, ಚೆನ್ನಬಸವಣ್ಣನವರ ಜ್ಞಾನ, ಸಿದ್ಧರಾಮರ ಶಿವಯೋಗವನ್ನು ಮತ್ತು ಇನ್ನು ಅನೇಕ ವಿಶೇಷತೆಗಳನ್ನು ಮೈಗೂಡಿಸಿಕೊಂಡವರು ನಿಮ್ಮ ಅಕ್ಕ ಅಕ್ಕಮಹಾದೇವಿ. ನಿಮ್ಮನ್ನು ನೋಡಿದಾಗಲೂ ನನಗೆ ಹಾಗೆಯೇ ಎಲ್ಲಾ ಗುಣಗಳ ಸಂಗಮವಾಗಿದ್ದೀರಾ ಎನಿಸುತ್ತದೆ. ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣಿ ಸಂಗಮವಾಗಿರುವ ನಿಮ್ಮನ್ನು ನೋಡಿದಾಗ ನನಗೆ ಸೋಜಿಗವಾಗುತ್ತದೆ. ತರಂಗಿಣಿಯಂಥ ಗ್ರಂಥದ ಮೂಲಕ ಅಕ್ಕನನ್ನು ಮಾತ್ರವಲ್ಲದೆ ನಮ್ಮೆಲ್ಲರನ್ನೂ ಜಗತ್ತಿಗೆ ಪರಿಚಯಿಸಿದ್ದೀರಿ.

ಅಂದು ನಾನು ಬ್ರಹ್ಮವ ನುಡಿದು ಭ್ರಮಿತನಾಗಿ, ಶೂನ್ಯವ ನುಡಿದು ಸುಖ ದುಃಖಕ್ಕೀಡಾಗಿ, ಸಂಗನ ಬಸವಣ್ಣನ ಸಾನ್ನಿಧ್ಯದಿಂದ ಸದ್ಭಕ್ತನಾದೆ. ಇಂದು ನೀವು ಸದ್ಭಕ್ತೆಯಾಗುವುದರ ಜೊತೆಗೆ ಅನೇಕರನ್ನು ಬಸವ ಭಕ್ತರನ್ನಾಗಿ ಮಾಡಿ ಬಸವ ಸಾಮ್ರಾಜ್ಯವನ್ನು ನಿರ್ಮಿಸಿದ್ದೀರಿ. ಅಂದು ಮುಕ್ತಿಯ ಆಕಾಂಕ್ಷಿಯಾಗಿ ಕದಳಿಯ ಬನದತ್ತ ಹೋಗುವ ದಾರಿ ಮಧ್ಯದಲ್ಲಿ ಧರ್ಮ ಪ್ರಚಾರ ಮಾಡುತ್ತ ಸಾಗಿದ್ದೆ. ಆದರೆ ನೀವು ಇಂದು ಮುಕ್ತಿಯ ಹಂಗನ್ನೂ ತೊರೆದು ಕೋಟಿ ಜನರ ಮುಕ್ತಿಗಾಗಿ ಗುಹೇಶ್ವರಲಿಂಗದ ಶಕ್ತಿಯಾಗಿ ನಿಂದ ನಿಲುವನ್ನು ನೋಡಿ ನನಗೆ ಬಲು ಸೋಜಿಗವೆನಿಸುತ್ತಿದೆ. ಧರ್ಮ ಪ್ರಚಾರ ಮಾಡುತ್ತ ಹೋಗಿ ಮರಾಠಿ ನಾಡಿನ ಕೊಲ್ಹಾಪುರದ ಹತ್ತಿರದಲ್ಲಿರುವ ಅಳತೆ ಗ್ರಾಮದ ಪ್ರಶಾಂತವಾದ ಬೆಟ್ಟದಲ್ಲಿ ತಪಸ್ಸನ್ನು ಮಾಡಿದೆ. ನನ್ನ ನೆಚ್ಚಿನ ತಾಣವಾದ ಆ ಗಿರಿಯು ಹೀಗೆಯೇ ಕಾಲನ

ಗರ್ಭದಲ್ಲಿ ಮುಚ್ಚಿಹೋಗುತ್ತದೆಯೇನೋ ಎಂದು ಕಳವಳವಾಗಿತ್ತು. ನನ್ನ ಮಮತೆಯ ಸೊಸೆಯಾದ ನೀವು, ನಾನು ತಪಗೈದ ಸ್ಥಳವನ್ನು 'ಅಲ್ಲಮ ಗಿರಿ' ಎಂದು ಗುರುತಿಸಿ ಅಲ್ಲಿ 2006ರ ಚೈತ್ರ ಮಾಸದಲ್ಲಿ ಗಣಮೇಳವನ್ನು ಮಾಡಿದಾಗ ನಿಮ್ಮ ಪ್ರಯತ್ನದಿಂದ ನನ್ನನ್ನು ಆ ಭಾಗದಲ್ಲಿ ಪೌರಾಣಿಕ ಪುರುಷನನ್ನಾಗಿ ಮಾಡುವುದು ತಪ್ಪಿತು. 2007ರ ಚೈತ್ರ ಮಾಸದಲ್ಲಿ ನನ್ನ ಹೆಸರಿನ ಯೋಗ ಪೀಠವನ್ನು ಸ್ಥಾಪಿಸುವುದರ ಮೂಲಕ ಮರಾಠಿ ನಾಡಿನ ಬಸವ ಪರಂಪರೆಯ ಶರಣರಿಗೆ ಆಸರೆಯಾದಿರಿ.

ನಿಮ್ಮ ಕಾರ್ಯದಕ್ಷತೆ, ನಮ್ಮೆಲ್ಲರ ಮೇಲೆ ನಿಮ್ಮಲ್ಲಿರುವ ಅಪಾರವಾದ ಪ್ರೀತಿ ಗೌರವಗಳನ್ನು ಕಂಡು ನಾನು ಮೂಕವಿಸ್ಮಿತನಾಗಿದ್ದೇನೆ. ನಿಮ್ಮ ಕೊಂಡಾಡಲೆನ್ನಳವಲ್ಲ. 63 ವರ್ಷಗಳ ತುಂಬು ಅಧ್ಯಾತ್ಮ ಜೀವನವನ್ನು ನಡೆಸಿ 64 ವರ್ಷಕ್ಕೆ ಹೆಜ್ಜೆಯಿಡುತ್ತಿರುವ ಈ ಶುಭ ಸಂದರ್ಭದಲ್ಲಿ, ಗುಹೇಶ್ವರ ಲಿಂಗದಲ್ಲಿ ನಿಮಗೆ ಪರಮ ಪದವಿ ಲಭಿಸಿ ನೂರಾರು ವರ್ಷಗಳ ಕಾಲ ಆರೋಗ್ಯಯುತವಾಗಿ ಬಾಳಿ ಗುರು ಬಸವಣ್ಣನವರ ಸೇವೆಗೈಯುವಂತಾಗಲೆಂದು ಶುಭ ಹಾರೈಸುವ

ನಿಮ್ಮ ಪ್ರೀತಿಯ ಮಾವ
ಅಲ್ಲಮ ಪ್ರಭುದೇವ

ಇಷ್ಟಲಿಂಗಯೋಗಿ ಮಾತಾಜಿಯವರಿಗೆ ಬಸವಯೋಗಿ ಸಿದ್ಧರಾಮೇಶ್ವರರಿಂದ ಶುಭ ಹಾರೈಕೆಯ ಸಂದೇಶ

ನನ್ನ ಒಲವಿನ ಮಗಳು ಮಾತೆ ಮಹಾದೇವಿಯವರಿಗೆ 64ನೇ ಜನ್ಮದಿನದ ಶುಭಾಶಯಗಳು. ನಾನು ಅಂದು ಕಲ್ಯಾಣಕ್ಕೆ ಅತೀ ಹತ್ತಿರದಲ್ಲೇ ಇದ್ದರೂ ಗುರು ಬಸವ ಮಹಿಮೆಯನ್ನು ಅರಿಯದಾಗಿದ್ದೆ. ಅಲ್ಲಮ ಪ್ರಭುದೇವರು ಬಂದು **"ಎನ್ನ ಕಾಯವಿಡಿದಿಪ್ಪ ಕರಸ್ಥಲದ ಅನುವನು ಸಂಗನ ಬಸವಣ್ಣ ಬಲ್ಲನು; ಬೆಸಗೊಂಬ ಬಾರಾ ಸಿದ್ಧರಾಮಯ್ಯ"** ಎಂದು ಕರೆಯದಿದ್ದರೆ ನಾನು ಜಡವಾದ ಮಣ್ಣು ಕಲ್ಲಿನ ಕೊಂಪೆಯಲ್ಲಿ ಇರುತ್ತಿದ್ದೆನೋ ಏನೋ!. ಆದರೆ ಪ್ರಭುದೇವರು ಬಂದು ಅನುಭಾವ ಮಂಟಪದ ಶರಣ ಗಣಪದವಿಗೆ ನನ್ನನ್ನು ಯೋಗ್ಯನನ್ನಾಗಿಸಿದರು. ಇದರಿಂದಾಗಿ ನಾನು ಜೀವಂತವಾಗಿ ವಚನಸಾಹಿತ್ಯದಲ್ಲಿ ಉಳಿದುಕೊಂಡೆ.

ನಾನೊಮ್ಮೆ ಗುರು ಬಸವಣ್ಣನವರನ್ನು ಮತ್ತು ಗುರು ಚೆನ್ನಬಸವಣ್ಣನವರನ್ನು ಸೊನ್ನಲಾಪುರಕ್ಕೆ ಕರೆದೊಯ್ದಿದ್ದೆ. ಅಲ್ಲಿ ಅವರಿಬ್ಬರ ಮೆರವಣಿಗೆ ಮಾಡಿಸಲು ಪಲ್ಲಕ್ಕಿಯನ್ನು ಸಿದ್ಧಪಡಿಸಲಾಗಿತ್ತು. ಗುರು ಬಸವಣ್ಣನವರಿಗೆ ಕೇಳಿಕೊಂಡಾಗ ಅವರು ನನ್ನ ಹಂಬಲಕ್ಕೆ ಮಣಿದು ಪಲ್ಲಕ್ಕಿಯಲ್ಲಿ ಆಸೀನರಾಗಲು ಒಪ್ಪಿದರು. ಎನ್ನ ಗುರು ಚೆನ್ನಬಸವಣ್ಣನವರನ್ನೂ ಪಲ್ಲಕ್ಕಿಯ ಮೇಲೆ ಕುಳಿತುಕೊಳ್ಳಲು ಕೇಳಿಕೊಂಡಾಗ ಅವರು –

"ನಮ್ಮ ಗುರುಗಳ ಸನ್ನಿಧಿಯಲ್ಲಿ ನಿಮ್ಮ ಗುರುಗಳು ಪಲ್ಲಕ್ಕಿಯನ್ನೇರುವರೆಂತು?
ನಮ್ಮ ಗುರುಗಳ ಸನ್ನಿಧಿಯಲ್ಲಿ ನಿಮ್ಮ ಗುರುಗಳು ಮೆರೆವರೆಂತು?
ಅವರ ಮೆರವಣಿಗೆಯೇ ಎನ್ನ ಮೆರವಣಿಗೆ
ಅವರಾನಂದವೇ ಎನ್ನಾನಂದ ಕಾಣಾ
ಕೂಡಲ ಚೆನ್ನಸಂಗನ ಶರಣ ಸಿದ್ಧರಾಮಯ್ಯ"

ಎಂದು ಹೇಳಿ ಗುರು ಭಕ್ತಿಯನ್ನು ಮೆರೆದರು. ಇಂದು ನೀವು ಗುರು ಬಸವಣ್ಣನವರನ್ನು ಮೆರೆಸುವ ರೀತಿ ನೋಡಿದಾಗ ನನ್ನ ಗುರು ಚೆನ್ನಬಸವಣ್ಣನವರನ್ನೇ ನೋಡಿದಂತಾಗುತ್ತದೆ. ಎಲ್ಲಿಯೂ ನಿಮ್ಮನ್ನು ನೀವು ಮೆರೆಸಿಕೊಳ್ಳದೆ ಗುರು ಬಸವಣ್ಣನವರನ್ನೇ ಮೆರೆಸುತ್ತಿದ್ದೀರಿ. ನಿಮ್ಮ ಎಲ್ಲಾ ಸಭೆ ಸಮಾರಂಭಗಳಲ್ಲಿಯೂ ಎನ್ನ ಗುರುವಿನ ಗುರುವಿಗೆ ಅಗ್ರಸ್ಥಾನ ನೀಡುತ್ತಿರುವುದನ್ನು ಕಂಡು ನನಗಂತೂ ಪರಮಾನಂದವಾಗಿದೆ. ನಾನು ಮರಾಠಿ ನಾಡಿನಲ್ಲಿ ತಪಗೈದ ಗಿರಿಯನ್ನು 'ಸಿದ್ಧರಾಮ ಗಿರಿ'ಯೆಂದು ಗುರುತಿಸಿ ನನ್ನ ನಾಡಿನ ಶರಣ ಬಂಧುಗಳು ಅಲ್ಲಿಗೆ ಬರುವಂತೆ ಮಾಡಿರುವುದಕ್ಕೆ ನಿಮಗೆ ನಾನು ಎಷ್ಟೇ ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ.

ಕಲ್ಯಾಣ ಕ್ರಾಂತಿಯಲ್ಲಿ ನಂತರ ಬಿಜ್ಜಳನ ತಮ್ಮ ಕರ್ಣದೇವನು ಚಾಲುಕ್ಯ ಸಿಂಹಾಸನದ ರಾಜನಾಗಿ ಪಟ್ಟಾಭಿಷೇಕ ಮಾಡಿಸಿಕೊಳ್ಳುವಾಗ ಕಿರೀಟಧಾರಣೆ ಮಾಡಿ ಆಶೀರ್ವಾದ ಮಾಡಲು ಬರಬೇಕೆಂದು ನನ್ನನ್ನು ಕೇಳಿಕೊಂಡನು. ಶರಣರಿಗೆ ಅನಂತ ನೋವನ್ನು ನೀಡಿದ ಅವನ ಪಟ್ಟಾಭಿಷೇಕಕ್ಕೆ ಹೋಗಲು ಅದು ಹೇಗೆ ತಾನೆ ನನ್ನ ಮನಸ್ಸು ಒಪ್ಪೀತು? ಅದಕ್ಕೆ ಗುರು ಬಸವಣ್ಣನವರಿರದ ಕಲ್ಯಾಣಕ್ಕೆ ನಾನು ಬರಲಾರೆ ಎಂದು ಅತ್ಯಂತ ದುಃಖದಿಂದ ನುಡಿದೆ. ಇದಾದ ನಂತರವೂ ಒಮ್ಮೊಮ್ಮೆ ಕಲ್ಯಾಣಕ್ಕೆ ಹೋಗಬೇಕೆನಿಸಿದರೂ ಶರಣರ ರಕ್ತ ಹರಿದ ಆ ಜಾಗದಲ್ಲಿ ನಾನು ಹೇಗೆ ಕಾಲಿಡುವುದು? ಶರಣರು ನೊಂದು ಹೋದ ಆ ಜಾಗಕ್ಕೆ ನಾನು ಹೇಗೆ ಹೋಗಲಿ ಎಂದು ತುಂಬಾ ದುಃಖದಲ್ಲಿ ಮುಳುಗಿದ್ದೆ. ಗುರು ಬಸವಣ್ಣನವರ ಸುಪುತ್ರಿಯಾದ ನೀವು 2002ನೇ ವರ್ಷದ ವೈಶಾಖ ಮಾಸದಲ್ಲಿ ನಮ್ಮೆಲ್ಲರನ್ನು ಅಲ್ಲಿಗೆ **"ಕಲ್ಯಾಣ ಕರೆದಿದೆ ಕಲ್ಯಾಣ..."** ಎಂದು ಕರೆದು ಕಲ್ಯಾಣ ಪರ್ವವನ್ನು ಮಾಡಿದ್ದೀರಿ. ಗುರು ಬಸವಣ್ಣನವರು, ಚೆನ್ನ ಬಸವಣ್ಣನವರು, ಅಕ್ಕನಾಗಲಾಂಬಿಕೆ, ಅಲ್ಲಮಪ್ರಭುದೇವ, ಹರಳಯ್ಯ, ಕಲ್ಯಾಣಮ್ಮ ಎಲ್ಲರೂ ಬರುತ್ತಿದ್ದಾರೆ. ಎಂದು ಸೊನ್ನಲಾಪುರಕ್ಕೆ ತಾವು ಬಂದು ಹೇಳಿದಾಗ ಅತ್ಯಂತ ಹರ್ಷಿತನಾಗಿ ನಾನು ಕಲ್ಯಾಣಕ್ಕೆ ಧಾವಿಸಿ ಬಂದೆ. 850 ವರ್ಷಗಳಿಂದ ಅಯ್ಯಾ.. ಅಯ್ಯಾ.. ಎಂದು ಗುರು ಬಸವಣ್ಣನವರನ್ನು ಕರೆಯುತ್ತ ಒಳಗೊಳಗೇ ತಳಮಳಿಸುತ್ತಿದ್ದ ನನಗೆ ಗುರು ಬಸವಣ್ಣನವರ ಕಲ್ಯಾಣಕ್ಕೆ ಕರೆದು ಧನ್ಯನನ್ನಾಗಿ ಮಾಡಿದ ನಿಮಗೆ ಹೇಗೆ ಅಭಿನಂದಿಸಲಿ! ಗುರು ಬಸವಣ್ಣನವರನ್ನು ಹಾಗು ಆದಿ ಶರಣರನ್ನು ನಾನು ಸ್ತೋತ್ರ ತ್ರಿವಿಧಿಯಲ್ಲಿ ಹೃದಯ ತುಂಬಿ ಹಾಡಿ ಕೊಂಡಾಡಿದ್ದೆ. ಅವುಗಳನ್ನು ಪ್ರಖ್ಯಾತ ಸಂಗೀತಗಾರರಿಂದ ಭಾವ ತುಂಬಿ ಹಾಡಿಸಿ ಧ್ವನಿಮುದ್ರಿಸುವ ಮೂಲಕ ಆ ಸ್ತೋತ್ರ ತ್ರಿವಿಧಿ ಕನ್ನಡ ನಾಡಿನಾದ್ಯಂತ ಮೊಳಗುವಂತೆ ಮಾಡಿದ್ದೀರಿ. ಅತ್ಯಂತ ಸಮರ್ಪಕವಾಗಿ ಆದಿ ಶರಣರ ಸಂಕಲ್ಪಗಳನ್ನು ಪೂರೈಸುತ್ತ 63 ವರ್ಷಗಳನ್ನು ಪೂರೈಸಿ 64 ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ ಗುರು ಬಸವಣ್ಣನವರು ತಮಗೆ ಆರೋಗ್ಯಯುತವಾದ ದೀರ್ಘಾಯುಷ್ಯವನ್ನು ನೀಡಿ ಕಾಪಾಡಲೆಂದು ಯೋಗಿನಾಥನಲ್ಲಿ ಪ್ರಾರ್ಥಿಸುವ

ನಿಮ್ಮ ದೊಡ್ಡಪ್ಪ
ಬಸವಯೋಗಿ ಸಿದ್ಧರಾಮೇಶ್ವರ

ಚೆನ್ನಮಲ್ಲಿಕಾರ್ಜುನನ ಚೆನ್ನ ಸತಿ ಅಕ್ಕಮಹಾದೇವಿಯವರಿಂದ ಸಚ್ಚಿದಾನಂದನ ನೆಚ್ಚಿನ ಸತಿ ಪೂಜ್ಯ ಶ್ರೀ ಮಾತೆ ಮಹಾದೇವಿಯವರಿಗೆ ಜನ್ಮದಿನದ ಶುಭಹಾರೈಕೆ ಸಂದೇಶ

ಅಕ್ಕರೆಯ ಸಹೋದರಿ ಒಲವಿನ ತಂಗಿ, ಮಾತೆ ಮಹಾದೇವಿಯವರಿಗೆ ನಿಮ್ಮ ಅಕ್ಕ ಅಕ್ಕ ಮಹಾದೇವಿಯ ಶುಭಹಾರೈಕೆಗಳು.

ತಂಗೀ..., ಮಹಾದೇವಿ, ಅಂದು ನೀನು **"ಒಂದೇ ಒಡಲಿನ ಎರಡು ಕುಡಿಗಳಪ್ಪಾ ನಾವು, ಅಂದು ನೀನು ಇಂದು ನಾನು ಚೆನ್ನ - ಸಚ್ಚಿದಾನಂದನ ಪತ್ನಿಯರು. ರೂಪ, ದೇಶ, ಕಾಲ ಬೇರೆ ಬೇರೆ ಎಂದೆನಿಸಿದರೂ ಭಾವ, ಮನ, ಒಲವು ಎಂದೆಂದಿಗೂ ಒಂದೆಯೇ. ನೀನೆನ್ನ ಅಕ್ಕನು ಹಿರಿಯವಳು ತಾಯೆ ನಾ ನಿನ್ನ ತಂಗಿಯು ಕಿರಿಯವಳು ಕಾಯೆ"** ಎಂದು 40 ವರ್ಷಗಳ ಹಿಂದೆ ನೀನಾಡಿದ ಮಾತುಗಳು ಇಂದಿಗೂ ನನಗೆ ನೆನಪಿವೆ. "ನೀನು ನನ್ನಲ್ಲಿ ಅವತರಿಸು" ಎಂದು ನನ್ನನ್ನು ನೀನು ಕೇಳಿಕೊಂಡಾಗ, ಚೆನ್ನ ಮಲ್ಲಿಕಾರ್ಜುನನನ್ನು ಬೆರೆಯಲು ನಾನು ತುಂಬಾ ಕಷ್ಟಪಟ್ಟಿರುವುದರಿಂದ ಮೊದಲಿಗೆ ನಿನ್ನಲ್ಲಿ ಅವತರಿಸಲು ಹಿಂದು ಮುಂದೆ ನೋಡಿದೆ. ನನ್ನ ಪತಿಯ ಆಜ್ಞೆಯಂತೆ ನಿನ್ನಲ್ಲಿ ನಾನು ಅವತರಿಸಿ ಅನುಗ್ರಹಿಸಿದೆ. ನನ್ನ ಚೈತನ್ಯವನ್ನು ಹೊತ್ತು ಇಂದು ನೀನು ಸಾಧಿಸಿದ ಸಾಧನೆ, ನಡೆದು ಬಂದ ದಾರಿ, ಮಾಡುತ್ತಿರುವ ಕಾರ್ಯಗಳನ್ನು ನೋಡಿದಾಗ ನಾನು ನಿನ್ನಲ್ಲಿ ಅವತರಿಸಿದುದು ಸಾರ್ಥಕವಾಯಿತು. ಎನ್ನುವ ಸಂತೃಪ್ತಿ ನನಗೆ ಬಂದಿದೆ. ನಾನು ಅಂದು ದಿಗಂಬರವನ್ನೇ ದಿವ್ಯಾಂಬರವನ್ನಾಗಿ ಮಾಡಿಕೊಂಡು ಹೊರಟಾಗ ಅನೇಕರಿಂದ ಸಂಕಷ್ಟಗಳನ್ನು ಎದುರಿಸಿದ್ದೆ. ಇಂದು ನೀನು ತುಂಬು ಜವ್ವನದಲ್ಲಿ ಕಾಷಾಯಾಂಬರವನ್ನೇ ದಿವ್ಯಾಂಬರವನ್ನಾಗಿ ಮಾಡಿಕೊಂಡು ಹೊರಟಾಗ ನೀನು ಕೂಡ ಅನಂತ ಸಂಕಷ್ಟಗಳನ್ನು ಕಂಡೆ. ಆದರೆ ಅನೇಕ ಸಂದರ್ಭಗಳಲ್ಲಿ ನೀನು ತೋರಿದ ಎದೆಗಾರಿಕೆ, 'ತೋರಲು ಹೆಣ್ಣು ರೂಪಾದರೇನು? ಭಾವಿಸಲು ಗಂಡು ರೂಪ ನೋಡಾ' ಎನ್ನುವ ನನ್ನ ನುಡಿಯನ್ನು ಪಾಲಿಸಿ ಅಕ್ಕನಿಗೆ ತಕ್ಕ ತಂಗಿಯಾದೆ.

ಗುರು ಬಸವಣ್ಣನವರನ್ನು ಕಾಣುವ ಹಂಬಲದಿಂದ ನಾನು ಕಲ್ಯಾಣಕ್ಕೆ ಧಾವಿಸಿದೆ. ಗುರುವೂ ಅಪ್ಪನೂ ಆದ ಬಸವಣ್ಣನವರ ವಾತ್ಸಲ್ಯದಲ್ಲಿ ಮಿಂದ ನನಗೆ ನನ್ನ ಪತಿ ಚೆನ್ನಮಲ್ಲಿಕಾರ್ಜುನನ ವಿರಹ ಕಾಡಲಾರಂಭಿಸಿತು. ನನ್ನ ಪತಿಯ ಪ್ರೇಮವನ್ನು ಸರ್ವಾಂಗದಲ್ಲೂ ಅನುಭವಿಸಿದ ಮೇಲೂ ಅಪ್ಪಿದರೆ ಅಸ್ಥಿಗಳು ನುಗ್ಗಾಗುವಂತೆ, ಅವನಲ್ಲಿ ಬೆರೆಸಿ ಬೇರಾಗದಂತೆ ಅಪ್ಪಿಕೊಳ್ಳಬೇಕು. ಅವನು ನನ್ನನ್ನು ಕರುಣದಿಂದ ಬಿಗಿದಪ್ಪಿದಾಗ ಅವನ ಹೃದಯ ಕಮಲದಲ್ಲಡಗಬೇಕು ಎನ್ನುವ ಹಂಬಲದಿಂದ ಕದಳಿಯತ್ತ ಹೊರಟೆ. ಆದರೆ ದಾರಿಯ ಮಧ್ಯದಲ್ಲಿ ಏಕೋ ಅಪ್ಪನ ನೆನಪು ಕಾಡಲಾರಂಭಿಸಿತು. ನಾನು ಕದಳಿಗೆ ಹೋಗುವ ಪ್ರಸ್ತಾಪ ಅಪ್ಪನವರ ಮುಂದಿಟ್ಟಿದ್ದಾಗ, ಅಪ್ಪನವರು **"ಬೇಡ ಮಗಳೇ ಕಾಯವಿರುವವರೆಗೆ ಶರಣರ ಸಂಗದಲ್ಲಿ ಕಾಲ ಕಳೆ"** ಎಂದು ಹೇಳಿದರೂ ನಾನು ಅವರ ಮಾತು ಕೇಳದೆ ಹಾಗೆಯೇ ಕದಳಿಗೆ ಬಂದೆ. **ಲಿಂಗ ಜಂಗಮದ ಪಾದವೇ ಗತಿ ಎಂದು ನಂಬಿದ ಸಂಗನ ಬಸವಣ್ಣನ ಮಾತು ಕೇಳದೆ ಕೆಟ್ಟೆನಯ್ಯಾ** ಎಂದೆನಿಸತೊಡಗಿತು. ಅಪ್ಪನವರು ನೀಡಿದ ತತ್ವಗಳ ಪ್ರಚಾರ ಮಾಡಬೇಕಿತ್ತು. ನಾನು ನನ್ನ ಪತಿಯನ್ನು ಅಪ್ಪಲು ಇಷ್ಟೊಂದು ಸ್ವಾರ್ಥಿಯಾಗ ಬಾರದಾಗಿತ್ತು ಎನಿಸತೊಡಗಿತು. ಹೀಗಾಗಿ ಹಿಂದಿರುಗಿ ಹೋಗಬೇಕೆನಿಸಿದರೂ ಆಗಲೇ ಬಹುದೂರದವರೆಗೆ ಬಂದಿರುವುದರಿಂದ ಹಿಂದಿರುಗದೆ ಪತಿಯ ಪ್ರೇಮಕ್ಕೆ ಮೋಹಗೊಂಡು ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಡಗಿದೆ. ಈ ಮನಸ್ಸು ಹೀಗೆ ಚಂಚಲ ಅಲ್ವಾ?

ಪತಿಯ ಪ್ರೇಮ ಸಿಕ್ಕಾಗ ಪಿತನ ವಾತ್ಸಲ್ಯ ಬಯಸುತ್ತದೆ. ಪಿತನ ವಾತ್ಸಲ್ಯ ಸಿಕ್ಕಾಗ ಪತಿಯ ಪ್ರೇಮ ಬಯಸುತ್ತದೆ. ಹಾಗೆಯೇ ಈಗ ನಾನು ನನ್ನ ಪತಿಯ ಹೃದಯದಲ್ಲೇ ಇದ್ದರೂ ಪಿತನ ನೆನಪಾಗಿ ಅವರ ಸೇವೆ ಮಾಡುವ ಹಂಬಲ ಹೆಚ್ಚಾಯಿತು. ಅದಕ್ಕಾಗಿಯೇ ನಿನ್ನ ಮೂಲಕ ಆ ಸೇವೆ ಮಾಡೋಣವೆಂದು ನಿನ್ನಲ್ಲಿ ಅವತರಿಸಿದೆ. **ಅಂದು ನಾನು ನನ್ನ ಪತಿಯನ್ನು ಸೇರಲು ಅವಸರ ಮಾಡಿದಂತೆ ನೀನು ಮಾಡಬೇಡ. ಪತಿಯ ಪ್ರೇಮಕ್ಕಿಂತ ಪಿತನ ವಾತ್ಸಲ್ಯವೇ ಹೆಚ್ಚು ಆನಂದದಾಯಕವಾದುದು ಎನ್ನುವುದನ್ನು ಅನುಭವದಿಂದ ಹೇಳುತ್ತಿದ್ದೇನೆ.** ಇನ್ನೂ ಬಹುದೊಡ್ಡ ದೊಡ್ಡ ಜವಾಬ್ದಾರಿಗಳು ನಿನ್ನ ಮೇಲಿವೆ.

ಇಂದು ನನ್ನ ಎಲ್ಲಾ ಸಂಕಲ್ಪಗಳನ್ನು ಪೂರೈಸುತ್ತ ಆರೂಢ ನಾರಿಯಾಗಿ ಲೋಕಪಾವನಗೈಯುತ್ತಾ ದೆಸೆದೆಸೆಗೂ ಬಸವ ತತ್ವವನ್ನು ಪಸರಿಸುತ್ತ, 63 ವರ್ಷಗಳನ್ನು ಪೂರೈಸಿ 64ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಶುಭ ಸಂದರ್ಭದಲ್ಲಿ ಗುರು ಬಸವಣ್ಣನವರು ನೂರಾರು ವರ್ಷಗಳ ಕಾಲ ದೀರ್ಘವಾದ ಆಯುಷ್ಯವನ್ನು ನೀಡಿ ತಮ್ಮ ಸೇವೆಯನ್ನು ಮಾಡಿಸಿಕೊಳ್ಳಲೆಂದು ಚೆನ್ನಮಲ್ಲಿಕಾರ್ಜುನನಲ್ಲಿ ಪ್ರಾರ್ಥಿಸಿ ಶುಭ ಹಾರೈಸುವ

ನಿನ್ನ ಒಲವಿನ ಅಕ್ಕ
ಮಹಾದೇವಿಯಕ್ಕ

ವೀರ ಗಣಾಚಾರಿ ಮಡಿವಾಳ ಮಾಚಿದೇವರಿಂದ ಧೀರ ಮಾತೆ ಮಾತೆ ಮಹಾದೇವಿಯವರಿಗೆ ಶುಭ ಹಾರೈಕೆಯ ಸಂದೇಶ.

ಪ್ರೀತಿಯ ಪುತ್ರಿ ಮಾತೆ ಮಹಾದೇವಿಯವರಿಗೆ 64ನೇ ಜನ್ಮದಿನದ ಶುಭಾಶಯಗಳು ನೀವು ನನ್ನ ವಾತ್ಸಲ್ಯದ ಮಗಳೂ ಹೌದು. ನನ್ನ ಎಲ್ಲಾ ಆಶೋತ್ತರಗಳನ್ನು ಪೂರೈಸಿದ ನನ್ನ ಪಾಲಿನ ಗುರು ಬಸವ ಋಣವನ್ನು ತೀರಿಸಿದ ಮಾತೆಯೂ ಅಹುದು. ನನ್ನನ್ನು ನೆನೆಸಿಕೊಂಡಾಗಲೆಲ್ಲ ನಿಮ್ಮ ಕಣ್ಣುಗಳು ಹೇಗೆ ಸುಜಲಗೊಳ್ಳುತ್ತವೆಯೋ, ನಿಮ್ಮನ್ನು ನೆನೆಸಿಕೊಂಡಾಗಲೂ ನನ್ನ ಕಣ್ಣುಗಳು ಸುಜಲಗೊಳ್ಳುತ್ತವೆ. ಅಂದು ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ ಚೆಲ್ಲವರಿದಿತ್ತು. ಲಿಂಗವೆಂಬ ಗೊಂಚಲು ತುಂಬಿಕೊಂಡಿದ್ದವು. ಒತ್ತಿ ಹಿಂಡಿದರೆ ಅಲ್ಲಿ ಭಕ್ತಿರಸವು ಚಿಮ್ಮುತ್ತಿತ್ತು. ಅದಕ್ಕಾಗಿಯೇ ಗುರು ಬಸವಣ್ಣನವರ ಚರಣವೆನ್ನ ಮನದಲ್ಲಿ ಸಾಹಿತ್ಯವಾಗುವನ್ನಕ್ಕ ನೆನೆಯುತ್ತಲಿರುವೆ. ಅವರ ಮೂರ್ತಿ ಎನ್ನಂಗವಿಸುವನ್ನಕ್ಕ ಪೂಜಿಸುವೆ. ಜ್ಞಾನಜ್ಞಾನಂಗಳಿಲ್ಲವೆನಿಸುವನ್ನಕ್ಕ ಗುರುಬಸವಣ್ಣನವರನ್ನು ಧ್ಯಾನಿಸುವೆ. ಬಸವಣ್ಣಾ.. ಬಸವಣ್ಣಾ.. ಎಂದು ಹಾಡುತ್ತ ಬಸವಣ್ಣಾ... ಬಸವಣ್ಣಾ... ಎನುತಲಿರುವೆ. ಅನಿರೀಕ್ಷಿತವಾಗಿ ನಡೆದ ಕಲ್ಯಾಣ ಕ್ರಾಂತಿಯಿಂದ, ಎತ್ತೆತ್ತ ನೋಡಿದಡತ್ತತ್ತ ಇರುವಂಥ ಬಸವನೆಂಬ ಬಳ್ಳಿ ಒಣಗಿ ಹೋಯಿತು. ಲಿಂಗವೆಂಬ ಗೊಂಚಲು ಕಮರಿ ಹೋಗತೊಡಗಿದವು. ಭಕ್ತಿಯೆಂಬ ರಸವು ಬತ್ತಿಹೋಯಿತು. ಭವ್ಯವಾದ ಕಲ್ಯಾಣವನ್ನು ದಿವ್ಯವಾದ ಗುರು ಬಸವಣ್ಣನವರನ್ನು ನೋಡಿದ ಈ ಕಣ್ಣುಗಳನ್ನು ಹೊತ್ತು ಇಂಥ ದುಃಸ್ಥಿತಿಗೆ ಬಂದ ಕಲ್ಯಾಣವನ್ನು ನೋಡಲು ಇನ್ನು ಬದುಕುಳಿಯಬೇಕಿತ್ತೆ? ಎಂದು ಪ್ರಶ್ನಿಸಿಕೊಳ್ಳುವಂತಾಗಿತ್ತು.

ಅಂದು ವಚನ ಸಾಹಿತ್ಯವನ್ನು ಹೊತ್ತು ಹೊರಟಾಗ ವೈರಿಗಳು ಬೆನ್ನುಹತ್ತಿದರು. ರಕ್ತಾಕ್ಷರಗಳಲ್ಲಿ ತಮ್ಮ ಹೆಸರನ್ನು ಬರೆಯಲಿಕ್ಕೆ ಇಷ್ಟವಿಲ್ಲವೆಂದು ಗುರು ಬಸವಣ್ಣನವರು ಹೇಳಿದ್ದರೂ ಅವರ ಪ್ರಾಣ ಸ್ವರೂಪವಾದ ವಚನ ಸಾಹಿತ್ಯದ ರಕ್ಷಣೆಗಾಗಿ ವೈರಿಗಳ ತುಂಡರಿಸಿ ಅವರನ್ನು ಮಣ್ಣುಗೂಡಿಸಿದೆ. ವಚನ ಸಾಹಿತ್ಯ ರಕ್ಷಿಸಿದ ಬಗ್ಗೆ ಅಪ್ಪ ಬಸವಣ್ಣನವರಿಗೆ

ತಿಳಿಸಲು ಕೂಡಲ ಸಂಗಮಕ್ಕೆ ಹೋದೆ. ಆದರೆ ಆಗಲೇ ಅಪ್ಪ ಬಸವಣ್ಣನವರು ಉಟ್ಟ ಸೀರೆಯನ್ನು ಹರಿದು, ಮೆಟ್ಟಿದ ಕೆರಹ ಕಳೆದು, ಕಟ್ಟಿದ ಮುಡಿಯ ಬಿಟ್ಟು, ಬೆಳಗನುಟ್ಟು ಬಯಲಾಗಿ ಹೋಗಿದ್ದರು. ಅಂದು ನಾನು ಅನುಭವಿಸಿದ ನೋವು ಹೇಳಲಸಾಧ್ಯ. ಯುದ್ಧದಲ್ಲಿ ಆದ ಗಾಯಗಳಿಂದ ಮರುಚೈತನ್ಯಗೊಳ್ಳಲು ಸಾಧ್ಯವಾಗದೆ ಬೆಳಗಾವಿಯ ಹತ್ತಿರದಲ್ಲಿರುವ ಗೊಡಚಿಯಲ್ಲಿ ಈ ಕಾಯವನ್ನು ಬಿಟ್ಟೆ. ಆದರೆ ಆತ್ಮಕ್ಕೆ ಶಾಂತಿ ಸಿಗಲೇ ಇಲ್ಲ. ಎಂಟು ಶತಮಾನಗಳ ಕಾಲ ಕಾಯ್ದೆ. ಇಂದು ಪೂಜ್ಯ ಲಿಂಗಾನಂದ ಸ್ವಾಮೀಜಿಯವರು ಹಾಗು ಅವರ ಕರ ಸಂಜಾತೆಯಾದ ತಮ್ಮಿಂದ ನನ್ನ ಸಂಕಲ್ಪಗಳು ಪೂರೈಸಿದವು. ಇಂದು ಪುನಃ ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ ಬೆಳೆಸಿದ್ದೀರಿ. ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು ಕಾಣುವಂತಾಗಿದೆ. ಭಕ್ತಿಯ ರಸವು ಸವಿಯಲು ದೊರಕುತ್ತಿದೆ. ಇದರಿಂದ ನಾನು ಧನ್ಯನಾದೆ. ನಿಮ್ಮಂಥ ವರಕುವರಿಯನ್ನು ಪಡೆದ ನಾನು ಮಾತ್ರವಲ್ಲ ಈ ನಾಡೂ ಧನ್ಯವಾಯಿತು. ಅಂದು ಶರಣರ ಕರುಳಿನ ನೋವಿನಿಂದ ಶಾಪಗ್ರಸ್ಥವಾದ ಕಲ್ಯಾಣವನ್ನು ಎಲ್ಲಾ ಶರಣರನ್ನು ಅಲ್ಲಿಗೆ ಕರೆದು ಕಲ್ಯಾಣವನ್ನು ಶಾಪವಿಮುಕ್ತವಾಗಿ ಮಾಡಿ, ಪುನಃ ಅಲ್ಲಿ ಆದಿ ಶರಣರ ಚೇತನ ಹಾಗು ಅವರ ಚೈತನ್ಯಗಳು ಬಂದು ನೆಲೆಸುವಂತೆ ಮಾಡಿದ್ದೀರಿ. ಇನ್ನು ಮುಂದೆ ನಿಮ್ಮನ್ನು ಯಾವ ದುಷ್ಟ ಶಕ್ತಿಯೂ ತಡೆಯಲಾರದು. ನಿಮ್ಮಿಂದ ಗುರು ಬಸವಣ್ಣನವರ ಸೇವೆ ಇನ್ನಷ್ಟು ಮತ್ತಷ್ಟು ಆಗಬೇಕಿದೆ. ಲಿಂಗಾಯತ ಧರ್ಮ ವಿಶ್ವ ಧರ್ಮಗಳ ಸಾಲಿನಲ್ಲಿ ನಿಲ್ಲಿಸಲಿಕ್ಕೆ ಹೋರಾಡಲು ನಿಮ್ಮಿಂದ ಮಾತ್ರ ಸಾಧ್ಯವಿದೆ. ಅದಕ್ಕಾಗಿ ಗುರು ಬಸವಣ್ಣನವರು ನಿಮಗೆ ದೀರ್ಘಾಯುಷ್ಯವನ್ನು ನೀಡಿ ಎಲ್ಲಾ ಕಾರ್ಯಗಳನ್ನು ನಿಮ್ಮಿಂದ ಮಾಡಿಸಿಕೊಳ್ಳಲೆಂದು ಕಲಿದೇವರದೇವರಲ್ಲಿ ಪ್ರಾರ್ಥಿಸಿ ಶುಭ ಹಾರೈಸುವ

ನಿಮ್ಮ ಪ್ರೀತಿಯ ಚಿಕ್ಕಪ್ಪ
ಮಡಿವಾಳ ಮಾಚಿದೇವ

ವೀರಮಾತೆ ಅಕ್ಕನಾಗಲಾಂಬಿಕೆಯವರಿಂದ ಧೀರಮಾತೆ ಮಹಾದೇವಿಯವರಿಗೆ ಹುಟ್ಟು ಹಬ್ಬದ ಶುಭ ಹಾರೈಕೆಯ ಸಂದೇಶ.

ನನ್ನ ಮಮತೆಯ ಪ್ರೀತಿಯ, ಕರುಳ ಬಳ್ಳಿಯ ಕುಡಿಯಾದ ಮಾತೆ ಮಹಾದೇವಿಯವರಿಗೆ ನಿಮ್ಮ ಅಮ್ಮ ಅಕ್ಕನಾಗಮ್ಮನ ಶುಭಹಾರೈಕೆಗಳು. ಯಾವುದೇ ಧರ್ಮ ಸಂಸ್ಕಾರವಿಲ್ಲದೆ, ಪೂಜೆ ಮಾಡುವ ಹಕ್ಕೂ ಇಲ್ಲದೆ ಒಳಗೊಳಗೇ ತಳಮಳಿಸುತ್ತ ಸ್ತ್ರೀಕುಲದ ಈ ತಳಮಳವನ್ನು ಪರಿಹರಿಸುವ ಶಕ್ತಿಗಾಗಿ ವ್ಯಾಕುಲ ತುಂಬಿ ಕಾಯುತ್ತಿರುವಾಗಲೇ ಗುರು ಬಸವಣ್ಣನವರು ಬಂದು ಸ್ತ್ರೀಕುಲದ ಕುಲಸೂತಕ, ಛಲಸೂತಕ, ತನುಸೂತಕ, ಮನಸೂತಕ, ಭಾವಸೂತಕವನ್ನು ಕಳೆದು, ಎನ್ನ ಅರಹು ಮರಹಿನ ಸಂದು ಸಂಶಯವ ಬಿಡಿಸಿ ನಿಜದ ನಿರ್ವಯಲ ಬಾಗಿಲನ್ನು ಸ್ತ್ರೀಕುಲಕ್ಕೆ ತೋರಿದರು. ಅವರ ಋಣವನ್ನು ತೀರಿಸಲು ಕೊನೆಯುಸಿರಿರುವವರೆಗೂ ಧರ್ಮಪ್ರಚಾರದ ಕಾರ್ಯ ಮಾಡತ್ತಲಿದ್ದೆ. ಆದರೆ ಅನುಭವ ಮಂಟಪದ ಭವ್ಯತೆಯನ್ನು ಪುನಃ ತರಲಿಕ್ಕೆ ನಮ್ಮಿಂದ ಸಾಧ್ಯವಾಗಲಿಲ್ಲ. ಅದಕ್ಕಾಗಿ ನಮ್ಮೆಲ್ಲರ ಹೃದಯ ನಿನಗೋಸ್ಕರ ಕಾಯುತ್ತಲಿದ್ದವು. ನಮ್ಮೆಲ್ಲರ ಸಂಕಲ್ಪಗಳ ತಪಸ್ಸಿನ ಫಲವಾಗಿ ನೀನು ಬಂದು ಸ್ತ್ರೀಕುಲದ ಮೇಲಿದ್ದ ಗುರು ಬಸವಣ್ಣನವರ ಋಣವನ್ನು ಅತ್ಯಂತ ಯಶಸ್ವಿಯಾಗಿ ತೀರಿಸುತ್ತಲಿರುವೆ. ನೀನು ಪ್ರವಚನ ಮಾಡುತ್ತ ಅನೇಕ ಪ್ರವಚನಕಾರರನ್ನು ನಿರ್ಮಾಣ ಮಾಡಿರುವೆ. ಸಾಹಿತ್ಯವನ್ನು ಬರೆದು ತನ್ನ ಶಿಷ್ಯಂದಿರಿಂದಲೂ ಸಾಹಿತ್ಯ ಬರೆಸಿದ

ಸಾಹಿತ್ಯ ಸಿರಿದೇವಿ ನನ್ನ ಮಗಳು. ನೀನು ಭಾರಿ ಅಬ್ಬರ ಹೊತ್ತು ಇಷ್ಟೊಂದು ಕಾರ್ಯ ಮಾಡುತ್ತಿರುವುದನ್ನು ನೋಡಿ ಅನೇಕರು ಮತ್ಸರಿಸುತ್ತಾರೆ. ಇದಕ್ಕಾಗಿ ನೀನು ಕಳವಳಗೊಳ್ಳಬೇಡ. ದೇವರು ಯಾವಾಗಲೂ ಹೀಗೆಯೇ ಪರೀಕ್ಷೆಗಳನ್ನು ಒಡ್ಡುತ್ತಿರುತ್ತಾನೆ. ಅನೇಕ ಸಂದರ್ಭಗಳಲ್ಲಿ ನೀನು ಧರ್ಮದ ಬಗ್ಗೆ ಚಿಂತನೆ ಮಾಡುತ್ತ ಸಮಾಜದ ಅಜ್ಞಾನವನ್ನು ನೋಡಿ ದುಗುಡಗೊಂಡಾಗ ನನಗಂತೂ ತುಂಬಾ ಕಳವಳವಾಗುತ್ತದೆ. ಅದಕ್ಕಾಗಿ ನೀನು ಯಾವುದಕ್ಕೂ ಆತಂಕ ಮಾಡಿಕೊಳ್ಳಬೇಡ. **ಮನದೊಡೆಯ ಮಹಾದೇವ ಮನವ ನೋಡಿಹೆನೆಂದು ಮನುಜರ ಕೈಯಿಂದ ಒಂದೊಂದ ನುಡಿಸುವನು ಇದಕ್ಕೆ ಕಳವಳಿಸದಿರು, ಕಾತರಿಸದಿರು ನಿಜವ ಮರೆಯದಿರು ನಿಶ್ಚಿಂತವಾಗಿರು.** ಗುರು ಬಸವಣ್ಣನವರು ತಾವು ಬಂದ ಮಣಿಹ ಪೂರೈಸಿತ್ತೆಂದು ಲಿಂಗದೊಳಗೆ ಬಗಿದು ಹೊಕ್ಕು **ಹಿಂದೆ ಲೋಕವರಿದು ಬದುಕಬೇಕೆಂದು ಸೆರಗು ಕೊಟ್ಟು ಹೋದರು.** ಆ ಸೆರಗನ್ನು ನೀನು ಹಿಡಿದುಕೊಂಡು ಬಸವ ಜ್ಯೋತಿಯ ಬೆಳಕನ್ನು ಲೋಕಕ್ಕೆ ತೋರುತ್ತಿರುವ ಮಹಾಮಾತೆ. ನಾವು ಪ್ರಾಣದ ಹಂಗನ್ನೂ ತೊರೆದು ರಕ್ಷಿಸಿದ್ದ ವಚನ ಸಾಹಿತ್ಯವನ್ನು ಇಂದು ಅತ್ಯಂತ ಸಮರ್ಪಕವಾದ ರೀತಿಯಲ್ಲಿ ಜನಮನಗಳಿಗೆ ಮುಟ್ಟಿಸುತ್ತ ಶರಣರ ಕ್ಷೇತ್ರಗಳನ್ನು ಪುನರುಜ್ಜೀವನಗೊಳಿಸುತ್ತ ಆದಿ ಶರಣರ ಸಂಕಲ್ಪಗಳನ್ನು ಪೂರೈಸುತ್ತ ಸಾಗಿರುವ ನೀನು 63 ವರ್ಷಗಳನ್ನು ಪೂರೈಸಿ 64ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಬಸವ ಪ್ರಿಯ ಕೂಡಲ ಚೆನ್ನಸಂಗಯ್ಯನು ನಿಮಗೆ ಆರೋಗ್ಯಯುತವಾದ ಆಯುಷ್ಯವನ್ನು ನೀಡಿ ಕಾಪಾಡಲೆಂದು ಶುಭ ಹಾರೈಸುವ

ನಿನ್ನ ಪ್ರೀತಿಯ ದೊಡ್ಡಮ್ಮ
ಅಕ್ಕನಾಗಮ್ಮ

ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಪೀಠಾಧೀಶರಿಂದ ದ್ವಿತೀಯ ಪೀಠಾಧೀಶರಿಗೆ ಜನ್ಮದಿನದ ಶುಭಹಾರೈಕೆಯ ಸಂದೇಶ

ನನ್ನ ಆತ್ಮೀಯ ಶಿಷ್ಯೆ ಹಾಗು ನನ್ನ ಆರಾಧ್ಯ ಮಾತೆ ಅಕ್ಕಮಹಾದೇವಿಯವರ ಪ್ರತಿರೂಪವಾದ ಪೂಜ್ಯ ಶ್ರೀ ಮಾತಾಜಿಯವರಿಗೆ ಬಸವ ಸ್ಮರಣಪೂರ್ವಕ 64ನೆ ವರ್ಧಂತಿಯ ಶುಭಾಶಯಗಳು.

ಗುರುವೆಂಬ ಶಿಲ್ಪಿಯಾಗಿ ನಾನೊಂದು ಕನಸು ಕಂಡಿದ್ದೆ. ಪ್ರತಿಭಾವಂತ ಧರ್ಮಪ್ರಚಾರಕರನ್ನು, ಗುರು ಬಸವ ತಂದೆಗಾಗಿ ತಮ್ಮ ಬಾಳನ್ನು ಮುಡುಪಿಡುವ ತ್ಯಾಗಿಗಳನ್ನು, ಗುರು ಬಸವಣ್ಣನವರ ಕನಸನ್ನು ನನಸು ಮಾಡಬಲ್ಲ, ಅವರ ಸಂಕಲ್ಪಗಳೆಲ್ಲವನ್ನೂ ಈಡೇರಿಸಬಲ್ಲ ತತ್ವ ನಿಷ್ಠರನ್ನು ರೂಪಿಸಬೇಕೆಂಬ ಆಕಾಂಕ್ಷೆ ತಳೆದಿದ್ದೆ. ದೇವ ಶಿಲೆಯಂತಿರುವ ನಿಮ್ಮನ್ನು ಕಂಡಾಗ ಈ ನನ್ನ ಆಶೋತ್ತರಗಳು ಸಿದ್ಧಿಸಬಹುದೇನೋ ಎಂದು ಸಂಕಲ್ಪಿಸಿದ್ದೆ. ನಿಮಿತ್ತ ಮಾತ್ರನಾಗಿ ದೇವಶಿಲೆಯಿಂದ ಮೂರ್ತಿಯನ್ನು ಕಟೆದೆ. ಮೂರ್ತಿ ನನ್ನ ಕಲ್ಪನೆಗೆ ತಕ್ಕಂತೆ ಸಿದ್ಧವಾಯಿತು. ಕಲ್ಪನೆಗೂ ಅತೀತವಾಗಿ ರೂಪುದಳೆಯಿತು. ಶಿಲ್ಪಿಯು ಅನೇಕ ವಿಗ್ರಹಗಳನ್ನು ಕಟೆದರೂ ಕೆಲವು ಮಾತ್ರ ಅವನನ್ನು ಕೀರ್ತಿವಂತನನ್ನಾಗಿಸುತ್ತವೆ. ಅಂತಾಗಿದೆ ಮಾತಾಜಿ ನಿಮ್ಮ ಸಾಧನೆ.

ಬಸವ ಕಲ್ಯಾಣದಲ್ಲಿ ಶೂನ್ಯ ಪೀಠ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕೆಂಬ ನನ್ನ ಬಯಕೆ, ದೆಹಲಿಯಲ್ಲಿ ನಮ್ಮ ಧರ್ಮದ ಕೇಂದ್ರವೊಂದನ್ನು ಸ್ಥಾಪಿಸಬೇಕೆಂಬ ನನ್ನ ಸಂಕಲ್ಪ, ಮಹಾರಾಷ್ಟ್ರದಲ್ಲಿ ಧರ್ಮಪೀಠವೊಂದನ್ನು ಸ್ಥಾಪಿಸಬೇಕೆಂಬ ನನ್ನ ಆಕಾಂಕ್ಷೆ ಎಲ್ಲವನ್ನೂ ಪೂರೈಸಿದ ಮಹಾನ್ ಶಕ್ತಿ ನೀವು. ನಿಮ್ಮಂಥ ಶಿಷ್ಯರನ್ನು ಪಡೆದಿರುವುದಕ್ಕಾಗಿ ನನ್ನ ಬಾಳು ಧನ್ಯವಾಯಿತು. ನನ್ನ ಜೀವನ ಸಾರ್ಥಕವಾಯಿತು.

ಬಸವ ಗಂಗೋತ್ರಿಯಲ್ಲಿ 63 ಅಡಿ ಎತ್ತರದ ಗುರುಬಸವ ಪುತ್ಥಳಿಯನ್ನು ನಿರ್ಮಿಸಬೇಕೆಂಬ ಸಂಕಲ್ಪ ನನ್ನದಾಗಿತ್ತು. ಅದು ನನ್ನ ಜೀವಿತದ ಕಾಲದಲ್ಲಿ ನೆರವೇರಿಸಲು ಸಾಧ್ಯವಾಗದಿದ್ದರೂ ಬಸವ ಕಲ್ಯಾಣದಲ್ಲಿ ಗುರು ಬಸವಣ್ಣನವರ 108 ಅಡಿ ಪುತ್ಥಳಿಯನ್ನು ಸ್ಥಾಪಿಸಿ ಗುರು ಬಸವಣ್ಣನವರನ್ನು ಹಾಗು ಅವರ ತತ್ವಗಳನ್ನು ಜಗದ್ವಿಖ್ಯಾತ ಮಾಡಲು ಹೊರಟಿರುವ ನನ್ನ ಧೀಮಂತ ಶಿಷ್ಯರು ನೀವು.

ಅನೇಕ ಪ್ರವಚನಕಾರರನ್ನು, ಜಂಗಮರನ್ನು ತಯಾರಿಸಿ ಧರ್ಮ ಪ್ರಚಾರಕ್ಕೆ ದಂಡು ದಂಡಾಗಿ ಕಳುಹಿಸಿಕೊಡಬೇಕು ಎನ್ನುವುದು ನನ್ನ ಹೃದಯಾಂತರಾಳದ ಬಯಕೆಯಾಗಿತ್ತು. ಅದರಂತೆ ಇಂದು ನೀವು ಅನೇಕ ಜಂಗಮ ಮೂರ್ತಿಗಳನ್ನು ತರಬೇತಿಗೊಳಿಸಿ ಅವರ ಮೂಲಕ ಧರ್ಮ ಪ್ರಚಾರ ಮಾಡುತ್ತಿರುವ ವೈಖರಿಯನ್ನು ಕಂಡು ತುಂಬಾ ಹರ್ಷಗೊಂಡಿದ್ದೇನೆ. ಸಮ್ಮೇಳನಗಳನ್ನು ಮಾಡುವಾಗ ಜ್ಯೋತಿ ಯಾತ್ರೆ ಹೊರಡಿಸಿ, ನಾಡಿನಾದ್ಯಂತ ಬಸವ ಬೆಳಗನ್ನು ಪಸರಿಸುವ ಹೊಸ ಪದ್ಧತಿಯನ್ನು ನೋಡಿ ಅತ್ಯಂತ ಸಂತೋಷಗೊಂಡಿದ್ದೇನೆ. ಇದೆಲ್ಲವನ್ನು ನೋಡಿದಾಗ ಒಬ್ಬ ಸಮರ್ಥ ಶಿಷ್ಯೆಯನ್ನು ಪಡೆದ ಧನ್ಯತಾ ಭಾವ ನನ್ನಲಿದೆ. ಇಂದಿನ ಕಾಲದಲ್ಲಿ ಸಮರ್ಥವಾದ, ಜ್ಞಾನಿಯಾದ, ನಿಷ್ಠಾವಂತರಾದ ಶಿಷ್ಯಂದಿರನ್ನು ಪಡೆಯಲು ಪುಣ್ಯಮಾಡಿರಬೇಕು ಎನಿಸುತ್ತದೆ. ಹಾಗೆಯೇ ನಾನು ಮಾಡಿರುವ ಪುಣ್ಯವೋ, ಗುರು ಬಸವಣ್ಣನವರ ಅನುಗ್ರಹವೋ, ಗುರು ಬಸವಣ್ಣನವರು ಅಕ್ಕಮಹಾದೇವಿಯವರನ್ನು ಪಡೆದಂತೆ, ಅರವಿಂದರು ಶ್ರೀಮಾತೆಯವರನ್ನು ಪಡೆದಂತೆ ನಾನು ನಿಮ್ಮನ್ನು ಪಡೆದೆ.

ನೀವು ಮಾಡುವ ಪ್ರತಿಯೊಂದು ಕಾರ್ಯವೂ ನನಗೆ ಬಹುವಾಗಿ ಮೆಚ್ಚುಗೆಯಾಗಿದೆ. ಗುರುಬಸವಣ್ಣನವರ ಮೋಹದ ಮಗಳಾಗಿ, ಅವ್ವೆ ನೀಲಾಂಬಿಕೆಯ ಮುದ್ದಿನ ಮಗಳಾಗಿ ಅಕ್ಕಮಹಾದೇವಿಯ ಪ್ರೀತಿಯ ತಂಗಿಯಾಗಿ ನನ್ನ ಸಂಕಲ್ಪಗಳ ಸಾಕಾರ ಮೂರ್ತಿಯಾಗಿ ಕನ್ನಡನಾಡಿನ ವರಕುವರಿಯಾಗಿ, ಭಾರತ ದೇಶದ ಹೆಮ್ಮೆಯ ಪುತ್ರಿಯಾದ ತಾವು ನೂರಾರು ವರ್ಷಗಳ ಕಾಲ ಆರೋಗ್ಯಯುತವಾಗಿ ಬಾಳಿ ಗುರುಬಸವಣ್ಣನವರ ಹಾಗು ಆದಿ ಶರಣರ ಸಂಕಲ್ಪಗಳೆಲ್ಲವನ್ನೂ ಪೂರೈಸುವಂತಾಗಲೆಂದು ನಿಮ್ಮ 64ನೆಯ ಜನ್ಮದಿನದ ಶುಭ ಸಂದರ್ಭದಲ್ಲಿ ಆಶೀರ್ವಾದಗಳೊಂದಿಗೆ ಶುಭ ಹಾರೈಸುವ

ನಿಮ್ಮ ಅಪ್ಪಾಜಿ

ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿ.

The Divine light

Dazzle, dazzle divine star,
Basava's dear daughter you are,
Up above all the saints,
Like a beacon light you are!
When the honesty is facing death,
When the vice has reached zenith,
Then you showered powerful light,
Dazzle, Dazzle all the night,

-Dr. Manikrao Dhanashri, Gulbarga

ವಚನ ದುಂದುಭಿ – 22

1. ಲಿಂಗ ಪ್ರಾಣಿಯೆಂದು ಯಾರನ್ನು ಕರೆಯುತ್ತಾರೆ?
2. ಲಿಂಗಪ್ರಾಣಿಯೆನ್ನುವ ವಿಶೇಷಣ ಯಾರಿಗೆ ಅನ್ವಯಿಸುತ್ತದೆ?
3. ಷಡ್‌ದರ್ಶನಗಳು ಯಾವುವು?
4. ಷಡ್ಗುಣ ಸಂಪದಗಳಾವುವು?
5. ಪಂಚಾಗ್ನಿಗಳು ಯಾವುವು?
6. "ಅಯ್ಯಾ ನಿಮ್ಮ ಶರಣರನಗಲುವ ಧಾವತಿಗಿಂತ ಸಾವುದೇ ಲೇಸಯ್ಯಾ" ಇದು ಯಾರ ವಚನ?
7. ಲಿಂಗದೇವನು ಯಾವ ಯಾವ ರೂಪಗಳಲ್ಲಿ ಭಕ್ತನೆಡೆಗೆ ಬಂದು ಉದ್ಧರಿಸುತ್ತಾನೆ?
8. "ಕಾಣಬಹುದೆ ಪರುಷದ ಗಿರಿ ಅಂಧಕಂಗೆ?
ಅರಿಯಬಹುದೆ ರಸದ ಭಾವಿ ನಿರ್ಭಾಗ್ಯಂಗೆ?
ತೆಗೆಯ ಬಹುದೆ ಕಡವರವು ದರಿದ್ರಂಗೆ?" ಇದು ಯಾರ ವಚನ?
9. "ನಿಮ್ಮ ಶರಣರ ಚೆಮ್ಮಾವುಗೆಗೆ ಪೃಥ್ವಿ ಸಮಬಾರದಯ್ಯ" ಎನ್ನುವ ವಚನವನ್ನು ಗುರು ಬಸಣ್ಣನವರು ಯಾವ ಸಂದರ್ಭದಲ್ಲಿ ಹೇಳಿದ್ದಾರೆ?
10. ಒಬ್ಬ ವ್ಯಕ್ತಿಯನ್ನು ಲಿಂಗಾಯತ ಎಂದು ಕರೆಯಲಿಕ್ಕೆ ಪ್ರಥಮ ಆಧಾರ ಯಾವುದು?

ವಚನ ದುಂದುಭಿ – 21ರ ಸರಿ ಉತ್ತರಗಳು

1. ಭಕ್ತಸ್ಥಲ 2. ನಿತ್ಯ ಲಿಂಗಾರ್ಚನೆಯೆ ಗಾರುಡ. 3. ನಿದ್ರೆ, ಭಯ, ಹಸಿವು, ತೃಷೆ, ಮೈಥುನ ಮುಂತಾದ ದೈಹಿಕ ಉಪಾಧಿಗಳು. 4. ಗುರು ಬಸವಣ್ಣನವರ ಮನದಲ್ಲಿ ಬಾಲ್ಯದಲ್ಲಿ ಕ್ರಾಂತಿಯ ಬೀಜ ಬಿತ್ತಿದುದಕ್ಕಾಗಿ 5. "ಹರಗಣ ಪಂಕ್ತಿಯ ನಡುವೆ ಕುಳ್ಳಿರ್ದು ನಾನು ಒಡೆಯತನದ..." ಎನ್ನುವ ವಚನದಲ್ಲಿ 6. ಕಲ್ಲತಾಗಿದ ಮಿಟ್ಟೆಯಂತಾಗುವರು.

7. ಅಂಗವೆಂದಡೆ ಲಿಂಗದೊಳಡಗಿತ್ತು; ಲಿಂಗವೆಂದಡೆ ಅಂಗದೊಳಡಗಿತ್ತು.
ಅಂಗದೊಳಡಗಿದ ಲಿಂಗವನೆ ಕಂಗಳಲ್ಲಿ ಹೆರೆಹಿಂಗದೆ ನೋಡಿದಡೆ,
ಮಂಗಳದ ಮಹಾಬೆಳಗು ಕಾಣಿಸಿತ್ತು. ಇಂತಪ್ಪ ಮಂಗಳದ
ಮಹಾಬೆಳಗ ತೋರಿದ ಶರಣರಂಘ್ರಿಗೆರಗಿ ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

8. ಪ್ರಸಾದವನ್ನು ಅಗೌರವದಿಂದ ಕಂಡಾಗ ಆಗುವ ದೋಷ. 9. ಸಂಸಾರ ಹೇಯಸ್ಥಲದ ನಂತರ 10. ಕೇವಲ ತಿನ್ನುವಾಗ ಲಿಂಗಕ್ಕೆ ನೈವೇದ್ಯ ಮಾಡಿ ಉಳಿದ ಸಮಯದಲ್ಲಿ ಲಿಂಗವನ್ನು ಮರೆಯುವ ವ್ಯಕ್ತಿ ಅರ್ಪಿಸುವ ಪ್ರಸಾದ. 11. ಗುರು ಚೆನ್ನಬಸವಣ್ಣನವರನ್ನು. 12. ಅಲ್ಲಮಪ್ರಭುದೇವರು ಸಿದ್ಧರಾಮಯ್ಯದೇವರಿಗೆ 13. ಅಲ್ಲಮ ಪ್ರಭುದೇವರು ಅಕ್ಕಮಹಾದೇವಿಯವರಿಗೆ. 14. ಶಂಭು ಸೋಮನಾಥ ಲಿಂಗ
15. ನಗೆಯ ಮಾರಿತಂದೆ

ವಚನ ದುಂದುಭಿ – 22ರ ಸರಿ ಉತ್ತರಗಳು

1. ಇಷ್ಟಲಿಂಗವನ್ನೇ ಪ್ರಾಣವನ್ನಾಗಿ ಮಾಡಿಕೊಂಡ ಶರಣನಿಗೆ
2. ಅನಿಮಿಷಯೋಗಿಯವರಿಗೆ 3. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸ, ಉತ್ತರ ಮೀಮಾಂಸ 4. ಕ್ಷಮೆ, ದಮೆ, ಶಾಂತಿ, ಸೈರಣೆ, ಸತ್ಯ, ನಿತ್ಯ
5. ವಡಬಾಗ್ನಿ, ಮಂದಾಗ್ನಿ, ಉದರಾಗ್ನಿ, ಶೋಕಾಗ್ನಿ, ಕಾಮಾಗ್ನಿ 6. ಅಕ್ಕಮಹಾದೇವಿ
7. ಗುರು, ಲಿಂಗ, ಜಂಗಮ 8. ಗುರು ಬಸವಣ್ಣನವರ ವಚನ 9. ಹರಳಯ್ಯನವರು ತಮ್ಮ ಮೈ ಚರ್ಮದ ಚೆಮ್ಮಾವುಗೆಗಳನ್ನು ಗುರು ಬಸವಣ್ಣನವರಿಗೆ ಅರ್ಪಿಸಲು ಹೋದಾಗ 10. ದೀಕ್ಷೆಯ ಮೂಲಕ ಇಷ್ಟಲಿಂಗ ಧಾರಣೆ ಮಾಡಿಕೊಂಡಿರುವುದು

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ


ಪ್ರಾರೂಪ 4 (ವಿಧಿ 8)

1. ಪ್ರಕಟಣೆಯ ಸ್ಥಳ	ಬೆಂಗಳೂರು
2. ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3. ಮುದ್ರಕರ ಹೆಸರು	ಶ್ರೀನಿವಾಸ
ಭಾರತದ ಪ್ರಜೆಯೆ?	ಹೌದು
ವಿಳಾಸ	ಉಷಾ ಪ್ರಿಂಟರ್ಸ್ ಬೆಂಗಳೂರು.
4. ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಭಾರತದ ಪ್ರಜೆಯೆ ?	ಹೌದು
ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5. ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
ಭಾರತದ ಪ್ರಜೆಯೆ?	ಹೌದು
ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6. ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ	ವಿಶ್ವ ಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)
ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.16-3-2009

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010



ಶರಣ ನುಲಿಯ ಚಂದಯ್ಯನವರು

CPMG/KA/BGW-30/2009-2011 WPP(W)

